A.—Sri T. CHANNIAH (Minister for Public Health and Local Self-Government).—

(a), (b) and (c)—

No loan has been sanctioned to Ramasamudra Municipality. This Municipality was amalgamated with Chamarajanagar Municipality with effect from 21st April 1954. A comprehensive water supply scheme for Chamarajanagar-Ramasamudra Municipality estimated to cost Rs. 12,60,300 as agreed to by the Municipal Council in July 1955, was sanctioned by Government in their Order No. L. 14904-09—ML. 48-55-52, dated 22nd February 1956, the entire amount being advanced as loan by Government subject to the usual conditions.

Trade Commissioner in London.

Q.—559. Sri S. SRINIVASA IYENGAR (T.-Narasipur).—

Will the Government be pleased to state :—

(a) the nature of work done by the Trade Commissioner at London in the year 1954-55 ;

(b) the total amount of money spent (1) for establishment, (2) for other expenses, during the year 1954-55 ;

(c) whether the office of the High Commissioner, India, can be entrusted with this work ?

A.—Sri H. M. CHANNABASAPPA (Minister for Industries).—

(a) (1) Canvassing, booking and finanlisation of sandalwood oil business in the U. K., Europe, the U.S.A, and South America.

(2) Circulation of enquiries for tenders and quotations for the various Departments and Industries of the Government throughout the world, on behalf of the Stores Purchase Committee and the Mysore Iron and Steel Works; and later, when orders are placed, to watch for their manufacture and prompt delivery, arrange for payment, shipment, insurance, etc., so that goods are received on the spot in good time.

		Rs.
(b) (1) Establishment	£ 4,317-8-10 or	57,566
(2) Other expenses	£ 1,917-13-11 or	25,136
Total	...	82,702

(c) No.

BUDGET FOR 1956-57.

Demands for Grants.

Mr. DEPUTY SPEAKER.—Demand Nos. 2, 3, 5 and 17 will be taken up to-day.

DEMAND NO. 2—STATE EXCISE.

8. STATE EXCISE DUTIES.

Mr. DEPUTY SPEAKER.—Motion moved :

"That a sum not exceeding Rs. 18,23,000 be granted to the Government to defray the charges which will come in course of payment during the year ending 31st day of March 1957, in respect of 'State Excise Duties'."

Shall we fix up some time limit for each demand ?

HON'BLE MEMBERS.—Yes.

Mr. DEPUTY SPEAKER.—We shall fix the time as follows :—

Demand No. 2—State Excise Duties : 1½ hours upto 5 o'clock.

Demand No. 3—Stamps : 15minutes,

Demand No. 5—Registration : 15 minutes.

Demand No. 17—Scientific Departments : 30 minutes.

3 P.M.

*Sri M. PALANIYAPPAN (Ulsoor).—Sir, the policy of the Government with regard to the introduction of prohibition in the State needs the attention of this House. For the last three years or more, this House has been urging time

and again for the introduction of prohibition throughout the State.

Mr. DEPUTY SPEAKER.—The time limit for each member is ten minutes.

Sri M. PALANIYAPPAN.—Every member has shown his anxiety to have prohibition introduced throughout the State. Repeatedly we have been requesting the Government on the floor of the Hosue and outside to introduce prohibition. But as we could see from the answers given by the Government, for want of revenue, they are delaying it. When prohibition was first introdnced, in order to make up the revenue, Government introduced Sales-tax. But the Government has had the advantage of both the Sales-tax and the Excise Revenue. They are utilising the revenue derived from the Sales-tax, and also the revenue derived from the Excise. The Government are getting a revenue from the wet areas which is equal to the total revenues they were deriving previous to the introduction of prohibition. When we have accepted a certain principle—the principle of introducing prohibition all over the State—in the interests of the people, the financial aspect should not loom large in implementing the policy. Even in the Constitution of India, it is clearly stated. It is also one of the accepted policies of the party that rules the country to-day. Being a member of that party, I urge the Government to introduce prohibition in the remaining parts of the State also. I would also suggest the nationalisation of the Bangalore Transport Company and one or two such other items to compensate the revenue they may lose for introducing prohibition. It would be better that the Government considers it very seriously to introduce prohibition throughout the State.

Further, it is an urgent need to note how many excise contractors are debtors to the Government. Government before allowing the contractor to bid in the auction, or confirming the tendered bid on the excise contractor, should take every precaution to see that the contractor produces the solvency certificate, the income-tax clearance certificate and such other certificates. But after the end of the year, when the contractor finishes the contract period, we see huge sums of money being accumulated as arrears to be paid by the contractor to the Government. How is this allowed? I do not know whether it is due to the slackness on the part of the Department or the officers in charge who are responsible for collecting the revenue. Every month it is not possible for every contractor to be in arrears provided the Department insists that they pay the revenue due. But we see almost every contractor owing huge sums of money at the end of the year. This has become a regular feature. Government has not taken any care to see that this kind of thing does not exist or repeated.

Sir, coming to the next point, namely, the situation of the toddy or arrack shop in the centre of the City, I have been requesting Government to see that these toddy shops are situated outside the City limits. As one of my friends remarked, it has become the fashion of the day to have these shops in the heart of the City. I wish to bring to the notice of the Government the situation of the toddy shop in Seppings Road, Civil Station. People in the locality have been approaching the concerned authorities to have the same removed. I have also requested the Government to remove this toddy shop outside the City limits. On one side we see a beautiful bazaar, on another side a cinema house and a temple on another side, and in the centre is the toddy shop. No gentleman could pass through that side. Taking these factors into consideration, I urge the Government to remove this shop from that place. Let us not have the toddy shops in the heart of the City as it vitiates the atmosphere. Sir, the arrack shops in Thimmaiah Road and Broadway Road in the Civil Station is another eyesore and a nuisance. In the beautiful city of Bangalore, these places have become eyesores. I earnestly request the Government to remove these shops away from the City and do good to the people.

(*Many members rose*).

Mr. DEPUTY SPEAKER.—Sri Sivappa.

Sri R. ANANTARAMAN (Chamarajapet).—Those who have not spoken on the Budget or the Rajpramukh's address should be given a chance, Sir.

Mr. DEPUTY SPEAKER.—Was that the understanding ?

Sri R. ANANTARAMAN.—Yes, Sir.

Mr. DEPUTY SPEAKER.—I have called Sri G. Sivappa and Sri Y. M. Chandrasekhariah. They will have the first preference. Those who have tabled the cut motions must certainly be given the first chance. Sri Sivappa.

*ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, ಪಾನನಿರೋಧದ ವಿಚಾರವಾಗಿ ಎರಡುಮಾತುಗಳನ್ನು ಹೇಳಬೇಕೆಂದು ಅಪೇಕ್ಷೆಪಡುತ್ತೇನೆ. ಪಾನನಿರೋಧವು ಸಂಸ್ಥಾನದ ಕೆಲವು ಜಿಲ್ಲೆಗಳಲ್ಲಿ ಜಾರಿಯಲ್ಲಿದೆ. ಅಂಥ ಜಿಲ್ಲೆಗಳಲ್ಲಿ ನಮ್ಮ ಚಿತ್ರದುರ್ಗ ಜಿಲ್ಲೆಯೂ ಒಂದು. ಪಾನನಿರೋಧವನ್ನು ಜಾರಿಗೆ ತಂದ ಮೇಲೆ ಸ್ವಲ್ಪ ಅನುಕೂಲವಾಗಿರಬಹುದು. ಆದರೆ ಸರ್ಕಾರದವರು ಯಾವ ಉದ್ದೇಶದಿಂದ ಇದನ್ನು ಜಾರಿಗೆ ತಂದರೋ ಅದು ಎಷ್ಟರಮಟ್ಟಿಗೆ ಸಾರ್ಥಕವಾಗಿದೆ ಎಂಬ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ.

ಮೊದಲನೆಯದಾಗಿ, ಪಾನನಿರೋಧವನ್ನು ಸಂಪೂರ್ಣವಾಗಿ, ಸಮರ್ಪಕವಾದ ರೀತಿಯಲ್ಲಿ ನಡೆಸಿಕೊಂಡು ಬರುತ್ತೇವೆಂದು ಹೇಳುತ್ತಿದ್ದಾರೆ. ಇದರಿಂದ ಅನುಕೂಲವುಂಟಾಗಿರಬಹುದು, ಬಹುತೇಕ ಮಂದಿ ಕುಡಿಯುವುದನ್ನು ಬಿಟ್ಟಿರಬಹುದು. ಆದರೆ (illicit liquor) ಕಳ್ಳಭಟ್ಟಿ ಸಾರಾಯಿ ತಯಾರುಮಾಡತಕ್ಕದ್ದು ಇತ್ತೀಚೆಗೆ ಜಾಸ್ತಿಯಾಗಿದೆ. ಸರ್ಕಾರದ ಇಲಾಖೆಗಳೂ ಸಹ ಇದಕ್ಕೆ ಸಹಾಯಕವಾಗಿವೆ ಎಂದು ಯಾವ ಸಂದೇಹವೂ ಇಲ್ಲದೆ ಹೇಳಬಯಸುತ್ತೇನೆ. ಕಳ್ಳಭಟ್ಟಿ ಸಾರಾಯಿ ತಯಾರಿಕೆಯು ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಖಾಯಂ ಆಗಿ ಬೆಳೆದುಕೊಂಡು ಬಂದಿರತಕ್ಕ ವ್ಯವಸ್ಥೆಯಾಗುತ್ತಿದೆ ಎಂಬ ಸಂಶಯ ಬರುತ್ತಿದೆ. ಏಕೆಂದರೆ ಕೆಲವು ಹಳ್ಳಿಗಳಲ್ಲಿ ಹೆಚ್ಚಿನ ರೀತಿಯಲ್ಲಿ ಇದನ್ನು ತಯಾರುಮಾಡುತ್ತಿದ್ದಾರೆ. ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸುವುದಕ್ಕೂ ಸಹ ಒಂದು ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಈ ವಿಷಯ ಪೋಲೀಸು ಇಲಾಖೆಗೂ ತಿಳಿದಿದೆ, ಇತರ ನೌಕರವರ್ಗದವರಿಗೆ, ಉನ್ನತಮಟ್ಟದ ನೌಕರರಿಗೆ ತಿಳಿದಿದೆ. ಇದರಲ್ಲಿ ಸ್ವಲ್ಪವೂ ಉತ್ಪ್ರೇಕ್ಷೆ ಇಲ್ಲ. ಕೆಲವು ಪೋಲೀಸು ಅಧಿಕಾರಿಗಳು ಕಳ್ಳಭಟ್ಟಿ ಸಾರಾಯಿ ತಯಾರುಮಾಡತಕ್ಕವರಲ್ಲಿ ಕಮಿಷನ್ ಇತ್ಯಾದಿ ವ್ಯವಸ್ಥೆಗಳನ್ನು ಮಾಡಿಕೊಂಡು ಇರುತ್ತಾರೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಇದು ಒಂದು ವ್ಯವಸ್ಥಿತವಾದ ರೀತಿಯಲ್ಲಿ ತಯಾರಾಗುತ್ತದೆ. ಪ್ರೊಡಕ್ಷನ್ (ತಯಾರಿಕೆ) ಮತ್ತು ಡಿಸ್ಟ್ರಿಬ್ಯೂಷನ್ (ಹಂಚಿಕೆ) ಸಹ ಒಂದು ವ್ಯವಸ್ಥಿತವಾದ ರೀತಿಯಲ್ಲಿ ನಡೆಯುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಸರ್ಕಾರವನ್ನು ಟೀಕಿಸಬೇಕು ಎಂಬ ದೃಷ್ಟಿಯಿಂದ ನಾನು ಇದನ್ನೆಲ್ಲ ಹೇಳುತ್ತಿಲ್ಲ. ಸರಿಯಾದ ರೀತಿಯಲ್ಲಿ ಪಾನನಿರೋಧವನ್ನು ಜಾರಿಗೆ ತರಬೇಕು, ಕಳ್ಳಭಟ್ಟಿ ಸಾರಾಯಿ ತಯಾರಿಕೆಯನ್ನು ನಿಲ್ಲಿಸುವುದಕ್ಕೆ ಪ್ರಯತ್ನಮಾಡಬೇಕು, ಎನ್ನುವ ದೃಷ್ಟಿಯಿಂದ ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಈ ವಿಚಾರದಲ್ಲಿ ಟೀಕೆಮಾಡುತ್ತಿದ್ದೀರಲ್ಲ, ನಿಮ್ಮ ಸಲಹೆ ಏನು ಎಂದು ಕೇಳಬಹುದು. ಇದಕ್ಕೆ ಹೆಚ್ಚಿನ ರೀತಿಯಲ್ಲಿ ಪೋಲೀಸಿನವರು ಸಹಾಯಕರಾಗಿದ್ದಾರೆ. ಯಾವ ಅಧಿಕಾರಿಗಳಿಗೆ ಪಾನನಿರೋಧದಲ್ಲಿ ನಂಬಿಕೆ ಇಲ್ಲವೋ ಅಂಥವರು ಪೋಲೀಸು ಇಲಾಖೆಯಲ್ಲಿರುವುದರಿಂದ ಅವರಿಂದ ಇದನ್ನು ತಡೆಯುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯವೆಂಬ ಪ್ರಶ್ನೆ ಬರುತ್ತದೆ. ನಾನು ಒಂದು ಸಲ ಒಂದು ಸಭೆಗೆ ಹೋಗಿದ್ದೆ. ಮೂರು ನಾಲ್ಕು ಸಾವಿರ ಜನರು ಸೇರಿದ್ದರು. ಈ ಸಭೆ ಯಾವುದು ಎಂದರೆ ಹರಿಜನ ಸಮ್ಮೇಳನ ಮತ್ತು ಸಂಸ್ಕೃತಿ ಪ್ರಚಾರ ಎರಡನ್ನೂ ಸೇರಿಸಿ ಸಭೆಮಾಡಿದ್ದರು. ಅಲ್ಲಿ ಮೆರವಣಿಗೆ ಹೊರಟಾಗ ಅದರಲ್ಲಿ ಅಧಿಕಾರವರ್ಗದವರು, ನಾವು ಮೊದಲ್ಗೊಂಡು ಎಲ್ಲರೂ ಇದ್ದರು. ಜನರು ಪ್ರಜ್ಞೆ ಇಲ್ಲದಂತೆ ಕುಡಿದು ಬಂದಿದ್ದರಿಂದ ಅದರ ಹದವೇ ಕೆಟ್ಟು ಹೋಯಿತು. ಅದರ ವಿವರಗಳನ್ನೆಲ್ಲ ಬಿಚ್ಚಿ ಹೇಳುವುದಕ್ಕೆ ಸಾಧ್ಯವಿಲ್ಲ. ಬೇಕಾದರೆ ಎಲ್ಲವನ್ನೂ ಬಿಚ್ಚಿ ಹೇಳುವುದಕ್ಕೆ ತಯಾರಾಗಿದ್ದೇನೆ. ಅದು ಈಗ ಅನಾವಶ್ಯಕ. ನಾವು ಮುಂದೆ ಹೋಗುತ್ತಿದ್ದೆವು. ವಾಸನೆ ತಡೆಯುವುದಕ್ಕೆ ಸಾಧ್ಯವಾಗಲಿಲ್ಲ. ನೋಡಿ ಸ್ವಾಮಿ ಜನರು ಕುಡಿದುಕೊಂಡು ಹೋಗುತ್ತಿದ್ದಾರೆ ಎಂದರೆ ಅಧಿಕಾರಿಗಳೂ ಸಹ ನಿಸ್ಸಹಾಯಕರಾಗಿ ಏನು ಮಾಡುವುದು ಎಂದು ಉತ್ತರ ಕೊಟ್ಟರು. ಇದು ನಿಜವಾದ ಅಂಶ. ಉತ್ಪ್ರೇಕ್ಷೆ ಅಲ್ಲ. ಪರಿಸ್ಥಿತಿ ಈ ರೀತಿ ಇರಬೇಕಾದರೆ ತಾವು ಹೇಗೆ control ಮಾಡಬೇಕು ಎನ್ನುವುದನ್ನು ಯೋಚನೆಮಾಡಬೇಕಾಗಿದೆ. ಈ ವಿಷಯವನ್ನು ವರ್ಷವರ್ಷವೂ ಹೇಳುತ್ತಿದ್ದೇವೆ. ಮತ್ತು ದೇಶದ ಹಿತದೃಷ್ಟಿಯಿಂದ ಪ್ರತಿಬಂಧಿಸಬೇಕು ಎಂದೂ ಹೇಳುತ್ತಿದ್ದೇವೆ. ಆದರೆ ಏನೂ ಪ್ರಯೋಜನವಾಗಿಲ್ಲ. ಮುಂದಿನ ವರ್ಷವೂ ಇದೇ ರೀತಿ ಟೀಕೆ ಮಾಡಬಹುದು. ಅದಕ್ಕಾಗಿ ನೀವು ಸರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳದೆ ಇದ್ದರೆ ಯಾವ ಉದ್ದೇಶದಿಂದ ಪಾನನಿರೋಧವನ್ನು ಜಾರಿಗೆ ತಂದಿದ್ದೀರೋ ಆ ಉದ್ದೇಶ ಖಂಡಿತವಾಗಿಯೂ ಸಾರ್ಥಕವಾಗುವುದಿಲ್ಲ. ಆದುದರಿಂದ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳಬೇಕಾಗಿದೆ.

ಯಾರಾದರೂ ಕುಡಿದಿದ್ದಾರೆಂಬ ಅನುಮಾನ ಬಂದು, ಸ್ವಲ್ಪ ವಾಸನೆ ಇದ್ದು, ಡಾಕ್ಟರುಗಳ ಸರ್ಟಿಫಿಕೇಟಿನ ಮೇಲೆ 10 ರೂಪಾಯಿ, 15 ರೂಪಾಯಿ 20 ರೂಪಾಯಿ ಹೀಗೆ ಜುಲ್ಮಾನೆಹಾಕುತ್ತಾರೆ. ಆದರೆ ಯಾವ ಅಧಿಕಾರಿಗಳು ಇದಕ್ಕೆ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆಯೋ ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಪೋಲೀಸು ಇಲಾಖೆಯಲ್ಲಿ ಅವರುಗಳ ಸಂಬಳ ಸಾರಿಗೆ ಕಡಿಮೆ ಇದೆ. ಪಾನನಿರೋಧವು ಜಾರಿಯಲ್ಲಿರುವುದರಿಂದ ಅವರ ವರಮಾನ ಹೆಚ್ಚಿ ಅವರು ಉತ್ತಮರೀತಿಯಲ್ಲಿರುವುದಕ್ಕೆ ಅನುಕೂಲವಾಗಿದೆ ಎಂದರೆ ತಪ್ಪಾಗಲಾರದು. ಅವರ ಮಟ್ಟ ಹೆಚ್ಚಾಗಿದೆ. ಕಳ್ಳಭಟ್ಟಿ ಸಾರಾಯಿ ತಯಾರಾಗುತ್ತಿರುವುದರಿಂದ ಕಡಿಮೆ ಸಂಬಳ ಬರತಕ್ಕವರು ತಮ್ಮ ವರಮಾನವನ್ನು ಭರ್ತಿಮಾಡಿಕೊಳ್ಳುತ್ತಾರೆ. ಇದನ್ನು ತಪ್ಪಿಸುವ ಪ್ರಯತ್ನಮಾಡಬೇಕು. ಮದ್ಯಪಾನ ಮಾಡಿದವರಿಗೆ ಶಿಕ್ಷೆಕೊಡುವುದು ಹೆಚ್ಚಲ್ಲ. ಯಾರು ಇದಕ್ಕೆ ಸಹಾಯಕರಾಗಿರುತ್ತಾರೆಯೋ ಅಂಥವರಿಗೆ ಸಮಾಜದಲ್ಲಿ ಒಂದು ಪರಿಣಾಮ ಉಂಟಾಗುವ ರೀತಿಯಲ್ಲಿ ಶಿಕ್ಷೆ ಕೊಟ್ಟರೆ ಹೆಚ್ಚಿನ ಸಹಾಯವಾಗುತ್ತದೆ ಎಂದು ಹೇಳುತ್ತೇನೆ.

ಪಾನನಿರೋಧವನ್ನು ತೆಗೆಯಬೇಕು, ಇದು ಅನಾವಶ್ಯಕವೆಂದು ಹೇಳುವುದಿಲ್ಲ. ಆದರೆ ಸರಿಯಾದ ರೀತಿಯಲ್ಲಿ ಜಾರಿಗೆ ತರಬೇಕು ಎಂಬ ಉದ್ದೇಶದಿಂದ ಹೇಳುತ್ತಿದ್ದೇನೆ. ಪಾನನಿರೋಧದ ವಿಚಾರದಲ್ಲಿ ಏನು ಪ್ರಚಾರ ಮಾಡುತ್ತಿದ್ದಾರೋ ಅದು ಸರಿಯಾಗಿ, ವ್ಯವಸ್ಥಿತ ರೀತಿಯಲ್ಲಿ, ಪರಿಣಾಮಕಾರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಸಂಸ್ಕೃತಿ ಪ್ರಚಾರಕ್ಕಾಗಿ ಖರ್ಚು ಮಾಡುತ್ತಿರುವ ಹಣವನ್ನು ಪಾನನಿರೋಧವನ್ನು ಉತ್ತಮ ರೀತಿಯಲ್ಲಿ ಜಾರಿಗೆ ತರಲು ಖರ್ಚುಮಾಡಿದರೆ ಬಹಳ ಅನುಕೂಲವಾಗುತ್ತದೆಂದು ನನಗನ್ನಿಸುತ್ತದೆ. ಒಂದು ಸಲ ಶ್ರೀಮಾನ್ ರಾಜಗೋಪಾಲಾಚಾರಿಯವರು ಈ ವಿಷಯದಲ್ಲಿ ಏನು ಹೇಳಿದ್ದಾರೆಂಬುದು ಜ್ಞಾಪಕವಿದೆ. ಎಷ್ಟೋ ವಿಷಯಗಳಲ್ಲಿ ಅವರ ಮಾರ್ಗವನ್ನು ಅನುಸರಿಸುತ್ತಿರುವಾಗ ಈ ವಿಚಾರದಲ್ಲಿಯೂ ಅವರನ್ನು ಅನುಸರಿಸಬಹುದು ಎಂದು ಹೇಳುತ್ತೇನೆ. ಇಷ್ಟು ಮಾತ್ರ ಹೇಳಿ ಪಾನನಿರೋಧವನ್ನು ಪ್ರತಿ ವರ್ಷವೂ ಸಹ ಹೆಚ್ಚು ಜಿಲ್ಲೆಗಳಲ್ಲಿ ಜಾರಿಗೆ ತರಬೇಕು ಎಂದು ಹೇಳುತ್ತ, ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಚೆನ್ನಯ್ಯ (ಜನಾರೋಗ್ಯ ಮತ್ತು ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ಹಂಜನ್ ಸಮ್ಮೇಳನದಲ್ಲಿ ಅನೇಕರು ಕುಡಿದು ಮೆರವಣಿಗೆಯಲ್ಲಿ ಹೋಗುತ್ತಿದ್ದರು ಎಂದು ಹೇಳಿದರು. ಯಾರುಯಾರು ಕುಡಿದಿದ್ದರೋ ಅವರುಗಳನ್ನು ತಕ್ಷಣವೇ ಪೋಲೀಸರಿಗೆ ತೋರಿಸಿ, ಪೋಲೀಸು ಸ್ಟೇಷನಿಗೆ ಕರೆದುಕೊಂಡು ಹೋಗಿ ಕೇಸು ಹಾಕಿಸುವುದಕ್ಕೆ ಪ್ರಯತ್ನಮಾಡಲಿಲ್ಲವೇ?

ಶ್ರೀ ಜಿ. ಶಿವಪ್ಪ.—ಹಾಗೆ ಮಾಡಿದ್ದರೆ ಒಂದು ಊರನ್ನೇ ತೆಗೆದುಕೊಂಡುಹೋಗಬೇಕಾದ ಪರಿಸ್ಥಿತಿ ಇತ್ತು. ತಾವು ಕೇಳಿದ್ದರಿಂದ ಇದರ ವಿವರವನ್ನು ತಮಗೆ ಹೇಳುವುದಕ್ಕೆ ಸಂತೋಷಪಡುತ್ತೇನೆ. ಅವರ ಮೇಲೆ ಕೇಸು ಹಾಕಲು ಪ್ರಯತ್ನಪಟ್ಟಿದ್ದರೆ ನಾವು ಸಭೆಯನ್ನು ಮುಗಿಸಿಕೊಂಡು ಬರುತ್ತ ಇದ್ದೆವೋ ಇಲ್ಲವೋ ಹೇಳುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಒಬ್ಬರನ್ನಲ್ಲ 400-500 ಜನರನ್ನು ಪ್ರಾಸಿಕ್ಯೂಟ್‌ಮಾಡಬೇಕಾಗಿತ್ತು.

ಶ್ರೀ ಹೆಚ್. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಸಂಸ್ಥಾನಾದ್ಯಂತ ಪಾನನಿರೋಧವನ್ನು ಜಾರಿಗೆ ತರಬೇಕು ಎಂದು ಮೊದಲು ಕಾಂಗ್ರೆಸ್ ಸರ್ಕಾರ ಬಂದ ತರುಣದಲ್ಲಿ, 1947-48ರಲ್ಲಿ ಪ್ರತಿ ವರ್ಷವೂ ಒಂದೆರಡು ಜಿಲ್ಲೆಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದು ನಾಲ್ಕೈದು ವರ್ಷಗಳಲ್ಲಿ ಸಂಪೂರ್ಣ ಪಾನನಿರೋಧವನ್ನು ಜಾರಿಗೆ ತರುತ್ತೇವೆ ಎಂದು ತೀರ್ಮಾನ ಮಾಡಿದರು. ಅದೇ ರೀತಿಯಾಗಿ ಎರಡು ಮೂರು ವರ್ಷಗಳು ಚುರುಕಿನಿಂದ ಕೆಲಸಮಾಡಿ ಯಾವ ಜಿಲ್ಲೆ ಪಾಪಮಾಡಿತ್ತೋ ಅಲ್ಲಿ ತೆಗೆದುಹಾಕಿ, ಪುಣ್ಯಮಾಡಿದ ಜಿಲ್ಲೆಯಲ್ಲಿ ಇಟ್ಟುಕೊಂಡಿರುವುದು ಯಾವ ಧರ್ಮ? ಯಾಕೆಂದರೆ, ಚಿಕ್ಕಮಗಳೂರು ಜಿಲ್ಲೆಯ ವಿಷಯ ಹೇಳಬೇಕಾದರೆ, ಪಕ್ಕದಲ್ಲಿರುವ ಹಾಸನ ಜಿಲ್ಲೆಯಲ್ಲಿ ಅರಸೀಕೆರೆ ತಾಲ್ಲೂಕು ಬಾಣಾವರದಲ್ಲಿ ಹೆಂಡದ ಅಂಗಡಿಗಳಿವೆ. ಕಡೂರು ತಾಲ್ಲೂಕಿನಿಂದ ಜನರು ಅಲ್ಲಿಗೆ ಹೋಗಿ ಕುಡಿದು ಬಂದರೆ ಕಡೂರಿನಲ್ಲಿ ಜೈಲಗೆ ಹಿಡಿದುಕೊಂಡು ಹೋಗುತ್ತಾರೆ. ಪಕ್ಕದ ಜಿಲ್ಲೆಯಲ್ಲಿ ಅಂಗಡಿ ಇರಬೇಕಾದರೆ ಹೆಂಡವನ್ನು ಕಳ್ಳತನದಲ್ಲಿ ಮಾರಾಟ ಮಾಡಲು ಮುಕ್ಕಾಲು ಮೂರು ವೀಸೆ ಪಾಲು ಜನರು ನಿರತರಾಗುತ್ತಾರೆ. ಇವರು ರಾತ್ರಿವೇಳೆ ನಿದ್ದೆ ಮಾಡುವುದೇ ಇಲ್ಲ. ಹಗಲು ನಿದ್ದೆ ಮಾಡುತ್ತಾರೆ. ಆದುದರಿಂದ ಸಂಸ್ಥಾನಾದ್ಯಂತವೂ ಪಾನನಿರೋಧವನ್ನು ಜಾರಿಗೆ ತರಬೇಕು ಅಥವ ಪೂರ್ತಿ ಇಡಬೇಕು ಎಂದು ಈ ಸಭೆಯಲ್ಲಿಯೂ ಎಷ್ಟೋ ಸಲ ಹೇಳಿದ್ದೇನೆ. ಆದರೂ ಸಹ ಇದರ ಕಡೆ ಅಷ್ಟಾಗಿ ಗಮನ ಕೊಟ್ಟಂತೆ ಕಾಣುವುದಿಲ್ಲ.

ಈಗ ಹೆಂಡಕ್ಕೆ ಬದಲು ಟಾನಿಕ್ ಎಂದು ಷುರುವಾಗಿದೆ. ಅಶ್ವಗಂಧಿ ಟಾನಿಕ್, ಶ್ರೀ ಕೃಷ್ಣ ಟಾನಿಕ್, ಮಹಾತ್ಮಾ ಗಾಂಧಿ ಟಾನಿಕ್ ಎಂದು ಏನೇನೋ ಹೆಸರುಗಳನ್ನು ಮತ್ತು ಔಷಧದ ಹೆಸರುಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ. ಡಾಕ್ಟರ್ ನಾಗನಗೌಡರು ಅಜ್ಜಂಪುರಕ್ಕೆ ಬಂದಿದ್ದ ಕಾಲದಲ್ಲಿ ಅವರಿಗೆ ಇಂಥ ಟಾನಿಕ್ ಸೀಸೆಯೊಂದನ್ನು ಸ್ಯಾಂಪಲ್‌ಗಾಗಿ ತೋರಿಸಿಕೊಡಲಾಯಿತು. ಅದರಮೇಲೆ ಅವರು ಏನು ಕ್ರಮ ತೆಗೆದುಕೊಂಡರೆಂಬುದು ಗೊತ್ತಿಲ್ಲ. ಈ ಟಾನಿಕ್ಕುಗಳಲ್ಲಿ ಸುಮಾರು ಶೇಕಡ 70, 80 ಭಾಗ ಆಲ್ಕೋಹಾಲ್ ಇರುತ್ತದೆ. ಇಂಥದು ಮಾರಾಟವಾಗುತ್ತಿದೆ. ಇದರ ಮಾರಾಟಕ್ಕೆ ಯಾರು ಪರ್ಮಿಟ್ ಕೊಟ್ಟರೋ ದೇವರೇ ಬಲ್ಲ. ಶ್ರೀ ಕೃಷ್ಣ ಪರಮಾತ್ಮ, ಮಹಾತ್ಮಾ ಗಾಂಧಿ, ಹರಿಶ್ಚಂದ್ರ ಎಂದು ಏನೇನೋ ಹೆಸರು ಇಟ್ಟು alcohol ಮಾರತಕ್ಕ ಕಾಲ ಬಂದಿದೆ. ಇದು ಬಹಳ ನಾಚಿಕೆಗೇಡಿನ ವಿಷಯವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಕಡೂರು ಟೌನಿನಲ್ಲಿ, ನಾನು ಇಲ್ಲಿಗೆ ಅಸೆಂಬ್ಲಿಗೆ ಬರುವುದಕ್ಕೆ ಎರಡು-ಮೂರು ದಿನಗಳ ಮುಂಚೆ, ಒಂದು ದಿನ ಸಾಯಂಕಾಲ ಸುಮಾರು ಏಳು ಘಂಟೆ ಸಮಯದಲ್ಲಿ, ನಾನೂ ಮತ್ತು ನನ್ನ ಮಿತ್ರರೊಬ್ಬರೂ ಹೋಗುತ್ತಿದ್ದಾಗ ಒಬ್ಬ ಬಳೆಗಾರ, ಹೆಗಲಮೇಲೆ ಬಳೆಹಾಕಿಕೊಂಡು, ಈ ಟಾನಿಕ್ ಕುಡಿದಿದ್ದು ನಮ್ಮ ಮೇಲೆ ಬಿದ್ದ ಎಂದು ಮೊನ್ನೆತಾನೆ ಹೇಳಿದ್ದೇನೆ. ಇಂಥ ಟಾನಿಕ್ ಎಲ್ಲೆಲ್ಲಿ ಪಾನನಿರೋಧ ಜಾರಿಯಲ್ಲಿದೆಯೋ ಅಲ್ಲೆಲ್ಲ ಮಾರಾಟವಾಗುತ್ತಿದೆ. ನಾನೂ ಒಬ್ಬ ಅಸೆಂಬ್ಲಿ ಸದಸ್ಯನಾಗಿ ಇದನ್ನೆಲ್ಲ ಹೇಳುತ್ತಿದ್ದೇನೆ. ಇಂಥದಕ್ಕೆ ಸರ್ಕಾರದವರು ಗಮನ ಕೊಡದೆ ಇದ್ದರೆ, ಇಂಥ ಟಾನಿಕ್‌ಗಳನ್ನು ಮಾಡಿ ಮಾರುತ್ತಿದ್ದರೆ ಎಷ್ಟು ನಾಚಿಕೆಗೇಡಿನ ಕೆಲಸವಾಗಿದೆ ಎನ್ನಿಸುತ್ತದೆ. ದೇಶದಾದ್ಯಂತ ಪಾನನಿರೋಧವನ್ನು ಜಾರಿಗೆ ಕೊಡಬೇಕು. ಈಗೇನಾಗಿದೆಯೆಂದರೆ ಹೆಂಡ ಹೆಚ್ಚಾಗಿ ಕುಡಿಯುವವರು ಬಿಟ್ಟಿದ್ದಾರೆ; ಗಾಂಧಿ ತತ್ವ ಹೇಳುವುದಕ್ಕೆ ಹೊರಟಿರುವವರು, ಕಾವ್ಯ ಹೇಳುವವರು, ಶ್ರೀ ಕೃಷ್ಣ ಪರಮಾತ್ಮನ ಹೆಸರನ್ನು ಹೇಳುವವರು ಕುಡಿಯುವುದಕ್ಕೆ ಷುರುಮಾಡಿದ್ದಾರೆ. ಇಂಥ ಕಾಲದಲ್ಲಿ ಸರ್ಕಾರದವರು ಈಗಲಾದರೂ ಗಮನ ಕೊಡಬೇಕು. ಒಂದು ಬಾಟಲಿಗೆ ಒಂದು ರೂಪಾಯಿ ಒಂದಾಣೆಯಂತೆ ಟಾನಿಕ್ ಮಾರಾಟವಾಗುತ್ತಿದೆ. ಅನೇಕ ಪೌರಸಭೆಗಳಿಗೆ ಮೊನ್ನೆತಾನೆ ಚುನಾವಣೆ ನಡೆದಿದೆ. ಕಡೂರು ಟೌನಿನಲ್ಲಿ ನಡೆದ ಒಂದು ಉದಾಹರಣೆ ಹೇಳುತ್ತೇನೆ. ಚುನಾವಣೆ ನಡೆದ ದಿವಸ ಈ ಟಾನಿಕ್ ಸುಮಾರು ಐದು ಸಾವಿರ ಸೀಸೆ ಆ ಒಂದು ಟೌನಿನಲ್ಲಿ ಖರ್ಚಾಗಿದೆ. ಗಿರಿ ಎಕ್ಸ್‌ಪ್ರೆಸ್ ಹನ್ನೆರಡು ಘಂಟೆಗೆ ಇಲ್ಲಿಗೆ ಬಂದು ಮೂರು ಘಂಟೆಗಳಿಗೆ ಇಲ್ಲಿಂದ ಹೋಗುತ್ತದೆ. ಅದರಲ್ಲೂ ಈ ಟಾನಿಕ್ ಸಾಗುತ್ತದೆ. ಈ ಟಾನಿಕ್ ಹೆಸರನ್ನು ಹೇಳಿಕೊಂಡು ಕಳ್ಳಬಟ್ಟಿ ಶರ್‌ಫನ್ನೂ ಸರಬರಾಯಿ ಮಾಡುತ್ತಿದ್ದಾರೆ. ಚಿಕ್ಕಮಗಳೂರು, ಕಡೂರು ಕಡೆಗೆ ಜಾಸ್ತಿ ಹೋಗುತ್ತಿವೆ. ಈಗ ಕಳ್ಳಬಟ್ಟಿ ಸಾರಾಯಿನ ಜಾಗದಲ್ಲಿ ಅಶ್ವಗಂಧಿ ಟಾನಿಕ್, ಶ್ರೀ ಕೃಷ್ಣ ಪರಮಾತ್ಮ ಟಾನಿಕ್ ಮುಂತಾದ ಟಾನಿಕ್ಕುಗಳು

(ಶ್ರೀ ವೈ.ಎಂ. ಚಂದ್ರಶೇಖರಯ್ಯ)

ಉಪಯೋಗಿಸಲ್ಪಡುತ್ತಿವೆ. ಆ ಟಾನಿಕ್ಕಿನಲ್ಲಿ ಆಲ್ಕೋಹಾಲ್ ಶೇಕಡ ಸುಮಾರು 70, 80 ರಷ್ಟು ಇದೆ. ಅದು ಬೆಂಗಳೂರಿನಲ್ಲಿ ಖೋಡೆ ಲ್ಯಾಬೋರೇಟರಿಯಲ್ಲಿ ತಯಾರಾಗುತ್ತಿದೆ. ಅದಕ್ಕೆ ಐ.ಜಿ.ಪಿ. ಪರ್ಮಿಷನ್ ಕೊಟ್ಟಿದ್ದಾರೆಂದು ಹೇಳುತ್ತಾರೆ. ಅದನ್ನು ವಿಚಾರಿಸಿ ನಾನು ಸೀಸೆ ತೆಗೆದುಕೊಂಡು ಬಂದು ಡಾಕ್ಟರ ಹತ್ತಿರ ಪರೀಕ್ಷೆ ಮಾಡಿಸಿದ್ದೇನೆ. ಅದಕ್ಕೆ ಸ್ಪಿರಿಟ್ ಕೂಡ ಹಾಕಿದ್ದಾರೆ. ನೆಲದ ಮೇಲೆ ಹಾಕಿ ಹತ್ತಿಸಿದರೆ ಉರಿಯುತ್ತದೆ. ಈಗಲಾದರೂ ಇದನ್ನು ಗಮನಿಸಿ ಸರ್ಕಾರದವರು ದೇಶದಾದ್ಯಂತ ಪಾನನಿರೋಧವನ್ನು ಜಾರಿಗೆ ತರಬೇಕು. ಪಾನನಿರೋಧ ಜಾರಿಯಲ್ಲಿರುವ ಕಡೆ ಈ ಟಾನಿಕ್ಕನ್ನು ಮಾರಲು ಅವಕಾಶ ಕೊಡಬಾರದು. ಜಿಲ್ಲಾಧಿಕಾರಿಗಳು ಸರ್ಟಿಫೈ ಮಾಡಬೇಕು. ಅದನ್ನು ಮಾಡದಿದ್ದರೆ ಯಾರೂ ಕೇಳುವುದಿಲ್ಲ. ನಾವು ಕೇಳುವ ಹಾಗಿಲ್ಲವೆಂದು ಜಿಲ್ಲಾಧಿಕಾರಿಗಳು ಹೇಳುತ್ತಾರೆ. ಜಿಲ್ಲಾಧಿಕಾರಿಗಳ ಗಮನಕ್ಕೂ ಬಾರದೆ ಇಂತಹ ಆಲ್ಕೋಹಾಲ್ ಬೆರೆತಿರುವ ಟಾನಿಕ್ಕನ್ನು ಮಾರುವುದು ಬಹಳ ಶೋಚನೀಯ. ಡಾಕ್ಟರ್ ನಾಗನಗೌಡರಿಗೆ ತೋರಿಸಿ ಸೀಸೆಯನ್ನು ಪರೀಕ್ಷೆ ಮಾಡಿಸಿ ಎಂದು ಹೇಳಿದ್ದೆವು. ಅವರು ಮರೆತರೋ ಏನೋ ಗೊತ್ತಿಲ್ಲ. ಈ ರೀತಿಯಾಗಿ ನಡೆಯುವುದನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಸಾಮಾನ್ಯವಾಗಿ ಪಾನನಿರೋಧ ಜಾರಿಯಲ್ಲಿರುವ ಕಡೆ ಕುಡಿಯದಿರುವವರೂ ಇದ್ದಾರೆ. ಮುಖ್ಯವಾಗಿ ಈ ಟಾನಿಕ್ ಇರುವಾಗ ಯಾರಿಗೂ ಮಾನ ಮರ್ಯಾದೆ ಬರುವ ಹಾಗಿಲ್ಲ. ಸುಮಾರು ಒಂದು, ಒಂದೂವರೆ ವರ್ಷದಿಂದ ಅದರಲ್ಲೂ ಎರಡು ತಿಂಗಳಿಂದೀಚೆಗೆ ಬೆಂಗಳೂರಿಗೆ ಬಂದು ಟಾನಿಕ್ ತೆಗೆದುಕೊಂಡು ಹೋಗುವುದು ಜಾಸ್ತಿಯಾಗಿದೆ. ಅದಕ್ಕೆ ದೇವರ ಹೆಸರು, ದೊಡ್ಡವರ ಹೆಸರು ಇಟ್ಟು ಒಳ್ಳೊಳ್ಳೆಯ ಹೆಸರಿನಿಂದ ಮಾರುವುದಕ್ಕೆ ಅಂಗಡಿಗಳಿಗೆ ಅವಕಾಶ ಕೊಟ್ಟಿರುವುದು ನಾಚಿಕೆಗೇಡು. ಈಗಲಾದರೂ ಎಷ್ಟೇ ಕಷ್ಟ ಬರಲಿ, ಏನೇ ಬರಲಿ ಸಂಸ್ಥಾನಾದ್ಯಂತ ಪಾನನಿರೋಧ ಜಾರಿಗೆ ತರಬೇಕು. ಎರಡು ಕೋಟಿ ರೂಪಾಯಿ ಉತ್ಪತ್ತಿ ನಿಂತರೂ ಚಿಂತೆಯಿಲ್ಲ. ಈ ಉತ್ಪತ್ತಿ ಕಡಿಮೆಯಾದರೆ ಕೊಡಿಸಬೇಕಾದರೆ ಒಂದು ಕೆರೆ ಕಟ್ಟುವುದನ್ನಾದರೂ ನಿಲ್ಲಿಸಿ. ಯಾರೇ ಕುಡಿಯಲಿ ಶಿಕ್ಷೆಮಾಡಿ. ಎಕ್ಸೈಜ್ ಇಲಾಖೆಯಲ್ಲಿ, ಪೋಲೀಸ್ ಇಲಾಖೆಯಲ್ಲಿ ಸರಿಯಾದ ರೀತಿ ನೀತಿ ಇಟ್ಟುಕೊಂಡಿಲ್ಲ. ಸಂಸ್ಥಾನಾದ್ಯಂತ ಒಂದು ರೂಪಾಯಿನಲ್ಲಿ ಹನ್ನೆರಡು ಆಣೆ ಭಾಗ ಪೋಲೀಸಿನವರೇ ಕುಡಿಯುತ್ತಾರೆ. ಪೋಲೀಸಿನವರು ಯಾರು ಕುಡಿಯುತ್ತಾರೋ ಅವರಿಗೆ ಡಿಸ್‌ಮಿಸ್ ಮಾಡಬೇಕು. ಕಳ್ಳನ ಕೈಗೆ ಗಂಟುಕೊಟ್ಟಹಾಗಾಗಿರುವುದರಿಂದ ಪೋಲೀಸಿನವರು ತಪ್ಪಿತಸ್ಥರನ್ನು ಹಿಡಿಯುವುದು ಹೇಗೆ! ಈ ರೀತಿಯಾಗಿ ಸಿಬ್ಬಂದಿ ಖರ್ಚು ಸರ್ಕಾರದಲ್ಲಿ ಜಾಸ್ತಿಯಾಗಿದೆಯೇ ವಿನಾ ಅದರಿಂದ ಸಾಕಷ್ಟು ಪ್ರಯೋಜನವಾಗುತ್ತಿಲ್ಲ. ಸ್ವಾತಂತ್ರ್ಯ ಬಂದಿರುವಾಗ ವ್ಯವಸ್ಥಿತ ರೀತಿಯಲ್ಲಿ ದೇಶಾದ್ಯಂತ ಪಾನನಿರೋಧವನ್ನು ಜಾರಿಗೆ ತರಬೇಕು. ಈಗ ನಾನು ಹೇಳಿದ ಟಾನಿಕ್ಕನ್ನು ಕುಡಿದು ಕಡೂರು ಟೌನಿನಲ್ಲಿ ಇಬ್ಬರು ಸತ್ತಿದ್ದಾರೆ. ಪತ್ರಿಕೆಯಲ್ಲಿ ಅದನ್ನು ನೋಡಬಹುದು. ಇಂಥ ಟಾನಿಕ್ ಕುಡಿದುದರಿಂದ ಹೀಗಾಗಿದೆಯೆಂದು ಪರೀಕ್ಷೆಮಾಡಿ ಹೇಳಿದ್ದಾರೆ. ಇಂಥ ಅನ್ಯಾಯ ದೇಶದಲ್ಲಾಗುತ್ತಿರುವುದು ಬಹಳ ಶೋಚನೀಯ, ಅದೂ ನಮ್ಮ ಸಂಸ್ಥಾನದಲ್ಲಿ ಪಾನ ನಿರೋಧ ಜಾರಿಯಲ್ಲಿರುವ ಕಡೆ ಅತಿಯಾಗಿ ನಡೆಯುತ್ತಿದೆ. ಇದಕ್ಕೆ ತಕ್ಕ ಬಂದೋಬಸ್ತು ಮಾಡಬೇಕು. ಈ ವರ್ಷ ಸಂಸ್ಥಾನದಲ್ಲೆಲ್ಲಾ ಪಾನನಿರೋಧ ಜಾರಿಗೆ ತರಬೇಕು. ಎರಡು ತಿಂಗಳ ಹಿಂದೆ ನಮ್ಮ ಕಡೆ ಪೋಲೀಸ್ ಇನ್ಸ್‌ಪೆಕ್ಟರ್ ಒಂದು ಸಮಿತಿ ಮಾಡಿ ಕಳ್ಳಬಟ್ಟಿ ಇಳಿಸುವುದನ್ನು ತಪ್ಪಿಸಲು ಕ್ರಮ ಕೈಗೊಂಡರೆಂದು ಹೇಳುತ್ತಾರೆ. ಆ ರೀತಿ ಸಲಹೆ ಬೇಕಾದರೆ ಕೊಡಿ. ಸರಿಯಾದ ಏರ್ಪಾಡು ಮಾಡಿ ಬಂದೋಬಸ್ತು ಮಾಡುವುದು ಸೂಕ್ತ. ಈಗಲಾದರೂ ಸರ್ಕಾರದವರು ದಯವಿಟ್ಟು ನಾನು ಹೇಳಿದ ಟಾನಿಕ್ ಶೋಧನೆ ಮಾಡಿಸಬೇಕು. ಅಂಥಾದ್ದಕ್ಕೆ ಆಲ್ಕೋಹಾಲ್ ಶೇಕಡ ಒಂದು ಭಾಗವನ್ನೂ ಕೊಡಕೂಡದು.

3-30 P.M.

ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ).—ಸ್ವಾಮಿ, ಈ ಕಾಂಗ್ರೆಸ್ ಸಂಸ್ಥೆಯವರು ಅಧಿಕಾರಕ್ಕೆ ಬರುವ ಮುಂಚೆ ಈ ಭರತಖಂಡದಲ್ಲಿ ಸಂಪೂರ್ಣವಾಗಿ ಈ ಪಾನನಿರೋಧವನ್ನು ತಾವು ಅಧಿಕಾರಕ್ಕೆ ಬಂದ ಮೇಲೆ ಜಾರಿಗೆ ತರುತ್ತೇವೆಂಬುದಾಗಿ ಪ್ರತಿಜ್ಞೆ ಮಾಡಿದ್ದರು. ಈಗ ಈ ಸಂಸ್ಥೆಯವರು ಅಧಿಕಾರಕ್ಕೆ ಬಂದಿದ್ದಾರೆ. ಇವರು ಅಧಿಕಾರಕ್ಕೆ ಬಂದನಂತರ ತಾವು ಹೇಳುತ್ತಿದ್ದ ಪ್ರಕಾರ ಈಗಾಗಲೇ ಕೆಲವು ಸಂಸ್ಥಾನಗಳಲ್ಲಿ ಈ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ತಂದಿದ್ದಾರೆ. ಆದರೆ ನಮ್ಮ ಮೈಸೂರಿನಲ್ಲಿ ನಮ್ಮ ಸರ್ಕಾರದವರು ಇದನ್ನು ಇಲ್ಲಿ ಸಂಪೂರ್ಣವಾಗಿ ಜಾರಿಗೆ ತರಲು ಅಷ್ಟು ಹೆಚ್ಚಿನ ಪ್ರಯತ್ನವನ್ನೇನೂ ಪಟ್ಟಿಲ್ಲ. ಮೊನ್ನೆತಾನೆ ಒಂದು ಪ್ರಶ್ನೆಗೆ ಉತ್ತರವಾಗಿ ಮಾನ್ಯ ಅಬ್ಕಾರಿ ಮಂತ್ರಿಗಳು ತಾವು ಅಧಿಕಾರಕ್ಕೆ ಬಂದಮೇಲೆ ಈ ಪಾನನಿರೋಧವನ್ನು ಐದು ವರ್ಷಗಳ ಅವಧಿಯಲ್ಲಿ ಇದನ್ನು ಕೇವಲ ಎರಡು ತಾಲ್ಲೂಕುಗಳಲ್ಲಿ ಮಾತ್ರ ಜಾರಿಗೆ ತಂದಿರುವುದಾಗಿ ತಿಳಿಸಿದರು. ಇದನ್ನು ಇನ್ನೂ ಏತಕ್ಕಾಗಿ ಸಂಸ್ಥಾನಾದ್ಯಂತವೂ ತಾವು ಜಾರಿಗೆ ತರಲಿಲ್ಲವೆಂದು ಕೇಳಿದ್ದಕ್ಕೆ ಉತ್ತರವಾಗಿ ಇದನ್ನು ಸಂಸ್ಥಾನಾದ್ಯಂತವೂ ಜಾರಿಗೆ ತಂದಪಕ್ಷದಲ್ಲಿ ಈ ದಿವಸ ನಮ್ಮ ಸರ್ಕಾರಕ್ಕೆ ಈ ಅಬ್ಕಾರಿ ಬಾಬಿನಿಂದ ಬರುತ್ತಿರುವಂಥಾ ಒಂದು ಕೋಟಿ 64 ಲಕ್ಷ ಚಿಲ್ಲರೆ ರೂಪಾಯಿಗಳ ಆದಾಯ ನಿಂತುಹೋಗಿ ನಮ್ಮ ದೇಶಾಭಿವೃದ್ಧಿ ಕಾರ್ಯಗಳ ಬಗ್ಗೆ ನಮಗೆ ಹಣದ ತೊಂದರೆ ಜಾಸ್ತಿಯಾಗುತ್ತದೆಯೆಂದೂ, ಇದರ ಪರಿಣಾಮವಾಗಿ ಅನೇಕ ಅಭಿವೃದ್ಧಿ ಕಾರ್ಯಗಳನ್ನೇ ನಾವು ಕೈಬಿಡತಕ್ಕಂಥ ಸಂದರ್ಭವಿರುತ್ತದೆಂದೂ ಹೇಳಿದರು. ಆದರೆ ಇತ್ತೀಚೆಗೆ ಆ ಇಂಡಿಯಾ ಸರ್ಕಾರದವರಿಂದ ಈ ಬಗ್ಗೆ ಒಂದು ವರದಿಯನ್ನು ಒಪ್ಪಿಸಲು ನೇಮಕವಾಗಿದ್ದಂಥ ಶ್ರೀ ಅಗರ್‌ವಾಲಾ ಸಮಿತಿಯವರು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿರುವ ಅವರ ವರದಿಯಲ್ಲಿ ಈ ಪಾನನಿರೋಧ ಕಾರ್ಯವನ್ನು ಇಂಡಿಯಾ ದೇಶಾದ್ಯಂತವೂ ಸಂಪೂರ್ಣವಾಗಿ 1958ರ ಹೊತ್ತಿಗೆ ಜಾರಿಗೆ ತರಲೇಬೇಕೆಂದು ತಿಳಿಸಿರುತ್ತಾರೆ. ಹಾಗೆ ಆ ಸಮಿತಿಯವರು ಶಿಫಾರಸು ಮಾಡಿರುವುದರಿಂದ ನಮ್ಮ ಸರ್ಕಾರದವರು ಇತ್ತೀಚೆಗೆ ಆ ಕೇಂದ್ರ ಸರ್ಕಾರಕ್ಕೊಂದು ಮನವಿಯನ್ನು ಬರೆದುಕೊಂಡಿದ್ದಾರೆಂದೂ, ಅದರಲ್ಲಿ ಇವರು ಈ ಪಾನನಿರೋಧ ಕಾರ್ಯವನ್ನು ನಮ್ಮ ಸಂಸ್ಥಾನಾದ್ಯಂತವೂ ಈ ಕೂಡಲೇ ಜಾರಿಗೆ ತರಬೇಕೆಂದು ಹೇಳುವುದಾದರೆ ನಮಗೆ ಈ ದಿವಸ ಈ ಬಾಬಿನಿಂದ ಇದನ್ನು ಜಾರಿಗೆ ತರುವುದರಿಂದ ಆಗತಕ್ಕ ಲುಕ್ಸಾನು ಏನಿದೆಯೋ ಅದನ್ನು ಕೂಡಿಸಿ ಕೊಡುವುದಾದರೆ ತಾವು ಈ ಕಾರ್ಯವನ್ನು ಸಂಪೂರ್ಣವಾಗಿ ಕೈಗೊಳ್ಳಲು ಸಿದ್ಧವಿರುವುದಾಗಿ ಬರೆದಿರುತ್ತೇವೆಂದು ಮಾನ್ಯ ಮಂತ್ರಿಗಳೇ ತಿಳಿ

ಸಿದ್ದಾರೆ. ಆದರೆ ಈ ಸಂಸ್ಥೆಯವರು ಯಾವ ಉದ್ದೇಶವನ್ನಿಟ್ಟುಕೊಂಡು ಈ ರಾಜ್ಯಾಡಳಿತವನ್ನು ಕೈಕೊಂಡರೋ ಅಂಥ ಉದ್ದೇಶವನ್ನೇ ಈ ದಿವಸ ಇವರು ಸಂಪೂರ್ಣವಾಗಿ ಮರೆತುಹೋಗಿರುವಂತೆ ಕಾಣುತ್ತದೆ. ಈ ಅಂಶವನ್ನು ಈಗಾಗಲೇ ಅನೇಕ ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಆದರೆ ನಮಗೆ ಈ ಪಾನನಿರೋಧ ಕಾರ್ಯವನ್ನು ಕೈಗೊಂಡರೆ ಮಾತ್ರವೇ ಬಡ್ಜೆಟ್ ಖೋತಾ ಆಗುತ್ತದೆ, ಇಲ್ಲದಿದ್ದರೆ ಇಲ್ಲ ಎನ್ನುವ ಹಾಗೇನೂ ಇಲ್ಲ. ನಾವು ಒಂದು ವೇಳೆ ಈ ಪಾನನಿರೋಧವನ್ನು ಜಾರಿಗೆ ತರದೆ ಕೈಬಿಟ್ಟರೂ ಕೂಡ ನಮಗೆ ವರ್ಷೇ ವರ್ಷೇ ಈ ಖೋತಾ ಬಡ್ಜೆಟ್ ಅನ್ನುವುದು ಆಗಲೂ ಇದ್ದೇ ಇರುತ್ತದೆ. ಆದುದರಿಂದ ಈ ಪಾನನಿರೋಧವನ್ನು ಜಾರಿಗೆ ತಂದರೆ ಇದರಿಂದ ಈಗ ನಮಗೆ ಬರುತ್ತಿರುವ ಒಂದೂವರೆ ಕೋಟಿ ರೂಪಾಯಿಗಳು ಲುಕ್ಸಾನಾಗುತ್ತದೆ, ಆದ್ದರಿಂದ ನಾವು ಈ ಕಾರ್ಯವನ್ನು ಮುಂದಕ್ಕೆ ಹಾಕುತ್ತೇವೆ ಎಂದು ಹೇಳುವುದು ಸರ್ವಥಾ ನ್ಯಾಯವಾದ ಕಾರಣವಲ್ಲ. ಈ ಸಭೆಯಲ್ಲಿರತಕ್ಕಂಥ ಪ್ರತಿಯೊಬ್ಬ ಮಾನ್ಯ ಸದಸ್ಯರೂ ಕೂಡ ಈ ಪಾನನಿರೋಧವನ್ನು ಅವರ ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ಸರ್ಕಾರದವರನ್ನು ಪದೇ ಪದೇ ಒತ್ತಾಯಪಡಿಸುತ್ತಿದ್ದಾರೆ. ಆದ್ದರಿಂದ ಮಂತ್ರಿಗಳು ಇದರ ಹಣದ ಮುಗ್ಗಟ್ಟಿಗೇನೂ ಯೋಚನೆ ಮಾಡಬೇಕಾಗಿಲ್ಲ. ಇವರಿಗೆ ಈ ಧ್ಯೇಯದಲ್ಲಿ ನಂಬಿಕೆಯೊಂದು ಇರುವುದಾದರೆ ಇದನ್ನು ಸಂಪೂರ್ಣವಾಗಿ ಜಾರಿಗೆ ತರಲು ಯಾವ ಕಷ್ಟಗಳೂ ಇರಲಾರವು. ಈಗಾಗಲೇ ಈಗಿರತಕ್ಕ ಮಂತ್ರಿ ಮಂಡಲಕ್ಕೆ ಅವರ ಅವಧಿ ಪೂರೈಸುತ್ತಾ ಬಂದಿದೆ. ಇವರು ನಾಳೆ ತಮ್ಮ ಅಧಿಕಾರವನ್ನು ಬಿಟ್ಟು ಆಚೆಗೆ ಹೋದಂಥಾ ಕಾಲದಲ್ಲಿ "ನೀವು ಐದು ವರ್ಷಕಾಲ ಅಧಿಕಾರ ನಡೆಸಿ—ಕೇವಲ ಎರಡು ತಾಲ್ಲೂಕುಗಳಲ್ಲಿ ಮಾತ್ರ ಈ ಪಾನನಿರೋಧ ಕಾರ್ಯವನ್ನು ಜಾರಿಗೆ ತಂದಿದ್ದೇವೆ" ಎಂದು ಹೇಳಿಕೊಂಡರೆ ನಿಮಗೆ ಇದು ಅವಮಾನವಾಗುವುದಿಲ್ಲವೇ ! ಹಾಗೂ ಒಂದುವೇಳೆ ಸರ್ಕಾರದವರು ಈ ಬಾಬಿನಿಂದ ಬರತಕ್ಕ ವರಮಾನ ಏಕ್‌ದಂ ನಮ್ಮ ಕೈಬಿಟ್ಟು ಹೋಗುತ್ತದೆ—ನಮಗೆ ಒಂದು ಕೋಟಿ 64 ಲಕ್ಷ ರೂಪಾಯಿಗಳು ಖೋತಾ ಆಗುತ್ತದೆ ಎನ್ನುವುದಾಗಿದ್ದರೆ ಒಂದೊಂದು ವರ್ಷ ಒಂದೊಂದು ಜಾತಿಯ ಮಾದಕ ವಸ್ತುಗಳ ಬಳಕೆಯನ್ನು ಎಂದರೆ ಈ ವರ್ಷ ಗಾಂಜ, ಅಫೀಮು, ಅದರ ಮುಂದಿನ ವರ್ಷ ಷರಾಬು, ಕಡೇ ವರ್ಷ ಈ ಹೆಂಡವನ್ನು ಮಾರುವುದನ್ನು ನಿಲ್ಲಿಸಿ ಸಂಪೂರ್ಣವಾಗಿ ಪಾನನಿರೋಧವನ್ನು ತರಬಹುದು. ಆದರೆ ಆಗಲೇ ಮಾತನಾಡುತ್ತ ಶ್ರೀ ಕಳಸಿಯಪ್ಪನ್‌ರವರು ಆ ಸೆಪಿಂಗ್ಸ್ ರೋಡ್-ತಿಮ್ಮಯ್ಯ ರೋಡ್ ಇತ್ಯಾದಿ ರಸ್ತೆಗಳಲ್ಲಿ ಈ ಪಾನೀಯ ಸೇವಕರಿಂದ ವಿಶೇಷ ಗಲಾಟೆ ಮತ್ತು ತೊಂದರೆಗಳು ಆಗುತ್ತಿದೆಯೆಂದು ತಿಳಿಸಿದರು. ಆದರೆ ಈ ರಸ್ತೆಗಳ ವಿಚಾರ ಹಾಗಿರಲಿ. ದೇವಸ್ಥಾನದ ಪಕ್ಕದಲ್ಲೇ ಈ ಹೆಂಡದ—ಸಾರಾಯಿನ ಅಂಗಡಿಗಳನ್ನಿಟ್ಟಿರುತ್ತಾರೆ. ಅಲ್ಲಿಗೆ ಈ ಕಾರಣದಿಂದ ಹೆಂಗಸರು-ಮಕ್ಕಳು ಯಾರೂ ಹೋಗುವ ಹಾಗೆಯೇ ಇಲ್ಲ. ಎಲ್ಲರೂ ಹೆದರಿಕೊಂಡು ಆ ದೇವಸ್ಥಾನಗಳಿಗೆ ಹೋಗುವುದನ್ನೇ ಕೈಬಿಟ್ಟಿದ್ದಾರೆ. ಹೀಗೆ ಬೆಂಗಳೂರಿನಲ್ಲಿ ಒಂದೆರಡು ಕಡೆ ಆಗಿದೆ. ಆ ಪ್ರದೇಶದ ಜನರು ಈ ವಿಚಾರದಲ್ಲಿ ಕಾರ್ಪೊರೇಷನ್ ಅವರ ಮುಂದೆ ಮೊರೆಯಿಟ್ಟುಕೊಂಡರು. ಆಗ ನಾನೇ ಅಲ್ಲಿ ಈ ಬಗ್ಗೆ ಒಂದು ರೆಸಲ್ಯೂಷನ್ ಕೂಡ ಪಾಸ್ ಮಾಡಿಸಿ ಸರ್ಕಾರಕ್ಕೆ ಬರೆದು, ಆ ಹೆಂಡದ ಅಂಗಡಿಗಳನ್ನು ಆ ದೇವಸ್ಥಾನಗಳ ಪಕ್ಕದಿಂದ ಬೇರೆಯ ಕಡೆಗಾದರೂ ವರ್ಗಾಯಿಸಬೇಕೆಂದು ಕೇಳಿಕೊಳ್ಳಲಾಗಿತ್ತು. ಈ ಬಗ್ಗೆ ನಾನು ಹೋದ ಅಧಿವೇಶನದಲ್ಲಿ ಇದೇ ಸಭೆಯ ಮುಂದೆ ವಿಶೇಷವಾಗಿ ಚರ್ಚೆಯನ್ನು ಕೂಡ ಮಾಡಿದ್ದೇನೆ. ಆದರೆ ಇವರು ಈ ಪಾನನಿರೋಧವನ್ನು ಜಾರಿಗೆ ತರದಿದ್ದರೂ ಹೋಗಲಿ—ಈ ಅಂಗಡಿಗಳನ್ನಾದರೂ ಆ ದೇವಸ್ಥಾನಗಳ ಅಕ್ಕ ಪಕ್ಕದಲ್ಲಿರುವವುಗಳನ್ನು ಊರಿಂದ ಆಚೆ ಕಡೆಗೆ ವರ್ಗಾಯಿಸುವುದಕ್ಕಾದರೂ ಇವರಿಗೆ ಇರತಕ್ಕ ತೊಂದರೆಯೇನು ಎನ್ನುವುದೇ ನನಗಂತೂ ಗೊತ್ತಾಗುತ್ತಿಲ್ಲ. ಹೀಗೆ ನಾನು ಒಂದೇ ಸಮನಾಗಿ 5-6 ವರ್ಷಗಳಿಂದ ಒತ್ತಾಯಪಡಿಸುತ್ತಲೇ ಬಂದುದರ ಪರಿಣಾಮವಾಗಿ ಮೊನ್ನೆ ಆ ಧರ್ಮರಾಯನ ದೇವಸ್ಥಾನದ ಬಳಿ ಇದ್ದಂಥ ಹೆಂಡದ ಅಂಗಡಿಯನ್ನು ಅಲ್ಲಿಂದ ಬದಲಾವಣೆ ಮಾಡಿರುತ್ತಾರೆ. ಆದರೆ ಅದನ್ನು ಇವರು ಹಾಗೆ ಬದಲಾವಣೆ ಮಾಡಿರುವುದಾದರೂ ಎಲ್ಲಿಗೆ ಎಂದು ಕೇಳಿದರೆ ಅದನ್ನು ಆ ಶಿವಾಜಿ ಟಾಕೀಸ್ ಹತ್ತಿರಕ್ಕೆ ಬದಲಾಯಿಸಿದ್ದಾರೆ. ಆದರೆ ಇನ್ನೊಂದು ದೇವಸ್ಥಾನದ ಬಳಿ ಇರುವುದು ಇನ್ನೂ ಹಾಗೆಯೇ ಇದೆ. ಹೀಗೆ ಈ ಹೆಂಡದ ಮತ್ತು ಸಾರಾಯಿನ ಅಂಗಡಿಗಳು ಆ ದೇವಸ್ಥಾನದ ಬಳಿ ಇರುವುದರಿಂದ ಜನರು ಆ ದೇವಸ್ಥಾನಕ್ಕೆ ಬರುವುದಕ್ಕೂ ಕೂಡ ಬಹಳ ಕಷ್ಟವಾಗಿದೆ. ಏತಕ್ಕೆಂದರೆ ಜನರು ಆ ದೇವಸ್ಥಾನದ ಬಳಿ ಬಂದು ಕುಳಿತ ಕೂಡಲೇ ಇವರೂ ಸಹ ಇಲ್ಲಿಗೆ ಕುಡಿಯುವುದಕ್ಕಾಗಿ ಬಂದಿರಬಹುದು ಎಂದು ಜನರು ಆಡಿಕೊಳ್ಳಬಹುದೆಂಬ ಅನುಮಾನದಿಂದ ಅಲ್ಲಿಗೆ ಜನಗಳು ಯಾರೂ ಸುಳಿಯುತ್ತಿಲ್ಲ. ಪಾನನಿರೋಧವನ್ನು ಜಾರಿಗೆ ತರುವುದಕ್ಕಂತೂ ಕಷ್ಟ. ಆದರೆ ಇದನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾಯಿಸುವುದಕ್ಕೆ ಏನು ತೊಂದರೆಯಿದೆ? ಊರಾಚೆ ಕಡೆ ಒಂದು ಮೈಲಿಯಲ್ಲಿ ಒಂದು ಗುಡಿಸಲನ್ನು ಹಾಕಿದರೆ ಸಾಕು; ಅಲ್ಲಿ ಈ ಅಂಗಡಿಯನ್ನು ಪ್ರಾರಂಭಿಸಬಹುದು. ಇದಕ್ಕಾಗಿ ಅಂಥ ದುಬಾರಿ ಖರ್ಚುಗಳೇನೂ ಬರಲಾರವು. ಹೀಗಿದ್ದರೂ ಈ ಕೆಲಸಮಾಡುವುದಕ್ಕೂ ಸರ್ಕಾರದವರು ಬಹಳವಾಗಿ ಹಿಂದುಮುಂದು ನೋಡುತ್ತಿದ್ದಾರೆ. ಆದರೆ ಈಗತಾನೆ ಶ್ರೀಮಾನ್ ಚಂದ್ರಶೇಖರಯ್ಯನವರೂ ಮತ್ತು ಇತರರೂ ಹೇಗೆ ಈ ಮಾದಕ ದ್ರವ್ಯಗಳನ್ನು ಸೀಸೆಗಳಲ್ಲಿ ತುಂಬಿ ಔಷಧದ ರೂಪವಾಗಿ, ಇತರ ಪಾನೀಯಗಳ ಹೆಸರಿನಲ್ಲಿ ಮಾರಾಟ ಮಾಡುತ್ತಿದ್ದಾರೆ ಎಂಬ ಬಗ್ಗೆ ಸವಿಸ್ತಾರವಾಗಿ ಹೇಳಿದ್ದಾರೆ. ಅವರು ಆ ವಿಚಾರವನ್ನೇ ನನ್ನ ಹತ್ತಿರವೂ ತಿಳಿಸಿ ನನಗೂ ಕೂಡ ಒಂದು ಬಾಟಲನ್ನು ಕೊಟ್ಟಿದ್ದರು. ಅದನ್ನು ಮುಂದಿನ ತನಿಖೆ ಬಗ್ಗೆ ಮಂತ್ರಿಗಳಾದ ಡಾ॥ ನಾಗನಗೌಡರ ಬಳಿಗೆ ಕಳುಹಿಸಲಾಗಿದೆ. ತಾವು ಈ ದಿವಸ ಈ ಆಲ್ಕೋಹಾಲಿನ ವಸ್ತುಗಳನ್ನು ತಯಾರಿಸತಕ್ಕ ಬಗ್ಗೆ ಯಾರು ಯಾರಿಗೆ ಲೈಸೆನ್ಸುಗಳನ್ನು ಕೊಡಲಾಗಿದೆಯೋ ಆ ಪೈಕಿ ಕೆಲವರು ಅದನ್ನು ದುರುಪಯೋಗಪಡಿಸಿಕೊಂಡಿದ್ದಾರೆಂಬುದಾಗಿ ಶ್ರೀಮಾನ್ ನಾಗಯ್ಯರೆಡ್ಡಿಯವರು ತಿಳಿಸಿದ್ದಾರೆ. ಹೀಗೆಲ್ಲಾ ಇದು ನಡೆಯುತ್ತಿರುವಾಗ ಇದನ್ನು ತಡೆಗಟ್ಟಲು ಸರ್ಕಾರದವರು ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆಂಬುದನ್ನು ಈ ಮಾನ್ಯ ಸಭೆಗೆ ಸಂಪೂರ್ಣವಾಗಿ ತಿಳಿಸಿದರೆ ಬಹಳ ಉತ್ತಮವಾಗಿರುತ್ತದೆಂದು ನಾನು ಪ್ರಾರ್ಥನೆ ಮಾಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ಈ ಎಕ್ಸೈಜ್ ಡಿಮ್ಯಾಂಡಿನಲ್ಲಿ ಸರ್ಕಾರದವರು ಕೇಳಿಕೊಂಡಿರತಕ್ಕಂಥ ಈ ಮನವಿಯನ್ನು ವಿರೋಧಿಸುತ್ತ, ನಾನು ಒಂದೆರಡು ವಿಷಯ

(ಶ್ರೀ ಎಂ. ಚಿಕ್ಕಲಿಂಗಯ್ಯ)

ಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸಿದ್ದೇನೆ.

ನಾನು ಕಳೆದ ವರ್ಷ ಇದೇ ಅಧಿವೇಶನದಲ್ಲಿ ಸರ್ಕಾರದವರು ಸಂಸ್ಥಾನದಲ್ಲಿ ಎಲ್ಲೆಲ್ಲಿ ಈಗ ಈ ಪಾನನಿರೋಧ ಪದ್ಧತಿಯನ್ನು ಜಾರಿಗೆ ತಂದಿರುತ್ತಾರೋ ಅಂಥ ತಾಲ್ಲೂಕುಗಳ ಅಕ್ಕಪಕ್ಕದಲ್ಲಿರತಕ್ಕಂಥ ವೆಟ್ ಪ್ರದೇಶಗಳನ್ನು ಕೂಡ ಡ್ರೈ ಮಾಡಬೇಕೆಂಬ ವಿಚಾರವನ್ನು ಪ್ರಸ್ತಾಪಿಸುತ್ತಾ ಈ ವರ್ಷವೇ ಆ ನಮ್ಮ ಮಳವಳ್ಳಿ ಮತ್ತು ಮದ್ದೂರು ತಾಲ್ಲೂಕುಗಳಲ್ಲಿ ಈ ಪಾನನಿರೋಧವನ್ನು ಸಂಪೂರ್ಣವಾಗಿ ಜಾರಿಗೆ ಕೊಡಬೇಕೆಂದು ಕೇಳಿಕೊಂಡಿದ್ದೆನು. ಆಗ ಸರ್ಕಾರದವರು ಈ ಅಗರ್‌ವಾಲ ಸಮಿತಿಯವರ ವರದಿಗಾಗಿ ಕಾದಿದ್ದೇವೆ, ಆ ರಿಪೋರ್ಟು ಬರಲಿ, ಅದು ಬಂದಕೂಡಲೆ ನಾವು ಈ ಕಾರ್ಯವನ್ನು ಮುಂದುವರಿಸಬೇಕೆಂದಿದ್ದೇವೆಂಬುದಾಗಿ ತಿಳಿಸಿದ್ದರು. ಸರ್ಕಾರದವರು ಈ ರೀತಿ ಹೇಳಿದಮೇಲೆ ಅವರನ್ನು ವೃಥಾ ಒತ್ತಾಯಪಡಿಸುವುದು ಸರಿಯಾವದ್ದಲ್ಲವೆಂದು ಹೇಳಿ ಆಗ ಸರ್ಕಾರದವರನ್ನು ಈ ಬಗ್ಗೆ ಒತ್ತಾಯಮಾಡಲಿಲ್ಲ. ಆದರೆ ಈಗ ಆ ರಿಪೋರ್ಟು ಬಂದಿದೆ. ಈಗ ಆ ಸಮಿತಿಯವರೇ ಈ ಪಾನನಿರೋಧವನ್ನು ಸಂಪೂರ್ಣವಾಗಿ ದೇಶಾದ್ಯಂತವೂ 1958ರೊಳಗಾಗಿ ಜಾರಿಗೆ ತರಬೇಕೆಂದು ತೀರ್ಮಾನ ಮಾಡಿರುತ್ತಾರೆಂಬುದಾಗಿ ಎಲ್ಲರಿಗೂ ತಿಳಿದುಬಂದಿದೆ. ಆದರೆ ನನಗೀಗ ಈ ವಿಚಾರದಲ್ಲಿ ಏನೊಂದು ಸಂಶಯ ಬಂದಿದೆ ಎಂದರೆ—ಅವರೇನೋ ಆ ರಿಪೋರ್ಟಿನಲ್ಲಿ ಇದನ್ನು 1958ರೊಳಗಾಗಿ ಜಾರಿಗೆ ತರಬೇಕೆಂದು ತಿಳಿಸಿದ್ದಾರೆ. ಆದರೆ ಈ ವಿಚಾರದಲ್ಲಿ ನಮ್ಮ ಸರ್ಕಾರದವರೇನಾದರೂ ಈ ಬಗ್ಗೆ ಆ 1958ರಲ್ಲೇ ಇದನ್ನು ಕೈಗೊಂಡು ಸಂಪೂರ್ಣವಾಗಿ ದೇಶಾದ್ಯಂತವೂ ಜಾರಿಗೆ ತರುತ್ತಾರೋ ಅಥವಾ ಈ ವರ್ಷವೇ ಇದನ್ನು ಪ್ರಾರಂಭಿಸಿ ಆ 1958ರ ವೇಳೆಗೆ ಸರಿಯಾಗಿ ಇದನ್ನು ಪೂರೈಸುತ್ತಾರೋ ಆ ವಿಚಾರ ನನಗೆ ಗೊತ್ತಾಗುತ್ತಿಲ್ಲ. ಈ ಅಂಶವನ್ನು ಸರ್ಕಾರದವರು ಸಭೆಗೆ ತಿಳಿಸಬೇಕಾಗಿದೆ. ಈಗ ನಾನು ಕೇಳುತ್ತಿರುವ ಎರಡು ತಾಲ್ಲೂಕುಗಳಲ್ಲಿ ಈ ವರ್ಷವೇ ಈ ಕಾರ್ಯವನ್ನು ಪ್ರಾರಂಭಿಸಬೇಕೆಂದು ಒತ್ತಾಯಪಡಿಸುತ್ತೇನೆ. ಕಾರಣವಾದರೂ ಇಷ್ಟೆ:—ಅತ್ತಕಡೆ ಪಕ್ಕದಲ್ಲಿರುವ ಚನ್ನಪಟ್ಟಣ ತಾಲ್ಲೂಕಿನಲ್ಲಿ ಸಂಪೂರ್ಣ ಪಾನನಿರೋಧವನ್ನು ಜಾರಿಗೆ ತಂದಿದ್ದಾರೆ. ಅತ್ತ ಕ್ಲೋಸ ಪೇಟೆ ಕಡೆಯೂ ಪಾನನಿರೋಧವನ್ನು ಜಾರಿಗೆ ತರಲಾಗಿದೆ. ಅತ್ತ ಆ ಕೊಳ್ಳೇಗಾಲ ತಾಲ್ಲೂಕಿನಲ್ಲೂ ಈ ಪಾನನಿರೋಧ ಜಾರಿಗೆ ಬಂದಿದೆ. ಈ ಎರಡು ತಾಲ್ಲೂಕುಗಳೂ ಎಂದರೆ ಮಳವಳ್ಳಿ ಮತ್ತು ಮದ್ದೂರು—ಈ ಮಧ್ಯೆ ಸಿಕ್ಕಿಕೊಂಡು ಇಲ್ಲಿ ಇಲ್ಲದಂಥ ಸ್ಮಗ್ಲಿಂಗಿಗೆ ಅವಕಾಶವಾಗಿರುತ್ತದೆ. ಈ ಅಕೃತ್ಯಗಳನ್ನೆಲ್ಲಾ ಅಲ್ಲಿ ತಡೆಗಟ್ಟಬೇಕೆಂಬ ದೃಷ್ಟಿಯಿಂದ ಈ ದಿವಸ ನಮ್ಮ ಸರ್ಕಾರದ ಧೋರಣೆ ಎತ್ತಕಡೆಗೆ ಹೋಗುತ್ತಿದೆ ಎಂಬುದನ್ನು ಈ ಸಭೆಗೆ ತಿಳಿಸಬೇಕೆಂಬ ಉದ್ದೇಶದಿಂದ ನಾನೀಗ ಈ ವಿಚಾರಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತಂದಿದ್ದೇನೆ.

ನಮ್ಮ ಎಕ್ಸೈಜ್ ಇಲಾಖೆಯಲ್ಲಿ ಎಕ್ಸೈಜ್ ಇಂಟೆಲಿಜೆನ್ಸ್ ಬ್ಯೂರೋ ಎಂಬ ಒಂದು ಇಲಾಖೆ ಇದೆ. ಆ ಇಲಾಖೆ ಪೋಲೀಸ್ ಇಲಾಖೆಯಲ್ಲಿ ಸಿ.ಐ.ಡಿ. ಸೆಕ್ಷನ್ ಯಾವ ರೀತಿ ಇದೆಯೋ ಆ ರೀತಿ ಕೆಲಸ ಮಾಡಬೇಕು. ಆ ಇಲಾಖೆ ಈಗ ಇದೆಯೋ ಇಲ್ಲವೋ, ಏನು ಕೆಲಸ ಮಾಡುತ್ತಾ ಇದೆ ಎಂಬುದನ್ನು ಎಕ್ಸೈಜ್ ಇಲಾಖೆಯವರೇ ಹೇಳಬೇಕು. ಆ ಬ್ರಾಂಚ್ ಇದ್ದಪಕ್ಷದಲ್ಲಿ ಅದು ಯಾವ ರೀತಿ ಕೆಲಸ ಮಾಡುತ್ತಾ ಇದೆ ಮತ್ತು ಇರತಕ್ಕ ಲೋಪದೋಷಗಳನ್ನು ಏಕೆ ಸರ್ಕಾರದವರ ಗಮನಕ್ಕೆ ತರಲಿಲ್ಲ ಎಂಬುದನ್ನು ವಿಚಾರಮಾಡಿದ್ದೇ ಆದರೆ ಆ ಇಲಾಖೆಯ ಅಧಿಕಾರಿಗಳಲ್ಲಿ ಸಂಪೂರ್ಣವಾಗಿ ಆಡಳಿತ ದಕ್ಷತೆಯಿಲ್ಲ ಎಂದು ಹೇಳಿ ಈ ಮಾನ್ಯ ಸಭೆಯಲ್ಲಿ ನಾನು ಘಂಟಾಘೋಷವಾಗಿ ಹೇಳುತ್ತೇನೆ. ಏಕೆಂದರೆ ಈ ಸಭೆಯಲ್ಲಿ ಪಾನನಿರೋಧ ಸರಿಯಾಗಿ ನಡೆಯುತ್ತಿಲ್ಲ, ಸ್ಮಗ್ಲಿಂಗ್ ಜಾಸ್ತಿಯಾಗಿದೆ, ಒಂದು ತಾಲ್ಲೂಕಿನಲ್ಲಿ ಷೆಡ್ಯೂಲ್ ಆಗಿರತಕ್ಕ ಅಂಗಡಿಗಳಿಗಿಂತಲೂ 10-15 ಅಂಗಡಿಗಳು ಅನ್‌ಆಥರೈಸ್ಡ್ ಆಗಿ ತೆಗೆಯಲ್ಪಡುತ್ತಿವೆ. ಇಲಿಸಿಟ್ ಡಿಸ್ಟಿಲೇಷನ್ ಅಥವಾ ಇಲಿಸಿಟ್ ಟ್ಯಾಪಿಂಗ್ ನಡೆಯುತ್ತಾ ಇದೆ ಎಂದು ಹೇಳಿ ಸದಸ್ಯರುಗಳು ಪ್ರತಿ ಸಾರಿಯೂ ಕೂಗುತ್ತಾ ಇದ್ದರೂ ಸಹ ಅಧಿಕಾರಿಗಳು ನಾವು ತಿಳಿಸಿದರೆ ತಾನೆ ಮಂತ್ರಿಗಳು ಉತ್ತರ ಹೇಳುವುದು ಎಂಬ ಒಂದು ಉದಾಸೀನ ಭಾವನೆಯಿಂದ ವರ್ತಿಸುತ್ತಾ ಎಕ್ಸೈಜ್ ಇಲಾಖೆಗೇ ಖಂಡಿತವಾಗಿಯೂ ಕೆಟ್ಟ ಹೆಸರು ತರುತ್ತಾ ಇದ್ದಾರೆ. ಅಧಿಕಾರಿಗಳಲ್ಲಿ ದಕ್ಷತೆ ಇಲ್ಲದಿರುವುದು ಮತ್ತು ಅದರ ಜೊತೆಗೆ ಅವರು ಕಂಟ್ರಾಕ್ಟರುಗಳೊಡನೆ ಸಹಕರಿಸಿ ಕೆಲಸಮಾಡುತ್ತಾ ಇರುವುದು ಖಂಡಿತವಾಗಿಯೂ ಸತ್ಯಾಂಶ ಎಂಬ ವಿಷಯವನ್ನು ಘಂಟಾಘೋಷವಾಗಿ ಹೇಳುತ್ತೇನೆ. ಇದನ್ನು ನಿಜವಾಗಿಯೂ ಕೂಡ ವ್ಯಸನದಿಂದ ಹೇಳಬೇಕಾಗಿದೆ. ಎಕ್ಸೈಜ್ ಕಮಿಷನರರೋ ಅಥವಾ ಡೆಪ್ಯುಟೀ ಕಮಿಷನರರೋ ಇದನ್ನು ಕಿವಿಗೆ ಹಾಕಿಕೊಂಡು ಪರಿಶೀಲನೆ ನಡೆಸುತ್ತಾರೆಯೇ ಎಂದರೆ ಅದೂ ಕೂಡ ಮಾಡುವುದಿಲ್ಲ. ಹಿಂದಿನ ವರದಿಗಳನ್ನು ತರಿಸಿಕೊಂಡು ಸರಿಯಾಗಿ ನಡೆಯುತ್ತಿದೆಯೋ ಇಲ್ಲವೋ 'Yes' or 'No' ಎಂಬುದನ್ನು ತಿಳಿದುಕೊಂಡು ಬರತಕ್ಕ ಪದ್ಧತಿಯನ್ನು ನೋಡಿದ್ದೇನೆ. ನಾನೂ ಎಕ್ಸೈಜ್ ಇಲಾಖೆಯಲ್ಲಿ ಕೆಲಸಮಾಡಿದವನು. ನನಗೆ ಆ ವಿಷಯದಲ್ಲಿ ಚೆನ್ನಾಗಿ ಗೊತ್ತಿದೆ. ಇದು ಖಂಡಿತವಾಗಿಯೂ ಕೂಡ ನ್ಯಾಯವಲ್ಲ. ಈ ವರ್ಷದಲಾಗಾಯ್ತುನಿಂದಲಾದರೂ ಇದಕ್ಕೆ ಸರಿಯಾದ ರೀತಿಯಲ್ಲಿ ಗಮನಕೊಟ್ಟು 1958 ರೊಳಗೆ ನೆಮ್ಮದಿಯಾಗಿ, ತೃಪ್ತಿಕರವಾಗಿ ಈ ಪಾನನಿರೋಧ ನೀತಿಯನ್ನು ಸಂಪೂರ್ಣವಾಗಿ ಜಾರಿಗೆ ತರಲು ಸಾಧ್ಯವಾಗುತ್ತದೆಯೇ ಇಲ್ಲವೇ ಎಂಬುದನ್ನು ಕೂಲಂಕಷವಾಗಿ ಪರಿಶೀಲನೆಮಾಡಿ ಒಂದು ಸ್ಕೀಂನ್ನು ಸರ್ಕಾರದವರಿಗೆ ಕೊಟ್ಟಪಕ್ಷದಲ್ಲಿ ಇಷ್ಟು ಜನ ಸದಸ್ಯರು ಈ ಸಭೆಯಲ್ಲಿ ಇದುವರೆಗೂ ಕೇಳಿಕೊಂಡದ್ದಕ್ಕೆ ಸಾರ್ಥಕವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನೊಂದು ಖಿಸ್ತು ಬಾಕಿ ಇರುವ ವಿಚಾರ. ಕಾನೂನು ಇರುವುದು ಏನು? ಪ್ರತಿತಿಂಗಳೂ 20ನೇ ತಾರೀಖು ಆದ ತಕ್ಷಣ ಖಿಸ್ತು ಕೊಡದಿದ್ದರೆ ಆ ಷಾಪನ್ನು ಹರಾಜು ಮಾಡಬೇಕೆಂದು ಮ್ಯಾನ್ಯುಯಲ್‌ನಲ್ಲಿ ಇದೆ. ಅದಕ್ಕೇ ಹೇಳುತ್ತಾ ಇದ್ದೇನೆ. ಯಾವ ತಾಲ್ಲೂಕಿನಲ್ಲಿ ಯಾವ ಷಾಪ್‌ನಲ್ಲಿ 20ನೇ ತಾರೀಖು ಆದ ತಕ್ಷಣ ಡಿಪಾರ್ಟ್‌ಮೆಂಟಿನವರು ಕಟ್ಟುನಿಟ್ಟಾಗಿ ಖಿಸ್ತು ವಸೂಲುಮಾಡುತ್ತಾ ಇದ್ದಾರೆ? ಈ ರಿಪೋರ್ಟ್‌ನಲ್ಲಿ ಕೊಟ್ಟಿರುವಂತೆ the arrears are very heavy. ಕರೆಂಟ್ ಡಿಮ್ಯಾಂಡ್ ಎಷ್ಟಿದೆಯೋ ಅದನ್ನು ವಸೂಲು ಮಾಡುತ್ತಾರೆಯೇ ಹೊರತು ಬಾಕಿ ಖಂಡಿತವಾಗಿಯೂ ವಸೂಲು ಮಾಡುವುದಿಲ್ಲ. ಅವರಿಂದ ರಿಮಿಷನ್ನಿಗೆ ಅರ್ಜಿ ತೆಗೆದುಕೊಂಡು ಸರ್ಕಾರದವರಿಗೆ ಶಿಫಾರಸು ಮಾಡುತ್ತಾರೆ. ಇದೇನು ತಮಾಷೆಯೋ? ಏಕೆ ಹಾಗೆ ಮಾಡಬೇಕು? ಇದಕ್ಕೆ ಈ ಇಲಾಖೆ ತಾನೆ ಏಕೆ ಇರಬೇಕು? ಹೇಗೂ ಇಲಾಖೆಯೇ ಹೋಗುತ್ತಾ ಇದೆ, ನಾವೇಕೆ

ಕ್ರಮ ತೆಗೆದುಕೊಳ್ಳಬೇಕು ಎಂಬ ಮನೋಭಾವ ಅಧಿಕಾರಿಗಳಲ್ಲಿ ಇರುವಹಾಗೆ ಕಾಣುತ್ತದೆ. ಏಕೆ ಇಷ್ಟು ಕಠಿಣವಾಗಿ ಮಾತನಾಡುತ್ತಿದ್ದೇನೆ ಎಂದರೆ—ವ್ಯಕ್ತಿಯುತವಾಗಿ ಯಾರಮೇಲೂ ನನಗೆ ಹೇಳಲು ಇಷ್ಟವಿಲ್ಲ—ವರ್ಷೇ ವರ್ಷೇ ಇದು ಬರುತ್ತಾ ಇದೆ, ಪ್ರತಿಯೊಂದು ಪ್ರಶ್ನೆ, ಪ್ರತಿಯೊಂದು ಜೋತಾ ನಿರ್ಣಯದ ಸಂದರ್ಭದಲ್ಲೂ ಈ ಎಕ್ಸೈಜ್ ಇಲಾಖೆಯ ಮೇಲೆ ದೂರು ಬರುತ್ತಾ ಇದ್ದು ಸರ್ಕಾರ ಜವಾಬುಕೊಡಬೇಕಾಗಿರುವಾಗ ಇದನ್ನು ತಪ್ಪಿಸುವುದಕ್ಕೆ ಸಾಧ್ಯವೇ ಎಂಬುದನ್ನು ಇಲ್ಲಿಯವರೆಗೂ ಯೋಚನೆಮಾಡಿಲ್ಲವಲ್ಲ ಎಂಬುದಕ್ಕಾಗಿ ಒತ್ತಿ ಹೇಳಬೇಕಾಗಿದೆ. ಬಾಕಿ ಇರುವ ವಿಚಾರದಲ್ಲಿ ನನಗೆ ತಿಳಿದಿರುವಮಟ್ಟಿಗೆ ಪ್ರತಿಯೊಂದು ತಾಲ್ಲೂಕಿನಲ್ಲೂ 5-10 ವರ್ಷಗಳಿಂದ ಬಾಕಿ ನಿಂತಿದೆ. ಕೆಲವುಕಡೆ ಕಂಟ್ರಾಕ್ಟರುಗಳೇ ಇಲ್ಲ. ಅದೂ ಅಲ್ಲದೆ ಎಕ್ಸೈಜ್ ಸೇಲ್ಸ್ ಟೈಂನಲ್ಲಿ ಯಾವ ಕಂಟ್ರಾಕ್ಟರು ಡಿಫಾಲ್ಟರಾಗಿರುತ್ತಾನೆಯೋ ಅವನು ಬಿಡ್ ಮಾಡಕೂಡದು ಎಂದು ಇದೆ. ಅವನನ್ನು ಬಿಡುವುದು ಅವನ ತಮ್ಮನ ಹೆಸರಿನಲ್ಲಿ ಬಿಡ್ ಮಾಡಿಸಿ ಕೊಡುವುದು ಈ ರೀತಿಯೆಲ್ಲ ನಡೆಯುತ್ತಿದೆ. ಇಲಾಖೆಯವರ ಕನ್ನೈವೆನ್ಸ್‌ನಿಂದ ಈ ರೀತಿ ಆದರೆ ಯಾವ ಕೆಲಸ ತಾನೆ ತೃಪ್ತಿಕರವಾಗಿ ಮಾಡುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಯಾವ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ ಎಂಬುದನ್ನು ಕೂಲಂಕಷವಾಗಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ನಾನು ಸಲಹೆಮಾಡುವುದೇನೆಂದರೆ ಎಕ್ಸೈಜ್ ಇಂಟೆಲಿಜೆನ್ಸ್ ಇಲಾಖೆಯವರು unauthorised opening of shops detect ಮಾಡಿರುವುದು ಎಷ್ಟು ಕೇಸುಗಳು, detecting cases of illicit distillation ವಗೈರೆ ಎಷ್ಟು ಎಂಬ ವಿಚಾರದಲ್ಲಿ ಒಂದು ವಿಶೇಷ ವರದಿಯನ್ನು ತರಿಸಿಕೊಂಡು, ಸಂಬಂಧಪಟ್ಟ ಅಧಿಕಾರಿಗಳಿಗೆ ಸರಿಯಾಗಿ ಬುದ್ಧಿ ಕಲಿಸಬೇಕು.

ಎರಡನೆಯದಾಗಿ ಅಗರ್‌ವಾಲ್ ಕಮಿಟಿಯವರು 1958ರ ಹೊತ್ತಿಗೆ ಸಂಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತಂದು ಜನಗಳಿಗೆ ಸೌಕರ್ಯವನ್ನೊದಗಿಸಬೇಕೆಂದಿದ್ದಾರೆ. 15 ಲಕ್ಷ ರೂಪಾಯಿ ಬಾಕಿ ಇದೆ. ಅಷ್ಟರೊಳಗೆ ಬಾಕಿ ಬರಬೇಕಾದುದನ್ನೆಲ್ಲ ವಸೂಲು ಮಾಡಿ ಮದ್ದೂರು, ಮಳವಳ್ಳಿ ತಾಲ್ಲೂಕುಗಳಲ್ಲಿ ಈ ವರ್ಷವೇ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, ಸಂಸ್ಥಾನದಲ್ಲಿ ಕೆಲವು ಭಾಗದಲ್ಲಿ ಕುಡಿಯುವುದಕ್ಕೆ ಅವಕಾಶ ಕೊಟ್ಟು ಮತ್ತೊಂದು ಕೆಲವು ಭಾಗದಲ್ಲಿ ಅವಕಾಶ ಕೊಡದೇ ಅಲ್ಲಿ ಕುಡಿದವರು ತಪ್ಪಿತಸ್ಥರು ಎಂದು ಅವರನ್ನು ಜೈಲಿಗೆ ಹಾಕಿ ಅವರಿಗೆ ಅನ್ಯಾಯ ಮಾಡುತ್ತಿರುವ ವಿಚಾರದಲ್ಲಿ ನಾನು ಹಿಂದೆ ಒಂದು ಸಾರಿ ಮಾತನಾಡಿದಾಗ ಏನು ಹೇಳಿದೆನೋ ಅದನ್ನೇ ಈಗ ಮತ್ತೆ ಹೇಳಬೇಕಾಗಿದೆ. ಬೆಂಗಳೂರಿನಲ್ಲಿ ಕುಡಿಯುವವರಿಗೆ ಅವರು ಏನೇ ಕುಡಿಯಲಿ ಅದು ಟಾನಿಕ್ಕು. ಅದನ್ನೇ ಚಿತ್ರದುರ್ಗದಲ್ಲಿ ಕುಡಿದರೆ ಅದು ಅಪರಾಧ ಎಂದು ಮಾಡುವುದು ಯಾವ ನೀತಿಯೋ ಗೊತ್ತಿಲ್ಲ. ಈ ಬಗ್ಗೆ ಈ ಸಭೆಯಲ್ಲಿ ಅನೇಕಸಾರಿ ಪ್ರಶ್ನೆಗಳನ್ನು ಕೇಳಿದ್ದಾರೆ, ಚರ್ಚೆ ಮಾಡಿದ್ದಾರೆ. ಕುಡಿತ ತೆಗೆದುಹಾಕಿರುವ ಜಿಲ್ಲೆಗಳಲ್ಲಿ ಏನು ಅನಾಹುತವಾಗಿದೆ ಎಂಬ ವಿಷಯವನ್ನು ಸಹ ಅಷ್ಟಾಗಿ ನಾನು ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಒಂದು ವಿಚಾರ ಮಾತ್ರ ಹೇಳಬೇಕಾಗಿದೆ. ಮದ್ಯಪಾನ ನಿರೋಧವನ್ನು ಇನ್ನೂ ಹೆಚ್ಚಾಗಿ ಜಾರಿಗೆ ತರುವುದಕ್ಕಾಗುವುದಿಲ್ಲ ಎಂದು ಹೇಳುತ್ತೀರಿ. ಜಾರಿಗೆ ತಂದಿರುವ ಜಾಗದಲ್ಲಿ ಯಶಸ್ವಿಯಾಗಿ ನಡೆಯದೇ ಇರುವುದಕ್ಕೆ ಕಾರಣ, ಅಲ್ಲಿ ಪೋಲೀಸ್‌ನವರು ಕುಡಿಯುತ್ತಾರೆ ಎನ್ನುವುದಾಗಲೀ, ಅಥವಾ ಇನ್ನಿತರ ಕಾರಣಗಳಾಗಲೀ ಅವೆಲ್ಲ ಸಣ್ಣ ಕಾರಣಗಳು. ಅನುಭವಪೂರ್ವಕವಾಗಿ ನನಗೆ ತಿಳಿದಿರುವ ಒಂದು ದೊಡ್ಡ ಕಾರಣ ಇದೆ. ಅದನ್ನು ಹೇಳಬೇಕಾಗಿದೆ. ಯಾರು ಕಳ್ಳಭಟ್ಟಿ ಸಾರಾಯಿ ತಯಾರು ಮಾಡುತ್ತಾರೆಯೋ, ಯಾರು ಶೇಕಡ 80, 90 ಮಾದಕ ಪದಾರ್ಥ ಇರತಕ್ಕ ಟಾನಿಕ್‌ಗಳನ್ನೂ ಮಾರುತ್ತಾರೆಯೋ ಅವರೆಲ್ಲರೂ ಈಗ ಒಬ್ಬರಲ್ಲಒಬ್ಬ ಮಂತ್ರಿಗಳ ಮಿತ್ರರಾಗಿದ್ದಾರೆ. ಆದುದರಿಂದ ಅವರಿಗೆ ಧೈರ್ಯವಿದೆ. ನಾನು ಹಿಂದೊಂದು ಸಾರಿ ಮಾತನಾಡಿದಾಗ ಹೇಳಿದೆ. ಹಿಂದೆ ಚನ್ನಪಟ್ಟಣದಲ್ಲಿ ಹಿಂದೂ ಮುಸ್ಲಿಂ ಗಲಭೆಯಾದಾಗ ಯಾವ ಮನುಷ್ಯನಿಗೆ ದುಡ್ಡಿಲ್ಲದೆ ಆತನಿಗೆ ನಾವು ರೈಲ್ವೆ ಟಿಕೆಟ್ ಕೊಡಿಸಿಕೊಟ್ಟು ಕೋರ್ಟಿಗೆ ಕಳುಹಿಸುತ್ತಿದ್ದೆವೋ ಅದೇ ಮನುಷ್ಯ ಇವೊತ್ತು ಕಳ್ಳಭಟ್ಟಿ ಸಾರಾಯಿ ತಯಾರುಮಾಡಿ ಲಕ್ಷಾಧಿಪತಿಯಾಗಿದ್ದಾನೆ. ಅಂತಹವರೇ ಈ ದಿನ ಮಂತ್ರಿಗಳಿಗೆ ಹೂವಿನಹಾರ, ತುರಾಯಿ ಹಾಕಿ ಮೆರವಣಿಗೆ ಮಾಡುವುದರಲ್ಲಿ ಮುಂದಾಳುಗಳು. ಅಷ್ಟೇ ಅಲ್ಲದೆ ಯಾವುದೊಂದಕ್ಕೇ ಆಗಲಿ ಚೀಫ್‌ಮಿನಿಸ್ಟರಿಗೆ, ಆ ಮಿನಿಸ್ಟರಿಗೆ ಈ ಮಿನಿಸ್ಟರಿಗೆ ಎಂದು ಹೇಳಿ ಪೋಸ್ಟಾಫೀಸುಗಳಿಂದ ಟೆಲಿಫೋನ್ ಟ್ರಂಕ್‌ಕಾಲ್ ರಿಜಿಸ್ಟರ್ ಮಾಡಿಸುತ್ತಾರೆ. ಅದನ್ನೆಲ್ಲಾ ನೋಡಿದರೆ ಅಧಿಕಾರಿಗಳಿಗೇ ಆಗಲಿ, ಬಾಕಿಯವರಿಗೇ ಆಗಲಿ ಭಯ ಉಂಟಾಗುತ್ತದೆ. ಎಲ್ಲಿ ಹೋಗಿ ಏನು ಹೇಳುತ್ತಾರೆಯೋ ಎಂದು ಹೆದರಿ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅನೇಕ ಅಧಿಕಾರಿಗಳಿಗೆ ಧೈರ್ಯ ಸಾಲುವುದಿಲ್ಲ. ಅವರೂ ನಮ್ಮ ಹಾಗೆಯೇ ಮನುಷ್ಯರು. ಮೈಸೂರು ಸಂಸ್ಥಾನದ ಅಧಿಕಾರಿಗಳ ವಿಚಾರದಲ್ಲಿ ನನಗೆ ತುಂಬ ಮೆಚ್ಚಿಗೆ, ತುಂಬಾ ಹೆಮ್ಮೆ ಇದೆ; ಅವರು ಬಹಳ ಧೈರ್ಯವಂತರು, ದಕ್ಷರು, ನಿಸ್ಪೃಹತೆಯಿಂದ ಕೆಲಸ ಮಾಡುವುದರಲ್ಲಿ ಹೆಸರುವಾಸಿಯಾದವರು. ಅಂಥವರೇ ಇಂದು ಕಳ್ಳಭಟ್ಟಿಯನ್ನು ಪತ್ತೆ ಹಚ್ಚುವುದಕ್ಕೆ ನಡುಗಿ ಹೋಗಿದ್ದಾರೆ. ಇನ್ನು ಕೆಲವರಲ್ಲಿ ಮನುಷ್ಯಸ್ವಭಾವ. ಯಾರದೋ ಮದುವೆಯಲ್ಲಿ ಉಂಡವನೇ ಜಾಣ ಎನ್ನುವಹಾಗೆ ಯಾರದೋ ದುಡ್ಡು ಯಾರೋ ತೆಗೆದುಕೊಳ್ಳುತ್ತಾರೆ, ನಮಗೆ ಬಂದಷ್ಟು ಬರಲಿ ಎಂದು ಕೆಲಸ ಮಾಡಿಕೊಂಡು ಹೋಗುವವರೂ ಇದ್ದಾರೆ. ಮನುಷ್ಯಸ್ವಭಾವ. ಅಂತೂ ನಿಷ್ಠಾವಂತ ಅಧಿಕಾರಿಗಳಲ್ಲಿ ಭಯವುಂಟಾಗಿದೆ. ಕಳ್ಳಭಟ್ಟಿ ಸಾರಾಯಿ ತಯಾರು ಮಾಡುವುದನ್ನು ಪತ್ತೆ ಮಾಡಿಕೊಟ್ಟರೂ ಕಣ್ಣುಮುಚ್ಚಿಕೊಂಡಿರುತ್ತಾರೆ. ಈ ವಿಷಯದಲ್ಲಿ ಈಗಾಗಲೇ ಪ್ರಶ್ನೆಗಳನ್ನು ಹಾಕಿ ಈ ಸಭೆಯಲ್ಲಿ ಚರ್ಚೆಯಾಗಿದೆ. ಹೀಗೆ ಅಕ್ರಮ ಮಾರ್ಗದಲ್ಲಿ ನಡೆಯುತ್ತ ಇರತಕ್ಕ ಜನಗಳ ಸಹಾಯ ಅವರ ಸೇವೆಗಳನ್ನು ಪರಿಗ್ರಹಿಸುವುದನ್ನು ಎಂದಿಗೆ ಈ ಮಂತ್ರಿಗಳಾಗಿರುವವರು ಕೈಬಿಡುತ್ತಾರೆಯೋ ಆಗ ಅಧಿಕಾರವರ್ಗದವರಲ್ಲಿ ಧೈರ್ಯ ಬರುತ್ತದೆ, ಅಕ್ರಮವಾಗಿ ನಡೆಯತಕ್ಕವರಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಮನಸ್ಸುಂಟಾಗುತ್ತದೆ. ಅಲ್ಲಿತನಕ ಮನಸ್ಸು ಬರುವುದಿಲ್ಲ.

ಆದ್ದರಿಂದ ನಾವು ಸರ್ಕಾರದಲ್ಲಿರತಕ್ಕ ಮಂತ್ರಿಗಳ ಸ್ನೇಹಿತನಾಗಿ, ಅವರ ಜೊತೆಯಲ್ಲಿ ಕೆಲಸ ಮಾಡಿದ ಮನುಷ್ಯನಾಗಿ ಹೇಳುತ್ತೇನೆ. ಅವರು ಈ ರೀತಿ ಹಗಲು ರಾತ್ರಿ ಇಂಥವರ ಜೊತೆಯಲ್ಲಿ ಓಡಾಡುವುದು, ಅವರ ಮಾತಿಗೇ ಬೆಲೆಕೊಡುವುದು, ಅವರಿಗೆ ತಮ್ಮ ಮೆರವಣಿಗೆಗೆ ಏರ್ಪಾಡು ಮಾಡಬೇಕೆಂದು ಹೇಳಿ ಕಳುಹಿಸುವುದು

(ಶ್ರೀ ಎಚ್. ಕೆ. ವೀರಣ್ಣಗೌಡ.)

ಸರಿಯಲ್ಲ. ಇಂಥ ವಿಚಾರಗಳು ಎಲ್ಲಿಯತನಕ ನಿಲ್ಲುವುದಿಲ್ಲವೋ ಅಲ್ಲಿಯತನಕ ಯಾವುದೊಂದು ಡಿಸ್ಟ್ರಿಕ್ಟನಲ್ಲಿಯೇ ಆಗಲಿ, ಊರಿನಲ್ಲಿಯೇ ಆಗಲಿ ಪಾನನಿರೋಧ ಯಶಸ್ವಿಯಾಗುವುದಿಲ್ಲ; ಸರ್ಕಾರಕ್ಕೆ ಬರುವ ದುಡ್ಡನ್ನು ಕಳೆದುಕೊಳ್ಳುತ್ತೀರಿ, ಅಲ್ಲದೆ. ಬೆಂಗಳೂರಿನಲ್ಲಿ ಕುಡಿಯುವವನನ್ನು ಭೇಷ್ ಎನ್ನುವುದು, ಚಿತ್ರದುರ್ಗದಲ್ಲಿ ಕುಡಿದರೆ ಕೋರ್ಟಿಗೆ ಕರೆದುಕೊಂಡು ಹೋಗಿ ಜನರ ಎದುರಿಗೆಲ್ಲಾ ಮಾನ ಕಳೆಯುವುದು ಒಬ್ಬರಿಗೊಬ್ಬರಿಗೆ ಭೇದವೆಣಿಸಿದಂತಾಗುತ್ತದೆ. ಇದು ಸರ್ಕಾರಕ್ಕೆ ಯೋಗ್ಯವಲ್ಲವೆಂದು ಮಾತ್ರ ಹೇಳುತ್ತೇನೆ.

*ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಕುಡಿತದ ದುಷ್ಪರಿಣಾಮದ ವಿಚಾರದಲ್ಲಿ ನನ್ನ ಅನೇಕ ಸ್ನೇಹಿತರು ಬಹಳವಾಗಿ ಆಗಲೇ ಮಾತನಾಡಿದ್ದಾರೆ. ಅವರು ಹೇಳುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಪಾನನಿರೋಧವನ್ನು ಸಂಸ್ಥಾನಾದ್ಯಂತ ಆದಷ್ಟು ಬೇಗನೆ ಜಾರಿಗೆ ತರಬೇಕೆಂದು ಹೇಳಿ ಈ ಸಭೆಯ ಆಶಯವಾಗಿದೆ. ಅದನು ಒತ್ತಾಯ ಪೂರ್ವಕವಾಗಿ ಕೂಡ ಈ ಸಭೆಯವರು ಹೇಳಿದ್ದಾರೆ. ಸಾರ್ವಜನಿಕರ ಅಭಿಪ್ರಾಯವೂ ಕೂಡ ಅದೇರೀತಿಯಿದೆ. ಇಷ್ಟಾದರೂ, ಈ ವಿಚಾರದಲ್ಲಿ ಸರ್ಕಾರದವರು ಅನುಸರಿಸುತ್ತಿರುವ ನೀತಿ ನನಗೆ ಸ್ವಲ್ಪವೂ ಸರಿಯಾಗಿಲ್ಲ. ಸಾರ್ವಜನಿಕರ ಹಿತದೃಷ್ಟಿಯಿಂದ, ಬಡವರ ಆರೋಗ್ಯಾಭಿವೃದ್ಧಿಯ ದೃಷ್ಟಿಯಿಂದ ಮತ್ತು ಅವರ ಆರ್ಥಿಕ ದೃಷ್ಟಿಯಿಂದ ಪಾನನಿರೋಧವನ್ನು ಜಾರಿಗೆ ತರಲೇ ಬೇಕು, ಇದು ಅತ್ಯಗತ್ಯವಾದದ್ದೆಂದು ಹೇಳಿ ಎಲ್ಲರೂ ಒತ್ತಾಯ ಮಾಡುತ್ತಿದ್ದರೂ, ಇಂಥ ವಿಚಾರದಲ್ಲಿ ಸರ್ಕಾರದವರು ತೀವ್ರ ಗಮನಕೊಡದಿರುವುದು, ಸಾರ್ವಜನಿಕರ ಅಭಿಪ್ರಾಯಕ್ಕೆ ಏನೂ ಮನ್ನಣೆ ಕೊಡದಿರುವುದು ಒಂದು ರೀತಿಯ ಮೊಂಡತನದ ನೀತಿ ಎಂದು ತಿಳಿದುಕೊಂಡಿದ್ದೇನೆ. ಸಾಮಾನ್ಯವಾಗಿ ಸರ್ಕಾರವನ್ನು ಪ್ರತಿಯೊಂದಕ್ಕೂ ಟೀಕಿಸುವುದು ನನ್ನ ಪದ್ಧತಿಯಲ್ಲ. ದೇಶಕ್ಕೆ ಒಳ್ಳೆಯದನ್ನು ಮಾಡಿದರೆ ಅದಕ್ಕೆ ಪ್ರಶಂಸೆ ಮಾಡುವವನು ನಾನು. ಹಾಗಿದ್ದರೂ, ಈ ಒಂದು ವಿಚಾರದಲ್ಲಿ ಮಾತ್ರ ಅವರು ಮಾಡುತ್ತಿರುವುದು ಸರಿಯೆಂದು ಯಾರೂ ಹೇಳುವುದಕ್ಕಾಗುವುದಿಲ್ಲ. ಈ ಮಂತ್ರಿಮಂಡಲ ಬಂದ ಮೊದಲನೆಯ ವರ್ಷ ಎರಡು ಮೂರು ತಾಲ್ಲೂಕುಗಳಲ್ಲಿ ತಂದರು. ಅಲ್ಲಿಂದೀಚೆಗೆ ಈ ಮೂರು ನಾಲ್ಕು ವರ್ಷಗಳೂ ಹಣಕಾಸಿನ ನೆಪವನ್ನು ಹಾಕಿಕೊಂಡು ಇದನ್ನು ಮುಂದುವರಿಸದೆ ಹಾಗೆಯೇ ಮುಂದಕ್ಕೆ ಹಾಕಿಕೊಂಡು ಬಂದಿದ್ದಾರೆ. ನಾವಾದರೋ ಈ ವರ್ಷ ಇಲ್ಲದಿದ್ದರೆ ಮುಂದಿನ ವರ್ಷ ಜಾರಿಗೆ ಕೊಡಬಹುದೆಂದು ಭಾವಿಸಿದ್ದೆವು. ಹೋದವರ್ಷ ಕೂಡ, ಈ ಸಾರಿ ಒಂದೆರಡು ಜಿಲ್ಲೆಗಳಲ್ಲಿ ಜಾರಿಗೆ ತರಬೇಕೆಂದು ಕಡ್ಡಾಯವಾಗಿ ಹೇಳಿದ್ದೆವು. ಆದರೆ, ಈ ವರ್ಷ ನೋಡುವಲ್ಲಿ, ಕೇಂದ್ರ ಸರ್ಕಾರವನ್ನು ಹಣಸಹಾಯಕ್ಕಾಗಿ ಕೇಳಿದ್ದೇವೆ, ಅದು ಬಂದ ಮೇಲೆ ಮುಂದಿನ ವರ್ಷ ಒಮ್ಮೆಗೇ ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ಕೇಂದ್ರದಿಂದ ಸಹಾಯ ಬಂದರೆ ಇವರು ಜಾರಿ ಮಾಡುತ್ತಾರೆಂಬುದೇನೋ ನಿಜವಿರಬಹುದು. ಆದರೆ, ಈ ವಾದ ಸರಿಯಲ್ಲ. ಅವರು ದುಡ್ಡು ಕೊಡಲಿ, ಕೊಡದಿರಲಿ ನಾವು ಮಾಡಲೇ ಬೇಕು. ನಾವು ಹಿಂದೆ ಪಾನನಿರೋಧವನ್ನು ತರಬೇಕೆಂದು ಹೇಳಿದಾಗ ಕೇಂದ್ರದಿಂದ ಬರುವ ಹಣದ ನಿರೀಕ್ಷಣೆಯನ್ನೇನೂ ಮಾಡಿ ಹೇಳಲಿಲ್ಲ. ಇದಕ್ಕಾಗಿಯೇ ಅಲ್ಲವೇ ಸೇಲ್ಸ್ ಟ್ಯಾಕ್ಸನ್ನು ನಾವು ಜಾರಿಗೆ ತಂದದ್ದು ! ಪಾನನಿರೋಧದಿಂದಾಗುವ ಖೋತಾವನ್ನು ಸರಿದೂಗಿಸುವುದಕ್ಕಲ್ಲವೇ ಇದನ್ನು ಮಾಡಿದ್ದು? ಹಾಗಿದ್ದರೂ ಪಾನನಿರೋಧವನ್ನು ಇಷ್ಟಕ್ಕೆ ನಿಲ್ಲಿಸಿದ್ದಾರೆ.

ಶ್ರೀ ಟಿ. ಚೆನ್ನಯ್ಯ (ಜನಾರೋಗ್ಯ ಮತ್ತು ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ನಮ್ಮ ಒಂದು ಸರ್ಕಾರವೇ ಅಲ್ಲ ಈರೀತಿ ಮಾಡಿರುವುದು. ಪತ್ರಿಕೆಗಳಲ್ಲಿ ಕೂಡ ತಾವು ನೋಡಿರಬಹುದು. ಬೊಂಬಾಯಿ, ಮಧ್ಯ ಪ್ರದೇಶ ಮುಂತಾದ ಪ್ರತಿಯೊಂದು ಪ್ರದೇಶದವರೂ ಪಾನನಿರೋಧವನ್ನು ತಕ್ಷಣವೇ ಜಾರಿಗೆ ತರುವ ವಿಚಾರದಲ್ಲಿ ತಮ್ಮ ಖಚಿತವಾದ ಅಭಿಪ್ರಾಯವನ್ನು ಹೇಳಿದ್ದಾರೆ. ಪಾರ್ಲಿಮೆಂಟಿನಲ್ಲಿ ಒಂದು ಹೇಳಿಕೆ ಕೂಡ ಈ ಬಗ್ಗೆ ಬಂದಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಇರಬಹುದು. ಆದರೆ, ನಮ್ಮದು ಮಾದರಿ ಸಂಸ್ಥಾನ. ಇನ್ನೊಂದು ಸಂಸ್ಥಾನವನ್ನು ನಾವು ಅನುಕರಿಸಬೇಕಾಗಿಲ್ಲ. ನಮ್ಮ ಜನರ ಹಿತದೃಷ್ಟಿಯಿಂದ ಯಾವುದು ಒಳ್ಳೆಯದೆಂಬುದನ್ನು ನಾವು ಹೇಳುತ್ತಿದ್ದೇವೆ. ಒಂದೇ ಸಾರಿ ಸಂಸ್ಥಾನಾದ್ಯಂತ ಜಾರಿಗೆ ತರುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ, ವರ್ಷವರ್ಷವೂ ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ ಯಾವ ವರ್ಷವೂ ತಟಸ್ಥರಾಗದೆ ಪಾನನಿರೋಧವನ್ನು ಜಾರಿಗೆ ಕೊಟ್ಟಿದ್ದರೆ ಇಷ್ಟು ಹೊತ್ತಿಗೆ ಎಲ್ಲ ಡಿಸ್ಟ್ರಿಕ್ಟ್‌ಗಳಲ್ಲೂ ಬರುತ್ತಿತ್ತು. ಅದೂ ಮಾಡಲಿಲ್ಲ. ಈಗೇನು ಪಾನನಿರೋಧ ಜಾರಿಗೆ ತಂದಿದೆಯೆಂದು ಹೇಳಿದ್ದಾರೋ ಅದರಿಂದ ವಾಸ್ತವವಾಗಿ ಏನೂ ಆಗಿಲ್ಲವೆಂದು ಹೇಳಬೇಕು. ಏಕೆಂದರೆ, ಆಗ್ಗೆ ವರಮಾನ ಎಷ್ಟು ಬರುತ್ತಿತ್ತೋ ಈಗಲೂ ಅಷ್ಟೇ ಬರುತ್ತಿದೆ. ಅಂದರೆ, ಪಾನನಿರೋಧವನ್ನು ನೀವು ಎಲ್ಲಿ ಜಾರಿಗೆ ಕೊಟ್ಟಿದ್ದೀರೋ ಅಲ್ಲಿ ಯಶಸ್ವಿಯಾಗಿ ಅದು ನಡೆಯುತ್ತಿಲ್ಲ. ಇದಕ್ಕೆ ಕಾರಣ, ಸರ್ಕಾರದವರು ಇದರ ವಿಷಯದಲ್ಲಿ ಎಷ್ಟು ತೀವ್ರತೆಯಿಂದ ಇರಬೇಕಾಗಿತ್ತೋ ಅಷ್ಟು ತೀವ್ರತೆಯಿಂದ ಇರಲಿಲ್ಲ. ಹೇಗೆ ಚೆನ್ನಾಗಿ ನಡೆಯಬೇಕಾಗಿತ್ತೋ ಹಾಗೆ ನಡೆಸುವುದಕ್ಕೆ ಪ್ರಯತ್ನಮಾಡಿದ್ದರೆ, ಶ್ರೀಮಾನ್ ಚಂದ್ರಶೇಖರಯ್ಯನವರು ಹೇಳಿದ Bottle Tonic ಏಕಾಯಿತು ಎಂಬುದನ್ನು ತಿಳಿಯುವುದಕ್ಕೆ ಪ್ರಯತ್ನ ಪಟ್ಟಿದ್ದರೆ ಬಹುಮಟ್ಟಿಗೆ ಪಾನನಿರೋಧ ಯಶಸ್ವಿಯಾಗುತ್ತಿತ್ತು. ಮಂತ್ರಿಗಳ ಪ್ರವಾಸದ ವಿಚಾರದಲ್ಲಿ ಬಹಳಮಟ್ಟಿಗೆ ಟೀಕೆಗಳು ಬರುತ್ತಿವೆ. ಪ್ರವಾಸ ಮಾಡುವುದು ತಪ್ಪೆಂದು ನಾನು ಹೇಳುವುದಿಲ್ಲ. ಹಾಸನ ತಾಲ್ಲೂಕಿನಲ್ಲಿ, ಮಂಜರಾಬಾದು ಅರಕಲಗೂಡು ಕಡೆಗೆ ಒಂದು opening ceremonyಯಿದ್ದರೂ ಹೋಗಿ ಮಾಡಿಕೊಂಡು ಬರುತ್ತೀರಿ. ಅದರಂತೆಯೇ, ಆ ಪ್ರದೇಶದಲ್ಲಿ ಪ್ರೊಹಿಬಿಷನ್ ಜಾರಿಗೆ ಕೊಟ್ಟಿರುವಾಗ ಅದು ಯಶಸ್ವಿಯಾಗಿ ನಡೆಸುವ ದೃಷ್ಟಿಯಿಂದ ಹತ್ತಾರು ಕಾನ್ಫರೆನ್ಸುಗಳನ್ನು ಏರ್ಪಾಡುಮಾಡಿ ಜನರಲ್ಲಿ ಈ ವಿಷಯದಲ್ಲಿ ತಕ್ಕಷ್ಟು ಪ್ರಚಾರ ನಡೆಸಿದ್ದರೆ ಖಂಡಿತ ನಿಮ್ಮ ಪ್ರಯತ್ನ ಯಶಸ್ವಿಯಾಗುತ್ತಿತ್ತು. ಈಗಲೂ ತಾವು ಪಾನನಿರೋಧ ಜಾರಿಗೆ ಕೊಟ್ಟಿರುವ ಕಡೆ,—ಪಾನನಿರೋಧ ಏನೂ ಪರಿಣಾಮವನ್ನುಂಟುಮಾಡಿಲ್ಲವೆಂದು ನಾನು ಹೇಳುವುದಿಲ್ಲ—ಶೇಕಡ 50 ರಷ್ಟು ಮಾತ್ರ ಜಯಪ್ರದವಾಗಿದೆಯೆಂದು ಹೇಳಬಹುದು. ನಿಮ್ಮ ತಾತ್ಸಾರ ಭಾವನೆಯಿಂದ ಇನ್ನೂ ಐವತ್ತು ಭಾಗ ಯಶಸ್ವಿಯಾಗಿಲ್ಲವೆಂದು ಹೇಳಬಹುದು. ನಮ್ಮ ಅರಕಲಗೂಡು ತಾಲ್ಲೂಕಿಗೆ ಬಂದಿರತಕ್ಕ ಪೋಲೀಸ್ ಅಧಿಕಾರಿಗಳ ಪೈಕಿ ಬಹುಜನ ದುರದೃಷ್ಟವಶಾತ್ ಕುಡಿಯುವವರೇ ಆಗಿದ್ದಾರೆ. ಅಂಥವರನ್ನು ಅಲ್ಲಿಗೆ ಹಾಕಿದರೆ ಹೇಗೆ ತಾನೆ ಪಾನನಿರೋಧ ಯಶಸ್ವಿಯಾದೀತು ! ಪಾನನಿರೋಧವನ್ನು

ಜಾರಿಗೆ ಕೊಡಬೇಕಾದರೆ ಪೋಲೀಸ್ ಅಧಿಕಾರಿಗಳೇ ಜಾರಿಗೆ ಕೊಡಬೇಕೆಂದೇನೂ ಇಲ್ಲ, ನಿಜ. ಆದರೂ ಕುಡಿಯದೆ ಇರತಕ್ಕ ಅಧಿಕಾರಿಗಳನ್ನು, ಪಾನನಿರೋಧದಲ್ಲಿ ನಂಬಿಕೆಯಿರತಕ್ಕ ಅಧಿಕಾರಿಗಳನ್ನು, ನೇಮಕ ಮಾಡಿಕೊಳ್ಳುವುದರಿಂದ ಹೆಚ್ಚಿನ ಪರಿಣಾಮಕಾರಿಯಾಗಿ ಕೆಲಸ ನಡೆಯುತ್ತದೆ. ನಾನೀಗ ಎರಡು ವರ್ಷದಿಂದ ನಮ್ಮ ಅರಕಲಗೂಡು ತಾಲ್ಲೂಕಿನಲ್ಲೇ ಅಲ್ಲಿ ಹಳ್ಳಿ ಹಳ್ಳಿಯಲ್ಲೂ ಸುತ್ತಿನೋಡಿದ್ದೇನೆ. ಪುಣ್ಯವಶಾತ್ ಪೋಲೀಸ್ ಇನ್ಸ್‌ಪೆಕ್ಟರು, ಸಬ್ ಇನ್‌ಸ್ಪೆಕ್ಟರು ಯೋಗ್ಯರು, ಈ ಸ್ಕೀಮಿನಲ್ಲಿ ನಂಬಿಕೆಯುಳ್ಳವರು. ಆದ್ದರಿಂದಲೇ ಬಹುಮಟ್ಟಿಗೆ ಯಶಸ್ವಿಯಾಗಿ ನಡೆಯುತ್ತಿದೆ. ಕಳ್ಳತನದಿಂದ ಮಾರಗಳನ್ನು ಕಟ್ಟುವುದು, ಕುಡಿಯುವುದು ಎಲ್ಲಿಯೂ ಕಂಡು ಬರುತ್ತಿಲ್ಲ. ನಮ್ಮ ಜಿಲ್ಲೆಯ ಅಸೆಂಬ್ಲಿ ಸದಸ್ಯರು ಸೇರಿ

4 P.M.

ಹೋದಸಾರಿ ಒಂದು ಅರ್ಜಿಗೆ ರುಜುಮಾಡಿ ಇಂಥಿಂಥ ತಾಲ್ಲೂಕ್‌ಗಳಲ್ಲಿ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಕೊಟ್ಟಿದ್ದೇವೆ. ಆದರೆ ಆಚೆಕಡೆ ಅರಕಲಗೂಡು, ಆಲೂರ್ ತಾಲ್ಲೂಕ್‌ಗಳ ಎರಡು ಫರ್ಲಾಂಗ್ ದೂರದಲ್ಲಿ ಗೊರೂರಿನಲ್ಲಿ ಸೇಂದಿ ಅಂಗಡಿಗಳನ್ನು ಇಟ್ಟಿದ್ದಾರೆ. ಈ ರೀತಿ ಪಕ್ಕದಲ್ಲಿ ಸೇಂದಿ ಅಂಗಡಿಗಳನ್ನು ಇಟ್ಟಿದ್ದರೆ, ದೇಶದಲ್ಲಿ Prohibition ಜಾರಿಗೆ ಕೊಟ್ಟಿರುವುದು ಜಯಪ್ರದವಾಗಬೇಕು ಎನ್ನುವ ಧ್ಯೇಯ ನಮ್ಮ ಸರ್ಕಾರಕ್ಕೆ ಇದೆ ಎಂದು ಹೇಗೆ ನಂಬುವುದು ! ಸರ್ಕಾರಕ್ಕೆ ಹೋದವರ್ಷ ಸೇಂದಿ ಅಂಗಡಿಗಳನ್ನು ದೇಶಾದ್ಯಂತ ಮುಚ್ಚಿಸಬೇಕೆಂದು ಒಂದು ಅರ್ಜಿಯನ್ನು ರುಜುಮಾಡಿ ಕೊಟ್ಟೆವು. ಆದರೂ ಅದೇನೂ ಸಫಲವಾಗಲಿಲ್ಲ. ಸರಕಾರಕ್ಕೆ ಬರುವ ವರಮಾನ ಬರಬೇಕು. Prohibition policy ಸಂಸ್ಥಾನದ ಅನೇಕ ಕಡೆ ನಡೆಸುತ್ತೇವೆ ಎಂದು ಹೇಳಬೇಕು ಎಂಬ ಹಾಗೆ ತೋರುತ್ತದೆ. ಸುಮ್ಮನೆ ಭಾಷಣಗಳನ್ನು ಮಾಡಿ ಪದೇಪದೇ ಇದನ್ನು ಹೇಳುವುದು ಚೆನ್ನಾಗಿಲ್ಲ. ಸರ್ಕಾರದವರು ಈ ವರ್ಷದಲ್ಲಿ ಖರ್ಚುಗಳನ್ನು ಕಡಿಮೆ ಮಾಡಲು ಬೇಕಾದಷ್ಟು ಬಾಬುಗಳಿವೆ. ಪಾನನಿರೋಧದ ವಿಚಾರದಲ್ಲಿ ಜನರನ್ನು ನೀತಿವಂತರನ್ನಾಗಿ, ಸತ್ಯವಂತರನ್ನಾಗಿ ಮಾಡಲು Cultural scheme ಏರ್ಪಡಿಸಿ ಬೆಂಗಳೂರು—ಮೈಸೂರಿನಿಂದ ಹಾಸನದ ಹಳ್ಳಿಗಳಿಗೆ ಭಾಷಣಕಾರರನ್ನು ಕಳುಹಿಸುತ್ತಾರೆ. ಅದಕ್ಕೋಸ್ಕರ 4-5 ಲಕ್ಷ ರೂಪಾಯಿಗಳ ಖರ್ಚನ್ನು ಇಟ್ಟಿದ್ದೀರಿ. ಅವರು ಕುಡಿಯುವುದಕ್ಕೆ ಬದ್ದು ಅವರ ಆರೋಗ್ಯವನ್ನು ಹಾಳುಮಾಡಿಕೊಂಡು ಮನುಷ್ಯತ್ವ ಕಳೆದುಕೊಂಡು ಅನೀತಿವಂತರಾಗಿರುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಇನ್ನೊಂದುಕಡೆ ಕುಡಿತ ಅನೀತಿವಂತರನ್ನಾಗಿ ಮಾಡುತ್ತದೆ, ಕಳ್ಳತನ ಮಾಡಬೇಡಿ, ಕುಡಿಯಬೇಡಿ, ದ್ರೋಹಮಾಡಬೇಡಿ ಎಂದು ಅನಾವಶ್ಯಕವಾಗಿ Propaganda ಮಾಡಲು ಜನರನ್ನು ಕಳುಹಿಸುತ್ತಿದ್ದೀರಿ. Top priority ಇಲ್ಲದೇ ಇರುವ ಅನೇಕ ಖರ್ಚು ಬಾಬುಗಳನ್ನು ಕಡಿಮೆ ಮಾಡಿ. ಮುಖ್ಯವಾಗಿ ಜನಗಳ ನೈತಿಕ ಬಲವನ್ನು ಹೆಚ್ಚಿಸುವುದಕ್ಕೆ, ಆರೋಗ್ಯವನ್ನು ಉತ್ತಮಪಡಿಸುವುದಕ್ಕೆ ಪಾನನಿರೋಧ ಎನ್ನುವುದು ಬಹಳ ಮುಖ್ಯವೆಂದು ಪ್ರತಿಯೊಬ್ಬರೂ ತಿಳಿದುಕೊಂಡಿದ್ದೇವೆ, ನಮಗೆ ಈ ಪಾನನಿರೋಧ ವಿಚಾರದಲ್ಲಿ ಅನುಮಾನವಿಲ್ಲ. ಆದರೆ ಪಾನನಿರೋಧವನ್ನು ವಜಾ ಮಾಡಬೇಕು, ಪುನಃ ಕುಡಿತವನು introduce ಮಾಡಬೇಕು ಎಂದು Kolar Gold Fieldsನಲ್ಲಿ ಜನರು ಅಭಿಪ್ರಾಯ ಪಡುತ್ತಾರೆ ಎಂದು ಹೇಳುತ್ತಿದ್ದಾರೆ. ಅಲ್ಲಿ ಸರಿಯಾಗಿ ಪ್ರಚಾರ ಇಲ್ಲದೇ ಇರುವುದರಿಂದ, ಸರಿಯಾಗಿ ತಿಳಿವಳಿಕೆ ಕೊಡಲು ನಾಯಕತ್ವ ಇಲ್ಲದೇ ಇರುವುದರಿಂದ ಆ ರೀತಿ ಕುಡಿತಬೇಕು ಎಂದು ಹೇಳುತ್ತಿರಬಹುದು. ನಮ್ಮ ಕಡೆಯ ಜನಗಳ ಅಭಿಪ್ರಾಯವನ್ನು ತಿಳಿದುಕೊಂಡಿದ್ದೇನೆ. ಮತ್ತೆ ಪುನಃ ಇದನ್ನು introduce ಮಾಡಬೇಕೆಂದು ಸರ್ಕಾರದ ಅಭಿಪ್ರಾಯವಿದೆ. ನೀವು ಏನು ಹೇಳುತ್ತೀರಿ ಎಂದು ಕೇಳಿದ್ದಕ್ಕೆ, ಕುಡಿಯುವುದಕ್ಕೆ ಖರ್ಚುಮಾಡುವ ದುಡ್ಡನ್ನು ಉಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಬಟ್ಟೆಬರೆಗಳನ್ನು ಹೆಚ್ಚಾಗಿ ಹಾಕಿಕೊಳ್ಳುತ್ತಿದ್ದೇವೆ, ಜಮೀನು ಉಳುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಜನಗಳಿಗೆ Prohibitionನಿಂದ ಆಗಿರತಕ್ಕ ಉಪಕಾರದ ವಿಚಾರದಲ್ಲಿ ಅನುಮಾನವಿಲ್ಲ. ಆದ್ದರಿಂದ ಒಂದು ರೀತಿಯಲ್ಲಿ ನಮ್ಮ ಹಿತದೃಷ್ಟಿಯಿಂದ, ಈ ಸಭೆಯ ಹಿತದೃಷ್ಟಿಯಿಂದ Prohibitionನನ್ನು ಈ ವರ್ಷ ಕೆಲವಾರು ತಾಲ್ಲೂಕುಗಳಲ್ಲಿ ಜಾರಿಗೆ ಕೊಡಬೇಕು. ಹಾಗೆ ಜಾರಿಗೆ ತಾರದೇ ಇದ್ದರೆ, ಜನಗಳಿಗೆ ಎಲ್ಲಕ್ಕಿಂತಲೂ ಮುಖ್ಯವಾಗಿ ಇಂತಹ ಉಪಕಾರ ಕೆಲಸವನ್ನು ಮಾಡದೆ ಅವರನ್ನು ತಾತ್ಸಾರವಾಗಿ ಕಂಡರೆ, ಮುಂದೆ electionನಲ್ಲಿ ಓಟು ಕೇಳಬೇಕಾದರೆ ಬಹಳ ನಾಚಿಕೆಗೇಡಿನ ಕೆಲಸವಾಗುತ್ತದೆ. ಆದ್ದರಿಂದ Prohibitionನನ್ನು ಜಾರಿಗೆ ಖಂಡಿತವಾಗಿ ಕೊಡಬೇಕು ಎಂದು ಹೇಳುತ್ತೇನೆ.

Mr. DEPUTY SPEAKER.—The House will now rise for lunch and meet at 4-35 P.M.

The House rose for Lunch at Five Minutes past Four of the Clock and met again at Thirty-five Minutes past Four of the Clock.

[MR. DEPUTY SPEAKER in the Chair].

* ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಮಾನ್ಯಸಭಾಧ್ಯಕ್ಷರೇ, ನನ್ನ ಮಾನ್ಯ ಅನೇಕ ಸದಸ್ಯರೆಲ್ಲರೂ ಕೂಡ ಈ ಪಾನ ನಿರೋಧದ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದಾರೆ. ನಮ್ಮ ಸರ್ಕಾರದ ಮತ್ತು ಹಿಂದೂಸ್ಥಾನದ ಸರ್ಕಾರದ ನೀತಿ ಏನಿದೆಯೋ ಅದನ್ನು ನಾನೂ ಕೂಡ ತುಂಬ ಹೃತ್ಪೂರ್ವಕವಾಗಿ ಒಪ್ಪಿಕೊಳ್ಳುತ್ತೇನೆ. ಮಹಾತ್ಮಾ ಗಾಂಧಿಯವರು ಜೀವಂತರಾಗಿದ್ದಾಗ ಯಾವ ಒಂದು ಕೆಲಸ ಮಾಡಬೇಕಾದರೂ ಕೂಡ ತಮ್ಮ ಕೆಲಸವನ್ನು ಜನತೆಯ ಮುಂದೆ ಇಟ್ಟು ಜನತೆಯ ಆದರ ಸಿಕ್ಕಿದರೇನೇ ಆ ಕೆಲಸ ಮಾಡಬೇಕೆಂದು ತನ್ನ ಪ್ರಾರ್ಥನಾ ಸಭೆಯಲ್ಲಿ ಹೇಳಿದ್ದನ್ನು ಕೇಳಿರುವವರಲ್ಲಿ ನಾನೂ ಒಬ್ಬ. ಅದನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಅದನ್ನು ನಾವು ಕೇಳಿರಬೇಕು. ಈ ನೀತಿಗಳಲ್ಲಿ ಪಾನನಿರೋಧದ ನೀತಿ ಕೂಡ ಒಂದು. ಆದರೆ ಹಿಂದೂಸ್ಥಾನ ಸರ್ಕಾರ ಮತ್ತು ನಮ್ಮ ಸರ್ಕಾರದಲ್ಲಿ ಒಂದು ವಿಷಯವನ್ನು ಪ್ರಸ್ತಾಪಮಾಡಬೇಕೆಂದು ಇಷ್ಟಪಡುತ್ತೇನೆ. ಕುಡಿತವನ್ನು ಏತಕ್ಕೋಸ್ಕರ ಹಿಂದಿನ ಕಾಲದಲ್ಲಿ ಒಪ್ಪಿಕೊಳ್ಳುತ್ತಿದ್ದರು, ಕುಡಿತವು ಎಷ್ಟು ವರ್ಷಗಳಿಂದ ಜಾರಿಯಲ್ಲಿದೆ ಎಂಬ ಅಂಶವನ್ನು ನಮ್ಮ ಕೇಂದ್ರ ಸರ್ಕಾರದ

(ಶ್ರೀ ವಿ. ಆರ್. ನಾಯ್ಡು.)

ಮತ್ತು ತಮ್ಮ ಅವಗಾಹನೆಗೆ ತರಬೇಕೆಂದು ಇಷ್ಟಪಡುತ್ತೇನೆ. 3,800 ವರ್ಷಗಳ ಹಿಂದೆ ಸುರ ಮತ್ತು ರಾಕ್ಷಸರು ಇದ್ದಾಗ ಅವರ ದೇವಲೋಕದಲ್ಲಿ ಶಿವ ತಾಂಡವ ನೃತ್ಯ ಮಾಡುತ್ತಿರುವಾಗ ಸುರಾಪಾನ ಮಾಡುತ್ತಿರಲಿಲ್ಲವೇ ? ಮನುಷ್ಯನ ಶಕ್ತಿಯನ್ನು ಹೆಚ್ಚಿಸುವುದಕ್ಕೋಸ್ಕರ, ಮನುಷ್ಯನ ಗಮನವನ್ನು ಒಂದೇ ಕಡೆ ಇರಿಸುವುದಕ್ಕೋಸ್ಕರ, ಮನುಷ್ಯನಿಗೆ ಒಂದು ಕ್ರೋಧ ಬರುವುದಕ್ಕೋಸ್ಕರ ಕುಡಿಯುತ್ತಿದ್ದರು. ಇದನ್ನು ಕುಡಿದು ಅನೇಕ ರಾಕ್ಷಸರನ್ನು ಧ್ವಂಸ ಮಾಡುತ್ತಿದ್ದರು. ನಮ್ಮ ದೇಶದ ಜನರು ಆ ವಿಷಯವನ್ನು ತಿಳಿದುಕೊಂಡಿದ್ದಾರೆ. ವಿಸ್ಕಿ, ಬ್ರಾಂದಿ, ಎಂದು ಏನು ಹೇಳುತ್ತಿದ್ದೇವೋ ಆ ಹೆಸರು ಆಗ ಇರಲಿಲ್ಲ. ಅನೇಕ ಕಡೆಗಳಲ್ಲಿ ಸನ್ಯಾಸಿಗಳು, ಕುಟೀರದಲ್ಲಿ ಇದ್ದು ಭಂಗಿಯನ್ನು ಸೇವಿಸುತ್ತಿದ್ದರು. ಈ ಸರ್ಕಾರಕ್ಕೂ, ಆ ಸರ್ಕಾರಕ್ಕೂ ಹೇಳುತ್ತಿದ್ದೇನೆ. ಕುಡಿತವು ತಾನಾಗಿ ಹೋಗುವುದಿಲ್ಲ. ಬ್ರಹ್ಮ, ವಿಷ್ಣು, ಮಹೇಶ್ವರರ ಕಾಲದಲ್ಲಿ, ರಾಜಾಧಿರಾಜರ ಕಾಲದಲ್ಲಿ, ದೇವಲೋಕದಲ್ಲಿ ಶಿವ ತಾಂಡವನೃತ್ಯಮಾಡುವ ಕಾಲದಲ್ಲಿ ದೇಶಕಲ್ಯಾಣಕ್ಕೋಸ್ಕರ ಸುರಾಪಾನ ಮಾಡಿ ಸಂತೋಷದಿಂದ ಇರುತ್ತಿದ್ದರು. ಹೀಗಿರುವಾಗ ಇಂತಹ ನಿಬಂಧನೆಗಳನ್ನು ತಂದು ದೇಶಕ್ಕೋಸ್ಕರ ಒಳ್ಳೆಯದನ್ನು ಮಾಡುವುದಕ್ಕೆ ಹೋಗಿ ಹೆಚ್ಚು ಕಡಿಮೆಯಾಗುತ್ತದೆ ಎಂದರೆ ತಪ್ಪಾಗಲಾರದು. ಇದು ದೈವಾಂಶದಿಂದ ಬಂದಿರುವುದು. ಇದನ್ನೆಲ್ಲಾ ಗಮನದಲ್ಲಿಟ್ಟುಕೊಳ್ಳಬೇಕು. ಪಾನನಿರೋಧವನ್ನು ಜಾರಿಗೆ ತಂದಿದ್ದಾರೆ. ಹೇಗೆ ಜ್ಯಾರಿಗೆ ತಂದಿದ್ದಾರೆ ಎಂದು ಯೋಚನೆ ಮಾಡಿದರೆ, ಹಿಂದೆ ಲಕ್ಕವಳ್ಳಿ ಮುಂತಾದ ದೊಡ್ಡ ಕಾಮಗಾರಿಗಳು ನಡೆಯುವ ಸ್ಥಳಗಳಲ್ಲಿ, ಒಂದು ಸಂಸಾರದಲ್ಲಿ ಗಂಡಹೆಂಡತಿ ಐದಾರು ಮಕ್ಕಳು ಇದ್ದರೆ, ಪಾನವನ್ನು ಅಂಗಡಿಯಲ್ಲಿ ಮಾರುತ್ತಿದ್ದ ಕಾಲದಲ್ಲಿ, ಗಂಡ ಎಂಟಾಣೆಯನ್ನು ಜೇಬಿಗೆ ಹಾಕಿಕೊಂಡು ಗುಟ್ಟಾಗಿ ಮನೆಯಲ್ಲಿ ಇನ್ನಾರಿಗೂ ಗೊತ್ತಿಲ್ಲದಂತೆ ಹೋಗಿ ಕುಡಿದು ಬರುತ್ತಿದ್ದ. ಈಗ ಗಂಡ ಕುಡಿಯುವುದಲ್ಲದೆ ಹೆಂಡತಿ ಮಕ್ಕಳು ಕೂಡ, ಕೊನೆಗೆ ಮನೆಯಲ್ಲಿ ಅಕ್ಕಯ್ಯ ಇದ್ದರೆ ಅವಳೂ ಕೂಡ ರುಚಿ ನೋಡುವುದಕ್ಕೆಂದು ಕುಡಿಯುತ್ತಿದ್ದಾರೆ. ಮನೆ ಮನೆಯಲ್ಲಿಯೂ ಕೂಡ ಕಳ್ಳಭಟ್ಟಿ ಆಗುತ್ತಿದೆ. ನಾವು ಅನುಸರಿಸಿದ ನೀತಿ ಏನಾಗಿದೆ ಎಂಬುದನ್ನೂ ನೋಡಬೇಡವೆ ? ಇದು ಏಕೆ ಹೀಗಾಯಿತು ಎಂದು ನನಗೆ ಯೋಚನೆಯಾಗಿದೆ. ಯಾರೂ ನಾನು ಹೇಳುವುದನ್ನು ತಪ್ಪಾಗಿ ಭಾವಿಸಬಾರದು ; ಇರುವುದನ್ನು ಹೇಳುತ್ತೇನೆ. ಭಿನ್ನಾಭಿಪ್ರಾಯವಿದೆ ಎಂದರೆ, ಆ ಗುಂಪಿನವರಿಗೂ ಬೇಡ, ಇವರಿಗೂ ಬೇಡ, ಅವರೂ ಸುಸ್ತಾಗಿದ್ದಾರೆ, ಇವರೂ ಸುಸ್ತಾಗಿದ್ದಾರೆ, ಅಧಿಕಾರವನ್ನು ನನಗೆ ಕೊಡಿ. ಸರ್ಕಾರವನ್ನು ನನಗೆ ಕೊಟ್ಟು ನೋಡಿ. . . .

ಒಬ್ಬ ಸದಸ್ಯರು.—ಮುಖ್ಯಮಂತ್ರಿಗಳ ಪೋರ್ಟ್‌ಫೋಲಿಯೊ ಯಾರಿಗೆ ?

ಶ್ರೀ ವಿ. ಆರ್. ನಾಯ್ಡು.—ಮುಖ್ಯಮಂತ್ರಿಗಳ ಪೋರ್ಟ್‌ಫೋಲಿಯೊ ನನಗೆ ಕೊಡಿ, ಅಧ್ಯಕ್ಷರೆ, ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ರಾಜ್ಯದಲ್ಲಿ ಹೇಗೆ ತಾಂಡವವಾಡಬೇಕೆಂಬುದು ನನಗೆ ಗೊತ್ತು (ನಗು !)

ಉಪಾಧ್ಯಕ್ಷರು.—ಕೊಡುವುದಕ್ಕೆ ನನಗೆ ಅಧಿಕಾರವಿಲ್ಲ (ನಗು !)

ಶ್ರೀ ವಿ. ಆರ್. ನಾಯ್ಡು.—ಪೂರ್ವದಲ್ಲಿ ವಿಜಯನಗರದಲ್ಲಿ ರಾಜ್ಯವನ್ನಾಳುವವರು ಹೇಗೆ ಮಾಡಿದ್ದಾರೋ ಹಾಗೆ ಮಾಡುತ್ತೇನೆ. ಜನರಿಗೆ ಯಾವ ಯಾವ ಸೌಖ್ಯಬೇಕೋ, ಸೌಕರ್ಯಬೇಕೋ ಅದನ್ನೆಲ್ಲಾ ಮಾಡಿಕೊಡುತ್ತೇನೆ.

ಸುರಾಪಾನದ ವಿಷಯ ಹೇಳುವುದಾದರೆ, ಇಂದಿಗೂ ಕೂಡ ಅನೇಕ ಜನಗು ಹೆಂಡ, ಸಾರಾಯಿ ಇವುಗಳನ್ನು ಮುನೇಶ್ವರ, ಕಾಳಮ್ಮ ಮುಂತಾದ ದೇವತೆಗಳಿಗೆ ಕೈಮುಗಿದು ನೈವೇದ್ಯ ಮಾಡುವುದು ತಮಗೂ ಗೊತ್ತಿರುವ ವಿಷಯ. ಹೀಗೆ ಭಕ್ತಿಯ ಪೂಜೆ ಮಾಡಿ ವರ ಪಡೆಯುವುದನ್ನು ತಪ್ಪಿಸಬೇಕೆಂದು ಪ್ರಯತ್ನಪಟ್ಟರೆ ಹೇಗೆ ? ಕುಡಿಯುವವರು ಕುಡಿಯುತ್ತಾರೆ. ಇದರಲ್ಲಿ ಒತ್ತಾಯವೇನೂ ಇಲ್ಲ. ಕ್ಲೋಸ್‌ಪೇಟೆಯ ಗಡಿಯಲ್ಲಿ ಪಾನನಿರೋಧವಿಲ್ಲ, ಅಲ್ಲಿಗೆ ಕೊಯಮತ್ತೂರು, ಸೇಲಂ ಮುಂತಾದ ಕಡೆಗಳಿಂದ ಬಂದು ಕುಡಿಯುತ್ತಾರೆ. ಹಿಂದೆ ಎರಡು ಊರುಗಳಲ್ಲಿ ಆಗುತ್ತಿದ್ದ ಉತ್ಪತ್ತಿ ಈಗ ಒಂದೇ ಊರಿನಲ್ಲಿ ಆಗುತ್ತಿದೆ. ಕುಡಿಯುವುದೂ ತಪ್ಪಿಲ್ಲ, ದೇವತೆಗಳಿಗೂ ತೊಂದರೆ ಕೊಟ್ಟ ಹಾಗಿದೆ. ಹಾಗಾದರೆ ಸುಖವಿಲ್ಲ. ಇದನ್ನು ಪರಿಶೀಲನೆಮಾಡಿ ಸಂಪೂರ್ಣವಾಗಿ ಜಾರಿಗೆ ತಂದರೆ ನನಗೆ ಸಂತೋಷ, ನನ್ನ ಬೆಂಬಲವಿದೆ, ಒಂದು ವರ್ಷ ಹೀಗೆ ತಂದು ನೋಡುವುದು, ಅದೇನಾದರೂ ಯಶಸ್ವಿಯಾಗದಿದ್ದರೆ ಮತ್ತೆ ಬದಲಾಯಿಸಬಹುದು.

ನಮ್ಮ ಸ್ನೇಹಿತರಾದ ಶ್ರೀ ವೈ. ಎಂ. ಚಂದ್ರಶೇಖರಯ್ಯನವರೂ, ಶಿವಪ್ಪನವರೂ ಅಶ್ವಗಂಧಿ ಟಾನಿಕ್ ವಿಷಯ ಹೇಳಿದರು. ಅವರು ಅನುಭವವಿಲ್ಲದೆ ಮಾತನಾಡುತ್ತಾರೆ. ಅದರ ವಿಷಯ ಅವರಿಗೇನು ಗೊತ್ತು ? ಏನೋ ಅದರಮೇಲೆ ಅಂಟಿಸಿರುವ ಚೀಟಿಯನ್ನು ನೋಡಿರಬಹುದು. ಅದರೊಳಗೇನಿದೆ ಎನ್ನುವುದು ಅವರಿಗೆ ಗೊತ್ತಿಲ್ಲ. ಆದುದರಿಂದ ಸ್ವಲ್ಪ ಅನುಭವ ಪಡೆದು ಆಮೇಲೆ ಹೇಳಲಿ (ನಗು !). ಹೆಂಡ ಕುಡಿದರೆ ಏನಾಗುತ್ತದೆಂದರೆ, ಒಬ್ಬ 25 ಬಾಟಲ್ ಕುಡಿದರೂ ಸೋಲ್‌ಜರ್ ಹಾಗಿರುತ್ತಾನೆ, ಇನ್ನೊಬ್ಬ ಸ್ವಲ್ಪ ಕುಡಿದರೂ ಅವನಿಗೆ ತಲೆ ತಿರುಗುತ್ತದೆ. ಅವರಿಗೆ ನೋಟೀಸ್ ನೋಡಿದರೇ ತಲೆ ತಿರುಗುತ್ತದೆ (ನಗು !).

ಯಾರು ಏನು ಮಾಡಿದರೂ ಪೋಲೀಸಿನವರ ಮೇಲೆ ಹಾಕುವುದು ಯಾವ ನ್ಯಾಯ ? ನಾವು ಮಾಡುವ ಅಪರಾಧಕ್ಕೆ ಪೋಲೀಸಿನವರೇನು ಮಾಡುತ್ತಾರೆ ? ತಲೆಮೇಲೆ ಮುಖಕ್ಕೆ ಬಟ್ಟೆ ಹಾಕಿಕೊಂಡು ಹೋಗಿ ಹೆಂಡ ಸಾರಾಯಿ ಕುಡಿದುಕೊಂಡು ಬಂದರೆ ಅವರೇನು ಮಾಡುವುದು ? ಪೋಲೀಸರು ನಮ್ಮ ದೇಶದ ಶಿಸ್ತು ಶಾಂತಿ ಕಾಪಾಡುವವರು, ದೇಶದ ಸೇವಕರು. ಆದುದರಿಂದ ಪೋಲೀಸಿನವರ ವಿಷಯಕ್ಕೆ ಹೋಗದೇ ಇರಬೇಕೆಂದು ಪ್ರಾರ್ಥಿಸುತ್ತೇನೆ.

ಕೊನೆಯದಾಗಿ, ಕಲಾಸಿಪಾಳ್ಯ ಬಸ್‌ಸ್ಟ್ಯಾಂಡ್, ಬಿನ್ನಿಮಿಲ್ ಈ ಪ್ರದೇಶಗಳಲ್ಲಿ ಜನ ವಾಸಮಾಡುವ ಜಾಗದ ಹತ್ತಿರ ಹೆಂಡ ಸಾರಾಯಿನ ಅಂಗಡಿಗಳಿವೆ. ಈ ವಿಷಯದಲ್ಲಿ ಸರ್ಕಾರಕ್ಕೆ ನನ್ನ ಒಂದು ಸಲಹೆ ಏನೆಂದರೆ, ಹೀಗೆ ಊರಿನ ಮಧ್ಯೆ ಇಡುವುದಕ್ಕಿಂತ, Drinking colony for Gentlemen ಎಂದು ಏರ್ಪಾಡುಮಾಡಿ, ಅದರಲ್ಲಿ ಹೆಂಡ ಸಾರಾಯಿ ಎಲ್ಲವನ್ನೂ ಇಡಿ. ಇದನ್ನು ಹುಚ್ಚಾಸ್ಪತ್ರೆಯ ಮುಂದಿಟ್ಟುಬಿಡಿ.

ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

Mr. DEPUTY SPEAKER.—Discussion on this Demand will close at 5 o'clock.

*Sri B. HUTCHE GOWDA (Turuvekere). —Sir, I oppose the demand.

ಈ ವಿಚಾರ ಈ ಸಭೆಯಲ್ಲಿ ಪ್ರತಿ ವರ್ಷವೂ ಬರುತ್ತಲೇ ಇದೆ. ಕುಡಿತದಿಂದ ಸಂಪಾದಿಸುವ ಹಣ ಒಳ್ಳೆಯದಲ್ಲ, ಜನರನ್ನು ಕುಡಿಸಿ ಅವರ ಬುದ್ಧಿ ಕೆಡಿಸಿ, ಜನರಲ್ಲಿರುವ ನೀತಿಯ ಮಟ್ಟವನ್ನು ಕಡಮೆ ಮಾಡಿ, ಅನೇಕ ಬಡ ಸಂಸಾರಗಳನ್ನು ಹಾಳುಮಾಡಿ ಈ ಮೂಲಕ ಹಣವನ್ನು ತೆಗೆದುಕೊಳ್ಳುವುದು ಸರಿಯಲ್ಲ ಎನ್ನುವುದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲವೆಂದು ಈಗತಾನೇ ಹೇಳಿದರು. ಪ್ರಜಾ ಸರ್ಕಾರ ಬಂದ ಮೇಲೂ ಅದಕ್ಕೆ ಮುಂಚೆಯೂ ಕೂಡ ಅನೇಕ ಸಾರಿ ಸರ್ಕಾರ ಕುಡಿತವನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿದೆ. ಬೇಕಾದಷ್ಟು ಪ್ರಚಾರ ನಡೆಸಿದೆ. ಅಲ್ಲದೆ ಚನ್ನಪಟ್ಟಣ ಮತ್ತು ಕ್ಲೋಸ್‌ಪೇಟೆ ತಾಲ್ಲೂಕುಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದು, ಜನರಿಗೆ ಒಂದು ಅಭಿಪ್ರಾಯ ಬದಲಾವಣೆಯಾಗಿ ಕುಡಿಯುವುದನ್ನು ನಿಲ್ಲಿಸಲೆಂದು ಹಿಂದೆ ಸರ್ಕಾರದವರು ಪ್ರಯತ್ನ ಮಾಡಿದರು. ಆಮೇಲೆ ಒಂದು ಸಮಿತಿಯನ್ನು ನೇಮಕ ಮಾಡಿ ಪೂರ್ಣವಾಗಿ ಕುಡಿತವನ್ನು ನಿಲ್ಲಿಸಬೇಕೆಂದು ಹಿಂದಿನ ಸರ್ಕಾರದವರು ಬಹಳ ಪ್ರಯತ್ನ ಮಾಡಿದರು. 1947-48ರಲ್ಲಿ ಐದನೆಯ ಒಂದು ಭಾಗ ರೆವಿನ್ಯೂ ಕಡಮೆ ಮಾಡಿ ಇನ್ನೂ ಮೂರು ವರ್ಷ ಮಾಡಿದರೆ ಸರಿ ಹೋಗುತ್ತದೆಂದು ಏರ್ಪಾಡು ಮಾಡಿದರು. ಎಲ್ಲೋ ಹಣ ಬರುತ್ತಿತ್ತು, ನಮ್ಮ ದೇಶದ ಆಡಳಿತ ನಡೆಯುತ್ತಿತ್ತು. ಈ ಸರ್ಕಾರ ಬಂತು, ಜನಕ್ಕೆ ಗ್ರಹಚಾರ ಬಂತು. ಇವರ ಸರ್ಕಾರ ಬಂದ ಕ್ಷಣವೇ, ಅವರು ಮಾಡಿದ್ದು ಸರಿಯಲ್ಲ, ಮಧ್ಯೆ ಕಂಟ್ರಾಕ್ಟರುಗಳಿಗೆ ಹಣ ಕೊಡಿಸಲು ಏರ್ಪಾಡು ಮಾಡುವುದು ಸರಿಯಲ್ಲ, ಈ ನೀತಿ ಸರಿಯಲ್ಲವೆಂದು ಹೇಳಿ ಡಿಸ್ಟ್ರಿಕ್ಟುವಾರು ಮದ್ಯಪಾನವನ್ನು ಕಡಮೆ ಮಾಡಬೇಕೆಂದೂ ವರ್ಷಕ್ಕೆ ಮೂರು ಜಿಲ್ಲೆಗಳಲ್ಲಿ ಕಡಮೆ ಮಾಡಿ ಎರಡು ವರ್ಷಗಳಲ್ಲಿ ಕುಡಿತ ನಿಲ್ಲಿಸುತ್ತೇವೆಂದೂ ಹೇಳಿ 1948ನೆಯ ಜೂನ್‌ನಲ್ಲಿ ಈರೀತಿ ಮೂರು ಜಿಲ್ಲೆಗಳಲ್ಲಿ ಜಾರಿಗೆ ತಂದರು. ನಾವು ನಿಜವಾಗಿಯೂ ಇವರು ಹಾಗೆಯೇ ನಡೆಸುತ್ತಾರೆಂದು ನಂಬಿ ಪ್ರಚಾರಕೂಡ ಮಾಡಿದೆವು. ಇನ್ನು ಖಂಡಿತ ಅನೇಕ ಬಡಜನ ಬದುಕುತ್ತಾರೆ, ಅವರಿಗೆ ಮೋಕ್ಷ ಸಿಕ್ಕಿತು, ಮುಂದೆ ಇಂಥ ಅನಿಷ್ಟ ನಮ್ಮ ದೇಶದಲ್ಲಿರುವುದಿಲ್ಲ, ನಮ್ಮ ದೇಶ ಇತರ ದೇಶಗಳಿಗೆ ಮಾದರಿಯಾಯಿತು ಎಂದು ತಿಳಿದುಕೊಂಡೆವು. ಆದರೆ ಮದರಾಸು ಬೊಂಬಾಯಿ ಎಲ್ಲಕಡೆಯೂ ಪೂರ್ಣವಾಗಿ ಪಾನನಿರೋಧವನ್ನು ತಂದರೆ ಇಲ್ಲಿ ಎರಡು ವರ್ಷ ಎರಡು ಜಿಲ್ಲೆಗಳಲ್ಲಿ ಮಾತ್ರ ಜಾರಿಗೆ ತಂದರು. ಸರ್ಕಾರಕ್ಕೆ ಹೇಳಿದಮೇಲೆ ಎರಡು ಜಿಲ್ಲೆಗಳಲ್ಲಿ ಮಾಡಿದರು. ಆದರೆ ಮುಂದೆ ಆ ತಂಟೆಗೇ ಹೋಗಲಿಲ್ಲ. ಈಚೆಗೆ ಈ ಸರ್ಕಾರ ಬಂದು ನಾಲ್ಕು ವರ್ಷಗಳಾದರೂ ಕೂಡ ಸುಮಾರು ನಾಲ್ಕೈದು ತಾಲ್ಲೂಕುಗಳಲ್ಲಿ ಮಾತ್ರ ನಿಲ್ಲಿಸಿದ್ದಾರೆ. ಇಂಥ ಶೋಚನೀಯವಾದ ಪರಿಸ್ಥಿತಿಗೆ ನಮ್ಮ ದೇಶ ಬಂದಿದೆ. ಕೊಡಗಿನಲ್ಲಿ ಪೂರ್ತಿಯಾಗಿ ಪಾನನಿರೋಧ ಮಾಡಿದ್ದಾರೆ. ಪ್ರಾಂತ ಪುನರ್ವಿಂಗಡಣೆಯ ಸಂಬಂಧದಲ್ಲಿ ಯಾವ ಬದಲಾವಣೆಯನ್ನೂ ಮಾಡಕೂಡದು, ಸಂಬಳ ಸಾರಿಗೆಗಳನ್ನು ಹೆಚ್ಚು ಮಾಡಿದರೆ ಆರ್ಥಿಕಸ್ಥಿತಿ ಬದಲಾವಣೆ ಆಗುತ್ತದೆ ಎಂದು ತಾವು ಇಲ್ಲಿ ನುಡಿದಾಗ, ಕೊಡಗಿನಲ್ಲಿ ಎಕ್‌ದಂ ಪಾನನಿರೋಧವನ್ನು ಜಾರಿಗೆ ತಂದು ಅವರ ಉತ್ಪತ್ತಿಯನ್ನೂ ಮತ್ತು ಅವರಿಗೆ ಬರತಕ್ಕ ವರಮಾನವನ್ನೂ ಕಡಿಮೆ ಮಾಡಿದ್ದಾರೆ. ತಾವು ಮುಂದೆ ಸೇರತಕ್ಕ ನೆರೆಹೊರೆಯ ಪ್ರಾಂತದಲ್ಲಿರುವಂತೆ ತಾವೂ ಇರಬೇಕು ಮತ್ತು ಆ ಜನರನ್ನು ಸೇರಬೇಕು ಎಂಬ ಉದ್ದೇಶದಿಂದ ಪಾನಮಾಡುವುದನ್ನು ನಿಲ್ಲಿಸಿದ್ದಾರೆ. ಹೀಗೆ ಇರಬೇಕಾದರೆ ನಾವು ವರ್ಷೇ ವರ್ಷೇ ಹೇಳಿಕೊಂಡು ಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತರಬೇಕು ಎಂದು ಹೇಳಿದರೆ ಆರೀತಿ ಮಾಡಿಲ್ಲ. ಈ ಸಭೆಯಲ್ಲಿ ಯಾರಾದರೂ ಪಾನನಿರೋಧ ತಪ್ಪು ಎಂದು ಹೇಳಿದ್ದಾರೆಯೇ ಎಂದರೆ ಯಾರೂ ಇಲ್ಲ. ಸರ್ಕಾರದವರೂ ಸಹ ಇದು ಸರಿಯಲ್ಲವೆಂದು ಹೇಳಲಿಲ್ಲ. ಈಗ ತಾನೇ ಶ್ರೀಮಾನ್ ವೀರಣ್ಣಗೌಡರು ನಮ್ಮ ಮಾತು ಏನು ನಡೆಯುತ್ತದೆ, ಏನೂ ನಡೆಯುವುದಿಲ್ಲವೆಂದು ತಮ್ಮ ನಿಸ್ಸಹಾಯತೆಯನ್ನು ತೋರಿಸಿದರು. ಕಾಂಗ್ರೆಸ್ ಸರ್ಕಾರ ನಡೆಯುತ್ತಿದೆ, ಪ್ರಜಾಪ್ರಭುತ್ವ ಸರ್ಕಾರವಿದೆ. ಪ್ರಜೆಗಳ ಅಭಿಪ್ರಾಯಕ್ಕೆ, ಪ್ರಜೆಗಳಿಂದ ಚುನಾಯಿತರಾದ ಮಾನ್ಯ ಸಭೆಯ ಬಹುಮತಕ್ಕೆ ಕುಡಿತವಿರಬೇಕೆಂಬ ಅಭಿಪ್ರಾಯವಿದೆಯೇ ಎಂದರೆ ಖಂಡಿತ ಇಲ್ಲ ಎಂಬುದು ಸ್ಪಷ್ಟವಾಗಿದೆ. ಶ್ರೀಮಾನ್ ವೀರಣ್ಣಗೌಡರು ಇದು ಮೊಂಡು ಸರ್ಕಾರ, ಇದಕ್ಕಿಂತ ಮೊಂಡು ಸರ್ಕಾರ ಬೇರೆ ಇಲ್ಲವೆಂದು ಹೇಳಿದರು. ಯಾತಕ್ಕೆ ಸರ್ಕಾರದ ವಿರುದ್ಧವಾಗಿ ಮಾತನಾಡಿದ್ದಾರೆ ಎಂದು ಯೋಚಿಸಬೇಕು. ಶ್ರೀಮಾನ್ ಚಂದ್ರಶೇಖರಯ್ಯನವರು ಒಂದು ದೊಡ್ಡ ಕತೆಯನ್ನೇ ಹೇಳಿ, ಇಂಥ ನಾಚಿಕೆಗೇಡು ಸರ್ಕಾರ ಇರುವುದಕ್ಕಿಂತ ಇಲ್ಲದೆ ಇರುವುದು ಮೇಲು ಎಂದು ಹೇಳಿದ್ದಾರೆ.

ಸ್ವಾಮಿ, 1947-48ರಲ್ಲಿ 1 ಕೋಟಿ 55 ಲಕ್ಷ ರೂಪಾಯಿಗಳ ಆದಾಯವಿದ್ದುದು 1948-49ರಲ್ಲಿ ಅದು 2 ಕೋಟಿ 16 ಲಕ್ಷ ರೂಪಾಯಿಗಳಿಗೆ ಏರಿತು, 1951-52ರಲ್ಲಿ 2 ಕೋಟಿ 20 ಲಕ್ಷ ರೂಪಾಯಿಗಳಿಗೆ ಏರಿತು. ಈ ರೀತಿ ಸರ್ಕಾರಕ್ಕೆ ದುಡ್ಡು ಹೇಗೆ ಬರುತ್ತದೆ ಎನ್ನುವುದನ್ನು ನೋಡುವುದಾದರೆ ಇದು ಎಷ್ಟು ಜನರ ಕೈಯಿಂದ ಬರಬೇಕು ಎನ್ನುವುದನ್ನು ಯೋಚಿಸಬೇಕು. ಸರ್ಕಾರಕ್ಕೆ ಬರತಕ್ಕ ಹಣದ ಐದರಷ್ಟು ಹಣವನ್ನು ಈ ಪಾನಮಾಡುವ ಜನಗಳು ಕೊಡಬೇಕಾಗುತ್ತದೆ. ಈ ಲೆಕ್ಕಾಚಾರದ ಪ್ರಕಾರ ಸುಮಾರು ಹತ್ತು ಕೋಟಿ ರೂಪಾಯಿಗಳು ನಮ್ಮ ಜನಗಳಿಗೆ ಉಳಿಯುತ್ತಿತ್ತು. ನಮ್ಮ ದೇಶದ ಬಡಜನರಲ್ಲಿ ಈ ಹತ್ತು ಕೋಟಿ ರೂಪಾಯಿಗಳ ಹಂಚಿಕೆಯಾಗುತ್ತಿತ್ತು. ಇಂಥದನ್ನೂ ತಪ್ಪಿಸಿ, ಈ ಸಭೆಯ ಏಕಾಭಿಪ್ರಾಯಕ್ಕೆ ಮನ್ನಣೆ ಕೊಡದೆ ಇರುವುದು ಒಂದು ನಾಚಿಕೆಗೇಡಿನ ಪ್ರಸಂಗವಾಗಿದೆ ಎಂದು ಹೇಳಿ ಈ ಡಿಮ್ಯಾಂಡನ್ನು ಪೂರ್ಣವಾಗಿ ವಿರೋಧಿಸುತ್ತೇನೆ.

ಶ್ರೀ ಟಿ. ಚನ್ನಯ್ಯ.—ಸ್ವಾಮಿ, ಈ ಮಾನ್ಯ ಸಭೆಯ ಅನೇಕ ಸದಸ್ಯರು ಪಾನನಿರೋಧದ ವಿಷಯದಲ್ಲಿ ಪುನಃ ಪುನಃ, ಅನೇಕಸಾರಿ ಅದೇ ವಿಷಯವಾಗಿ ಶಾಸನ ಸಭೆಗಳಲ್ಲಿ ಪ್ರಸ್ತಾಪಮಾಡಿದ್ದಾರೆ. ಈ ದಿವಸವೂ ಕೂಡ ಅವರು ಹೊಸದಾಗಿ ಯಾವ ಸಲಹೆಗಳನ್ನೂ ಕೊಟ್ಟಂತೆ ಕಾಣುವುದಿಲ್ಲ. ಸುಮಾರು ಮೂರು ನಾಲ್ಕು ವರ್ಷಗಳಿಂದಲಾಗಾಯ್ತು ಇದೇ ಮಾನ್ಯ ಸಭೆಯಲ್ಲಿ, ಇದೇ ವಿಷಯವನ್ನು ಮತ್ತೆ ಮತ್ತೆ ಹೇಳುತ್ತಿದ್ದಾರೆ. ಹೊಸದಾಗಿ ಯಾವುದಾದರೂ ಒಂದು ವಿಷಯವನ್ನಾದರೂ ಹೇಳಿದ್ದಾರೆಯೇ ಎಂದು ನೋಡುವುದಾದರೆ ಯಾವುದೂ ಇಲ್ಲವೆಂದ ಹೇಳಬಹುದು. ಆದರೆ ಈಗ ಕೆಲವು ಮಾನ್ಯ ಮಿತ್ರರು ಅವರಿಗೆ ತೋರಿದ ಕೆಲವು ವಿಷಯಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅವುಗಳಿಗೆ ನಾನು ಕೆಲವು ಕಾರಣಗಳನ್ನು ಕೊಡುವುದು ಸೂಕ್ತ

(ಶ್ರೀ ಟಿ. ಚನ್ನಯ್ಯ)

ವಾದದ್ದು. ಕೆಲವು ಮಾನ್ಯ ಸದಸ್ಯರು ಈ ಪಾನನಿರೋಧ ನೀತಿ ಸರಿಯಾಗಿಲ್ಲ, ಇದನ್ನು ಕ್ರಮೇಣ ಸಂಸ್ಥಾನಾದ್ಯಂತ ಜಾರಿಗೆ ತರಬೇಕೆಂಬ ಒಂದು ನೀತಿ ಇದ್ದರೂ ಕೂಡ ಈಗಿನ ಸರ್ಕಾರ ಬಂದಲಾಗಾಯ್ತು ಎರಡು ತಾಲ್ಲೂಕುಗಳಲ್ಲಿ ಮಾತ್ರ ಜಾರಿಗೆ ತಂದು ಉಳಿದ ಕಡೆಗಳಿಗೆ ಮುಂದುವರಿಸದೆ ಹಾಗೆಯೇ ನಡೆಸಿಕೊಂಡು ಬರುತ್ತಿದ್ದಾರೆ, ಇದು ಸರಿಯಾದ ಮಾರ್ಗವಲ್ಲವೆಂದು ಟೀಕೆ ಮಾಡಿದರು. ಮತ್ತೆ ನಮ್ಮ ರಾಜ್ಯಾಂಗ ರಚನೆಯಲ್ಲಿಯೂ ಕೂಡ directive policy, ಎಂದರೆ, ಕ್ರಮೇಣ ಪ್ರತಿ ಸಂಸ್ಥಾನದಲ್ಲಿಯೂ ಕೂಡ ಪಾನನಿರೋಧವನ್ನು ಜಾರಿಗೆ ತರಬೇಕು ಎಂದು ಹೇಳಿದ್ದರೂ ಕೂಡ ಆಯಾ ಸಂಸ್ಥಾನಗಳು, ಅದರಲ್ಲಿಯೂ ಮೈಸೂರು ಸಂಸ್ಥಾನ, ಹೆಚ್ಚು ಮುಂದುವರಿಯದೆ, ಎರಡು ತಾಲ್ಲೂಕುಗಳಿಗೆ ಮಾತ್ರ ಈ ನೀತಿಯನ್ನು ಅನ್ವಯಿಸಿ ಉಳಿದ ಪ್ರದೇಶಗಳಿಗೆ ಜಾರಿಗೆ ಕೊಡದೆ ಇರುವುದು ಸಾಧುವೇ, ಸೂಕ್ತವೇ, ಎಂಬ ವಿಚಾರವನ್ನು ಕೂಡ ಈ ದಿವಸ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮೈಸೂರು ಸರ್ಕಾರಕ್ಕೆ ಈ ಪಾನನಿರೋಧ ನೀತಿಯನ್ನು ಸಂಸ್ಥಾನಾದ್ಯಂತ ಜಾರಿಗೆ ತರಬೇಕೆಂಬ ಉದ್ದೇಶ ಖಂಡಿತವಾಗಿಯೂ ಇದೆ. ಆದರೆ ಒಂದೇ ಕಾಲದಲ್ಲಿ ಜಾರಿಗೆ ತರುವುದಕ್ಕೆ ಸಾಧ್ಯವಿದ್ದರೂ ಕೂಡ, ತಕ್ಷಣವೇ ಜಾರಿಗೆ ತರಬೇಕು ಎಂಬ ಅಭಿಲಾಷೆ ಇದ್ದರೂ ಕೂಡ, ಕೆಲವು ತೊಂದರೆಗಳಿವೆ. ಮಾನ್ಯ ಮುಖ್ಯ ಮಂತ್ರಿಗಳು ಬಡ್ಜೆಟ್ ಭಾಷಣದಲ್ಲಿ ಪಾನನಿರೋಧ ನೀತಿಯ ವಿಷಯದಲ್ಲಿ ಪ್ರಸ್ತಾಪ ಮಾಡುವಾಗ ಖಚಿತವಾಗಿ ತಿಳಿಸಿದ್ದಾರೆ. ಪಾನನಿರೋಧದ ವಿಷಯದಲ್ಲಿ ನಮ್ಮ ಸರ್ಕಾರದ ಅಭಿಪ್ರಾಯವೇನು ಎನ್ನುವುದನ್ನು ಇಂಡಿಯಾ ಸರ್ಕಾರಕ್ಕೆ ತಿಳಿಸಿ, ಇದನ್ನು ಜಾರಿಗೆ ತರುವುದರಿಂದ ಆಗತಕ್ಕ ನಷ್ಟವನ್ನು ಸರಿದೂಗಿಸಲು ಸಹಾಯ ಮಾಡುವುದಾದರೆ, ತಕ್ಷಣವೇ ಕಾರ್ಯವನ್ನು ತೆಗೆದುಕೊಂಡು ಉಳಿದ ಎಲ್ಲ ಜಿಲ್ಲೆಗಳಲ್ಲಿಯೂ ಕೂಡ ಪೂರ್ಣ ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ಮೈಸೂರು ಸರ್ಕಾರವು ಖಂಡಿತವಾಗಿಯೂ ಸಿದ್ಧವಾಗಿದೆ ಎಂದು ತಿಳಿಸಿದ್ದೇವೆ. ನಾನೂ ಇದೇ ವಿಷಯವನ್ನು ಕೆಲವು ದಿವಸಗಳ ಹಿಂದೆ ಪ್ರಶ್ನೋತ್ತರಗಳ ಕಾಲದಲ್ಲಿ ಹೇಳಿದ್ದೇನೆ.

ಶ್ರೀ ಡಿ. ಆರ್. ಕರಿಗೌಡ.—ಕೇಂದ್ರ ಸರ್ಕಾರದವರು ಸಹಾಯ ಮಾಡುವುದಕ್ಕೆ ಒಪ್ಪಿಕೊಳ್ಳದೆ ಹೋದರೆ ಏನುಮಾಡುತ್ತೀರಿ ?

ಶ್ರೀ ಟಿ. ಚನ್ನಯ್ಯ.—ಸಹಾಯ ಮಾಡುವುದಿಲ್ಲವೆಂದು ಖಚಿತವಾಗಿ ತೀರ್ಮಾನಕ್ಕೆ ಬಂದಿಲ್ಲ. ಇಂಡಿಯಾ ಸರ್ಕಾರದವರು ಒಂದು ತೀರ್ಮಾನ ತೆಗೆದುಕೊಂಡು, ಕೇಂದ್ರದಿಂದ ಸಹಾಯ ಮಾಡುವುದಕ್ಕಾಗುವುದಿಲ್ಲ, ಮೈಸೂರು ಸರ್ಕಾರದವರೇ ಇದರಿಂದಾಗುವ ನಷ್ಟವನ್ನು ಹೊರಬೇಕು ಎಂದಾದರೂ ತಿಳಿಸಬೇಕು ; ಇಲ್ಲದೆಹೋದ ಪಕ್ಷದಲ್ಲಿ ನಾವೂ ಸ್ವಲ್ಪ ಹಣ ಸಹಾಯ ಮಾಡುವುದಕ್ಕೆ ಸಿದ್ಧರಾಗಿದ್ದೇವೆ ಎಂದಾದರೂ ತಿಳಿಸಬೇಕು. ಕೇಂದ್ರ ಸರ್ಕಾರದಿಂದ ಇನ್ನೂ ಯಾವ ಅಭಿಪ್ರಾಯವೂ ಬಾರದೆ ಇರುವುದರ ದೆಸೆಯಿಂದ ಅದಕ್ಕಾಗಿ ಕಾದು ನೋಡುತ್ತಿದ್ದೇವೆ. ಅವರ ಅಭಿಪ್ರಾಯ ತಿಳಿದ ತಕ್ಷಣ ಮುಂದೆ ಯಾವರೀತಿ ತೀರ್ಮಾನ ತೆಗೆದುಕೊಳ್ಳಬೇಕು ಎಂಬತಕ್ಕ ಯೋಚನೆಯನ್ನು ಮಾಡಲಾಗುತ್ತದೆ. ಆದುದರಿಂದ ನಾವು ಕೇಂದ್ರ ಸರ್ಕಾರದವರು ತೆಗೆದುಕೊಳ್ಳತಕ್ಕ ತೀರ್ಮಾನವನ್ನು ಕಾದು ನೋಡತಕ್ಕದ್ದು ಸೂಕ್ತವಾದದ್ದು ಎಂದು ಈ ಸಭೆಯ ಮುಂದೆ ಹೇಳುತ್ತೇನೆ.

5 P.M.

ಇಷ್ಟೇ ಅಲ್ಲ, ಆಗಲೇ ನಾನು ಸ್ವಲ್ಪ ಸೂಕ್ಷ್ಮವಾಗಿ ಸಭೆಯ ಮುಂದೆ ಹೇಳಿದಹಾಗೆ, ನಮ್ಮ ಸಂಸ್ಥಾನದ ಸರ್ಕಾರದವರೂ ಕೂಡ ಕೆಲವು ದಿವಸಗಳಲ್ಲೇ ನಾವು ಈ ಸಂಸ್ಥಾನದಲ್ಲಿ ಪಾನನಿರೋಧವನ್ನು ಪೂರ್ಣವಾಗಿ ಜಾರಿಗೆ ತರುವುದಕ್ಕೆ ಸಿದ್ಧವಾಗಿಲ್ಲ, ಅದರಿಂದ ಸುಮಾರು ಎರಡು ಕೋಟಿ ರೂಪಾಯಿಗಳ ವರಮಾನ ಖೋತಾ ಆಗುತ್ತದೆಂದು ಇಂಡಿಯಾ ಸರ್ಕಾರಕ್ಕೆ ತಿಳಿಸಿದ್ದೇವೆ ; ಇದಕ್ಕೆ ಕೇಂದ್ರದವರು ಸಾಕಾದಷ್ಟು ಸಹಾಯ ಮಾಡಿದ ಪಕ್ಷದಲ್ಲಿ ಅದನ್ನು ಜಾಗ್ರತೆ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೇವೆ. ಮತ್ತೆ ಬೇರೆ ಸಂಸ್ಥಾನಗಳೂ ಸಹ ಇದೇ ಪ್ರಕಾರವಾಗಿ ಕಳುಹಿಸಿರುವ ಸಲಹೆಯನ್ನೂ ಪ್ರೊಹಿಬಿಷನ್ ಎನ್‌ಕ್ವೈರಿ ಕಮಿಟಿ ಶಿಫಾರ್ಸನ್ನೂ ಕೇಂದ್ರಸರ್ಕಾರದ ಮಂತ್ರಿಗಳಾದ ಶ್ರೀ ಮಿಶ್ರಾ ಅವರು ಲೋಕ ಸಭೆಯಲ್ಲಿ ಮೊನ್ನೆ ಪ್ರಸ್ತಾಪಮಾಡಿ ಯಾವರೀತಿ ಪ್ರತಿಯೊಂದು ಸಂಸ್ಥಾನದ ಸರ್ಕಾರದವರೂ ತಮ್ಮ ಪ್ರತಿಕ್ರಿಯೆ ಕಾಣಿಸಿದ್ದಾರೆಂಬುದನ್ನು ಹೇಳಿರುವುದನ್ನು ಪತ್ರಿಕೆಗಳಲ್ಲಿ ನೋಡಬಹುದು. ಯು.ಪಿ., ಮಧ್ಯ ಪ್ರದೇಶ, ಬಂಗಾಳ, ಬೊಂಬಾಯಿ ಮೊದಲಾದ ಪ್ರಾಂತಗಳವರೂ, ತಿರುವಾಂಕೂರು ಕೊಚಿನ್, ಮೈಸೂರು ಮುಂತಾದ ಸಂಸ್ಥಾನಗಳವರನೇಕರೂ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಪ್ರತಿಯೊಬ್ಬರೂ ಇದನ್ನು ಹತ್ತು ವರ್ಷಗಳನಂತರ ಪೂರ್ಣವಾಗಿ ಜಾರಿಗೆ ತರಬೇಕೆಂದು ಸಲಹೆ ಮಾಡಿದ್ದಾರೆ, ಕೆಲವರು 1960ನೆಯ ಇಸವಿಯಾದಮೇಲೆ ಜಾರಿಗೆ ತರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ, ಕೆಲವರು ಈಗ ಪಾನನಿರೋಧವನ್ನು ಪೂರ್ಣವಾಗಿ ಜಾರಿಗೆ ತರುವ ನೀತಿಯನ್ನು ಒಪ್ಪಿಕೊಳ್ಳಬೇಕಾದರೆ ಈ ಸಂಬಂಧವಾಗಿ ಈಗ ಎಷ್ಟು ಉತ್ಪತ್ತಿ ಬರುತ್ತಿದೆಯೋ ಅಷ್ಟನ್ನು ಕೇಂದ್ರ ಸರ್ಕಾರ ಸಹಾಯ ಮಾಡುವುದಾದರೆ ತಕ್ಷಣವೇ ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ಖಂಡಿತವಾಗಿಯೂ ಸರ್ಕಾರಕ್ಕೆ ಪಾನನಿರೋಧದ ವಿಷಯದಲ್ಲಿ ಸಹಾನುಭೂತಿಯಿದೆ, ಕೇಂದ್ರ ಸರ್ಕಾರದ ಅಭಿಪ್ರಾಯವನ್ನು ತಿಳಿದು ಒಂದು ನಿರ್ಧಾರಕ್ಕೆ ಬರುತ್ತದೆ ಎಂದು ಇಷ್ಟುಮಾತ್ರ ಹೇಳುತ್ತೇನೆ.

MR. DEPUTY SPEAKER.—The question is :

"That a sum not exceeding Rs. 18,23,000 be granted to the Government to defray the charges which will come in course of payment during the year ending 31st day of March 1957, in respect of 'State Excise Duties'."

The motion was adopted.

DEMAND NO. 3.—STAMPS.

9. STAMPS.

MR. DEPUTY SPEAKER.—Now Demand No. 3. The motion is :

"That a sum not exceeding Rs. 2,91,000 be granted to the

Government to defray the charges which will come in course of payment during the year ending 31st day of March 1957, in respect of 'Stamps'."

*ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, ಈ ಡಿಮ್ಯಾಂಡಿನಮೇಲೆ ಖೋತಾ ಸೂಚನೆಯನ್ನು ನಾನು ಕಳುಹಿಸಿದ್ದೇನೆ. ಅದರಲ್ಲಿ ಸೂಚಿಸಿರುವ ಒಂದಂಶವನ್ನು ಈ ಸಭೆಯ ಗಮನಕ್ಕೆ ತರಬೇಕೆಂದು ಅಪೇಕ್ಷೆಪಡುತ್ತೇನೆ. ರೂರಲ್ ಕ್ರೆಡಿಟ್ ಸರ್ವೆ ರೂಲ್ಸ್ ಪ್ರಕಾರ ಕೋ-ಆಪರೇಟಿವ್ ಮೂವ್‌ಮೆಂಟಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂಬುದು ತಮಗೆ ಗೊತ್ತಿರುವ ವಿಚಾರ. ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ರಿಜಿಸ್ಟರಾಗತಕ್ಕದಕ್ಕೆ ರಿಜಿಸ್ಟ್ರೇಷನ್ ಫೀಜನ್ನು ಮನ್ನಾ ಮಾಡಬೇಕೆಂದು ನಾನು ಖೋತಾ ಸೂಚನೆ ಕಳುಹಿಸಿದ್ದೇನೆ. ಇದನ್ನು ಹೋದ ವರ್ಷ, ಆಚೆ ವರ್ಷ, ಈ ರೀತಿ ಪ್ರತಿ ವರ್ಷವೂ ಸಹ ಅನೇಕ ಮಾನ್ಯ ಮಿತ್ರರು ಖೋತಾ ಸೂಚನೆ ಕಳುಹಿಸಿ ಕೇಳುತ್ತಿದ್ದಾರೆ. ಶ್ರೀ ಅನಂತರಾಮನ್ ಅವರೂ ಸಹ ಈಗ ಈ ವಿಚಾರ ಪ್ರಸ್ತಾಪಮಾಡಿದರು. ಈ ಸಂದರ್ಭದಲ್ಲಿ ಒಂದು ಬಹಳ ಮುಖ್ಯವಾದ ವಿಚಾರವನ್ನು ಈ ಸಭೆ ಗಮನಕ್ಕೆ ತರಬೇಕೆಂಬ ಅಪೇಕ್ಷೆಯಿದೆ. ಮಾನ್ಯ ಸಭೆಯ ಸದಸ್ಯರಾದ ಶ್ರೀ ಅನಂತರಾಮನ್‌ರವರು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಪ್ರೆಸಿಡೆಂಟರಾಗಿಯೂ ಒಳ್ಳೆಯ ಲಾಯರಾಗಿಯೂ ಕೆಲಸ ಮಾಡಿದ್ದಾರೆ. ಇದಕ್ಕೆ ವಿನಾಯಿತಿ ಕೊಡಿಸಬೇಕೆಂದು ಅವರನ್ನೂ ಸಹ ಆಗಾಗ್ಗೆ ಕೇಳುತ್ತಿದ್ದೆವು. ಇದನ್ನು ಗಮನಿಸಿ ಆ ರೀತಿ ಮನ್ನಾ ಮಾಡುವುದು ಸೂಕ್ತವಾಗಿರುವುದರಿಂದ ಡಾಕ್ಯುಮೆಂಟುಗಳಿಗೆ ಸ್ಟಾಂಪ್ ಹಾಕತಕ್ಕ ಬಗ್ಗೆ ವಿನಾಯಿತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕೆ ಇಲಾಖೆಯ ಮಂತ್ರಿಗಳು).—ಶ್ರೀಮಾನ್ ಶಿವಪ್ಪನವರು ಖೋತಾ ಸೂಚನೆಯನ್ನು ಕಳುಹಿಸಿದ್ದೇನೆಂದು ಹೇಳಿದರು; ಅವರ ಖೋತಾ ಸೂಚನೆ ಈ ಡಿಮ್ಯಾಂಡಿನ ಕೆಳಗೆ ಇಲ್ಲ. ಆದರೂ ಕೋ-ಆಪರೇಟಿವ್ ಸೊಸೈಟಿಗಳಿಗೆ ಸ್ಟ್ಯಾಂಪ್ ಡ್ಯೂಟಿ ಮನ್ನಾ ಮಾಡಿಕೊಡಬೇಕೆಂದು ಹೇಳಿದ್ದಾರೆ. ಈಗಾಗಲೆ ಬಹಳಕಾಲದಿಂದ ಅರ್ಧ ಟ್ಯಾಕ್ಸ್ ಕೊಡಬೇಕೆಂದು ನಿಗದಿಮಾಡಿರುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಈಗ ಈ ಟ್ಯಾಕ್ಸ್ ನಿಂದಲೇ ಸರ್ಕಾರಕ್ಕೆ ಬೇಕಾದಷ್ಟು ನಷ್ಟವಾಗಿದೆ. ಇನ್ನೂ ಹೆಚ್ಚಾಗಿ ರಿಯಾಯಿತಿ ಕೊಡಬೇಕು, ಪೂರ್ಣವಾಗಿ ಮನ್ನಾ ಮಾಡಬೇಕು ಎಂದು ಹೇಳಿದರೆ ಒಂದು ಕಡೆ ಖರ್ಚುಬಾಬುಗಳಿಗೆ ಹಣ ಬೇಕು, ಇನ್ನೊಂದು ಕಡೆ ಹಣ ಉತ್ಪನ್ನವಾಗುವ ಮಾರ್ಗ ಖೋತಾ ಮಾಡಬೇಕು. ಇದು ತಮಗೆ ಗೊತ್ತಿದೆ. ಇದನ್ನು ಸದ್ಯಕ್ಕೆ ಕೇಳುವುದನ್ನು ಬಿಟ್ಟು ಅರ್ಧ ಮನ್ನಾ ಮಾಡಿರುವುದನ್ನು ಸದುಪಯೋಗಪಡಿಸಿಕೊಳ್ಳಿ. ಇನ್ನೂ ಹೆಚ್ಚಾಗಿ ಮನ್ನಾ ಮಾಡಿ ಎಂದು ಒತ್ತಾಯಮಾಡುವುದು ಹಣಕಾಸಿನ ಉತ್ಪನ್ನದ ದೃಷ್ಟಿಯಿಂದ ಸರಿಯಲ್ಲ. ಆದ್ದರಿಂದ ಮಾನ್ಯ ಸದಸ್ಯರೆಲ್ಲರೂ ಕೂಡ ಈ ಬೇಡಿಕೆಗೆ ತಮ್ಮ ಪೂರ್ಣ ಬೆಂಬಲವನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

Mr. DEPUTY SPEAKER.—The question is:

"That a sum not exceeding Rs. 2,91,000 be granted to the Government to defray the charges which will come in course of payment during the year ending 31st day of March 1957, in respect of 'Stamps'."

The motion was adopted.

DEMAND No. 5—REGISTRATION.

II. Registration.

Mr. DEPUTY SPEAKER.—The motion is:

"That a sum not exceeding Rs. 5,76,000 be granted to the Government to defray the charges which will come in course of payment during the year ending 31st day of March 1957, in respect of 'Registration'."

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ಇದರಲ್ಲಿ ಮುಖ್ಯವಾದ ಒಂದೆರಡು ಅಂಶಗಳನ್ನು ಮಾತ್ರ ಹೇಳುತ್ತೇನೆ. ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಫೋಡಿ ಫೀಜನ್ನು ವಸೂಲು ಮಾಡಿ ತಾಲ್ಲೂಕಾಫೀಸಿಗೆ ಕಳುಹಿಸುತ್ತಾರೆ. ಇದು ಸಬ್‌ರಿಜಿಸ್ಟ್ರಾರ್ ಆಫೀಸಿನಿಂದ ತಾಲ್ಲೂಕು ಆಫೀಸಿಗೆ ಹೋದ ತಕ್ಷಣ ರಿಜಿಸ್ಟರ್ ಮಾಡಿಕೊಂಡು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಕಳುಹಿಸಿ, ಸರ್ವೆ ಆಫೀಸಿಗೆ ತಿಳಿಸಿ ಡಾಕ್ಯುಮೆಂಟ್ ರಿಜಿಸ್ಟರಾದ ತಕ್ಷಣ ಫೋಡು ಮಾಡುವುದಕ್ಕೆ ಏರ್ಪಾಡು ಮಾಡುವ ವಿಚಾರದಲ್ಲಿ ಬಹಳ ನಿಧಾನವಾಗಿದೆ. ಹೇಗೆ ಇದು ನಿಧಾನವಾಗಿದೆಯೆಂಬುದನ್ನು ಈ ಸಂದರ್ಭದಲ್ಲಿ ಗಮನಕ್ಕೆ ತರುತ್ತೇನೆ. ಇದಕ್ಕೇನು ಮಾಡಬೇಕೆಂಬುದಕ್ಕೆ ಸೂಚನೆ ಕೊಡುತ್ತೇನೆ. ಕೆಲವು ಕಡೆ ಮದ್ರಾಸು ಪ್ರೆಸಿಡೆನ್ಸಿಯಲ್ಲಿ ಸಬ್‌ರಿಜಿಸ್ಟ್ರಾರರಿಗೆ ಕೆಲವು ಅಧಿಕಾರಗಳಿವೆ. ರಿಜಿಸ್ಟರ್ ಮಾಡುವುದಕ್ಕೆ ಮುಂಚಿತವಾಗಿ ಪತ್ರ ಬಂದ ತಕ್ಷಣ ಸರ್ವೆ ನಂಬರು ವಗೈರೆ ಎಲ್ಲವನ್ನೂ ವೆರಿಫೈ ಮಾಡಿ ಯಾರಿಗೆ ಯಾವ ರೀತಿ ಖಾತೆಯಿದೆಯೆಂದು ನೋಡಿ ಅದನ್ನು ನಿಷ್ಕರ್ಷೆ ಮಾಡುತ್ತಾರೆ, ಅದಕ್ಕೆ ರೆವೆನ್ಯೂ ಇಲಾಖೆಗೆ ಹೋಗಬೇಕಾಗಿಲ್ಲ. ಅದರಿಂದ ಕೆಲಸ ಸುಲಭವಾಗಿ ಜಾಗ್ರತೆ ಆಗುತ್ತದೆ. ನೇರವಾಗಿ ಸರ್ವೆ ಇಲಾಖೆಗೆ ಹೋದರೆ ಫೋಡ್ ಆಗಲು ಅನುಕೂಲವಾಗುತ್ತದೆ ಎಂದು ಈ ವಿಷಯವನ್ನು ಕಳೆದ ಸಾಲಿನಲ್ಲೇ ಸರ್ಕಾರದ ಗಮನಕ್ಕೆ ತಂದೆ. ಅಲ್ಲದೆ ಈ ವಿಚಾರವನ್ನು ಪದೇ ಪದೇ ಇನ್ಸ್‌ಪೆಕ್ಟಿಂಗ್ ಆಫೀಸರು ಕೂಡ ಅಬ್ಸರ್ವ್ ಮಾಡಿದರೂ ಕೂಡ ಏನೂ ಇತ್ಯರ್ಥವಾಗಿಲ್ಲ. ಸರ್ಕಾರದವರಾದರೂ ಕೂಡ ಇದನ್ನು ಪರೀಕ್ಷೆ ಮಾಡಿ ಸಾಧ್ಯವೆ, ಇಲ್ಲವೆ, ಸಬ್‌ರಿಜಿಸ್ಟ್ರಾರಿಗೆ ಇದನ್ನು ವಹಿಸಬಹುದೆ ಎಂದು ತಿಳಿದು ಒಂದು ತೀರ್ಮಾನ ಕೊಟ್ಟಿಲ್ಲ. ಇದನ್ನು ಕೇಳುವುದಕ್ಕೆ ಅವಕಾಶ ಕೂಡ ಸಿಕ್ಕುವುದಿಲ್ಲ. ನಿಜವಾಗಿಯೂ ಈ ಅಂಶವನ್ನು ಸರ್ಕಾರದವರು ಪರಿಶೀಲನೆಮಾಡಬೇಕಾಗಿದೆ. ಇದನ್ನೆಲ್ಲಾ ಸರಿಪಡಿಸುವುದಕ್ಕೆ ಸಾಧ್ಯವಿದೆಯೋ ಅಥವಾ ಇಲ್ಲವೇ ಎಂಬುದರ ವಿಚಾರದಲ್ಲಿ ನಮ್ಮ ಮಾನ್ಯ ಮಂತ್ರಿಗಳಿಗೆ ಬಹಳ ಉತ್ಸಾಹವಿರುತ್ತಾದ್ದರಿಂದ ನಾನಿನ್ನು ಈ ವಿಚಾರವನ್ನು ಇಷ್ಟಕ್ಕೇ ಕೈಬಿಟ್ಟುಬಿಡುತ್ತೇನೆ.

(ಶ್ರೀ ಎಂ. ಚಿಕ್ಕಲಿಂಗಯ್ಯ)

ಇನ್ನು ಈ ಮನಿಲೆಂಡರ್ಸ್ ಆಕ್ಟಿನ ವಿಚಾರವಾಗಿ ಕೆಲವು ಮಾತುಗಳನ್ನಾಡಬೇಕಾಗಿದೆ. ಈ ಆಕ್ಟ್ ಜಾರಿಗೆ ಬಂದದ್ದು 1940ನೆಯ ಇಸವಿಯಲ್ಲಿ. ಆಗ ಜನಗಳೆಲ್ಲಾ, ಅವರು ಲೇವಾದೇವಿ ನಡೆಸತಕ್ಕವರಾಗಿರಲಿ ಅಥವಾ ಇಲ್ಲದವರಾಗಿರಲಿ ಅನೇಕರು, ಗೊತ್ತಿದ್ದೋ ಅಥವಾ ಗೊತ್ತಿಲ್ಲದೇನೋ ಒಂದು ಮೂರು ರೂಪಾಯಿನ ಛಾಪಾಕಾಗದ ಮತ್ತು ಒಂದು ಒಂದೂವರೆ ರೂಪಾಯಿನ ಕಾಗದ ಹೀಗೆ ನಾಲ್ಕೂವರೆ ರೂಪಾಯಿಗಳನ್ನು ಖರ್ಚುಮಾಡಿ ಅನೇಕರು ಈ ಲೈಸೆನ್ಸುಗಳನ್ನು ಪಡೆದುಕೊಂಡರು. ಇದರ ವಿಚಾರ ಆ ವರ್ಷಕ್ಕೇ ಮುಗಿದುಹೋಯಿತೋ ಏನೋ ಎನ್ನುವಂತಾಗಿದೆ. ಆ ದಿನದಿಂದ ಈ ಹೊತ್ತಿನವರೆಗೂ ಯಾವ ಒಬ್ಬ ಆಫೀಸರೇ ಆಗಲಿ ಈ ಮನಿಲೆಂಡರ್ಸ್ ಆಕ್ಟ್ ಎನ್ನುವುದು ಯಾವ ರೀತಿ ಕೆಲಸ ನಡೆಸುತ್ತಿದೆ? ಇದೇನು ಒಂದು ಪರಿಣಾಮಕಾರಿಯಾದಂಥ ಬದಲಾವಣೆಯನ್ನುಂಟುಮಾಡಿದೆಯೇ ಏನು? ಎತ್ತ? ಎನ್ನುವ ಬಗ್ಗೆ ಯಾವ ಒಂದು ತನಿಖೆಯನ್ನೂ ನಡೆಸಿರುವುದಿಲ್ಲ; ಹಾಗೆ ನಡೆಸಿದ್ದನ್ನೂ ನಾನೂ ಸಹ ಎಲ್ಲಿಯೂ ನೋಡಿಲ್ಲ. ಆ ಆಕ್ಟಿನಲ್ಲೇನೋ ಹೇಳಿದೆ: ಸಬ್-ಡಿವಿಜನ್ ಆಫೀಸರುಗಳು ಮಾತ್ರ ಈ ವಿಚಾರದಲ್ಲಿ ತನಿಖೆ ನಡೆಸುವ ಅಧಿಕಾರವುಳ್ಳವರಾಗಿರುತ್ತಾರೆ ಎಂದು. ಆದರೆ ಈತಹಲ್‌ವರೆಗೂ ಯಾರೂ ಎಲ್ಲೂ ಇದನ್ನು ಚೆಕ್‌ಮಾಡಿ ನೋಡಿರುವುದಿಲ್ಲ. ಈ ವ್ಯವಹಾರದ ಬಗ್ಗೆ ಯಾವ ಒಂದು ರೂಲ್ಸು ಆಗಲಿ, ಒಂದು ರೆಗ್ಯುಲೇಷನ್ ಆಗಲಿ ಜಾರಿಗೆ ಬಂದ ಹಾಗೆ ನನಗಂತೂ ಕಾಣಬರುತ್ತಿಲ್ಲ. ಅಥವಾ ಈ ವ್ಯವಹಾರದಲ್ಲಿ ತಂಟೆತಕರಾರುಗಳೇನಾದರೂ ಉದ್ಭವಿಸಿದಾಗ ಪಾರ್ಟಿಗಳು ಕೋರ್ಟು ಮುಂದೆ ಹೋಗಿ ಈ ಲೇವಾದೇವಿಗೆ ಸಂಬಂಧಪಟ್ಟ ಡಾಕ್ಯುಮೆಂಟುಗಳನ್ನು ಅಲ್ಲಿ ಹಾಜರ್ಮಾಡಿದಾಗಲಾದರೂ—ಆ ಕೋರ್ಟಿನವರಾದರೂ ಈ ಮನುಷ್ಯ ಲೇವಾದೇವಿ ಮಾಡತಕ್ಕಂಥ ಮನುಷ್ಯನಾಗಿದ್ದಾನೆಯೇ, ಈತನು ಆ ಲೇವಾದೇವಿಗಳನ್ನು ನಡೆಸುವವರ ಕಾನೂನು ಪ್ರಕಾರ ಲೈಸೆನ್ಸನ್ನು ಪಡೆದುಕೊಂಡಿದ್ದಾನೆಯೇ? ಈತನು ಆ ಕಾನೂನು ನಿಬಂಧನೆಗಳಿಗನುಸಾರವಾಗಿ ನಡೆದುಕೊಳ್ಳುತ್ತಿದ್ದಾನೆಯೇ ಎಂಬ ಅಂಶಗಳನ್ನೆಲ್ಲಾ ಮೂದಲಿಸಿದ್ದಾರೆಯೋ ಅಥವಾ ಅವರೂ ಸಹ ಇದನ್ನೆಲ್ಲಾ ಕೈಬಿಟ್ಟಿರುತ್ತಾರೆಯೋ ನನಗೆ ಒಂದೂ ಗೊತ್ತಾಗುತ್ತಿಲ್ಲ. ಈಗ ಸರ್ಕಾರದವರು ನಮಗೆ ಈ ವ್ಯವಹಾರದ ವಿಚಾರಗಳನ್ನೆಲ್ಲಾ ತಿಳಿಸಬೇಕಾಗಿದೆ. ಆದರೆ ಇತ್ತೀಚೆಗೆ ಇದಕ್ಕೆ ಸಂಬಂಧಪಟ್ಟ ಇಲಾಖೆಯ ಮೊಖ್ತೇಸರರು ಈ ಆಕ್ಟಿಗೆ ಒಂದು ಪೀನಲ್ ಕ್ಲಾಜನ್ನು ಸೇರಿಸಿರತಕ್ಕ ಬಗ್ಗೆ ಸರ್ಕಾರಕ್ಕೇನೋ ಒಂದು ನೋಟನ್ನು ಕಳುಹಿಸಿರುತ್ತಾರೆಂದು ಕೇಳುತ್ತಿದ್ದೇನೆ. ಆದರೆ ಈದಿವಸ ಈ ಲೇವಾದೇವಿ ಮಾಡತಕ್ಕವರು ಅನೇಕರು ಅನಕ್ಷರಸ್ಥರಿದ್ದಾರೆ. ಅವರಿಗೆ ಲೆಕ್ಕಪತ್ರಗಳನ್ನು ಸರಿಮಾಡುವುದಕ್ಕೆ ಬರುತ್ತಿಲ್ಲ. ಇತರ ಲೇವಾದೇವಿ ಮಾಡುವವರು ಕ್ರಮವಾದ ದಾಖಲೆಗಳೊಂದನ್ನೂ ಇಡುತ್ತಿಲ್ಲ. ಆದರೆ ಎಷ್ಟೋ ಜನ ಈ ದಿವಸ ಈ ಲೇವಾದೇವಿಯನ್ನು ನಡೆಸುತ್ತಿದ್ದಾರೆ. ಕಾನೂನು ಬದ್ಧವಾಗಿ ಅವರೆಲ್ಲರೂ ಈ ಒಂದು ವ್ಯವಹಾರಕ್ಕೆ ಲೈಸೆನ್ಸು ಪಡೆಯಲು ಬದ್ಧರಾಗಿರುತ್ತಾರೆಯೇ ಅಥವಾ ಇಲ್ಲವೇ ಎಂಬ ವಿಚಾರ ಅನೇಕರಿಗೆ ಗೊತ್ತಿರುವುದಿಲ್ಲ. ಆದರೆ ಯಾರು ಖಾಯಂ ಆಗಿ ಈ ವ್ಯವಹಾರ ನಡೆಸಿಕೊಂಡು ಬರುತ್ತಿದ್ದಾರೋ ಅಂಥವರು ಈ ಬಗ್ಗೆ ಒಂದು ಕ್ರಮವಾದ ಲೈಸೆನ್ಸನ್ನು ಪಡೆಯದೆ ಮತ್ತು ಈ ಬಗ್ಗೆ ಕಟ್ಟುನಿಟ್ಟಾಗಿ ಅನುಸರಿಸಬೇಕಾದಂಥ ನಿಯಮಾವಳಿಗಳನ್ನು ಅನುಸರಿಸದೆ ಉದಾಸೀನ ಮಾಡಿದ್ದರೆ ಅಂಥವರು ತರತಕ್ಕಂಥ ದಾವೆಗಳನ್ನು ಕೋರ್ಟಿನವರು ಖಂಡಿತ ಹಿಡಿಯಕೂಡದೆಂದು ಹೇಳಿ ತನ್ಮೂಲಕ ತಾವು ಇದನ್ನೆಲ್ಲಾ ಸರಿಪಡಿಸಬೇಕೆಂದು ನಾನು ಸಲಹೆಮಾಡುತ್ತೇನೆ.

ಇನ್ನು ರಿಜಿಸ್ಟ್ರೇಷನ್ ಇಲಾಖೆ: ಈ ಸಬ್-ರಿಜಿಸ್ಟ್ರಾರ್ ಅವರ ಕಛೇರಿಯಲ್ಲಿ ನಡೆಯಬಹುದಾದ ನ್ಯೂನತೆಗಳನ್ನು ತಡೆಗಟ್ಟಿ ಈ ಇಲಾಖೆಯ ಆಡಳಿತವನ್ನು ಸುವ್ಯವಸ್ಥಿತಿಗೆ ತರಲು ಇತ್ತೀಚೆಗೆ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ಸ್ ಎಂಬುದಾಗಿ ಕೆಲವು ಆಫೀಸುಗಳನ್ನು ತೆರೆದಿರುತ್ತಾರೆಂಬ ಸಮಾಚಾರವನ್ನು ನಾನು ಕೇಳುತ್ತಿದ್ದೇನೆ. ಆದರೆ ನಮ್ಮ ಸಂಸ್ಥಾನದಲ್ಲಿ ಅನೇಕ ಆಫೀಸುಗಳಿಗೆ ಬೋರ್ಡ್ ಇರುವುದಿಲ್ಲ. ಆದರೆ ಈ ಸಬ್-ರಿಜಿಸ್ಟ್ರಾರ್ ಆಫೀಸುಗಳಿಗೆ ಮಾತ್ರ ಎಲ್ಲೇ ನೋಡಲಿ ಅಲ್ಲೊಂದು ಬೋರ್ಡನ್ನು ಮಾತ್ರ ಕ್ರಮವಾಗಿ ತಗಲುಹಾಕಿದ್ದಾರೆ. ಈ ಆಫೀಸಿನ ಬಗ್ಗೆ ಆ ಒಂದು ಆಚರಣೆಯನ್ನು ಮಾತ್ರ ಕ್ರಮವಾಗಿ ಅನುಸರಿಸುತ್ತಿದ್ದಾರೆಂಬುದನ್ನು ನಾನ ನೋಡಿದಂತಾಯಿತು. ನಮ್ಮ ದೇಶದಲ್ಲಿ ಯಾವ ಇಲಾಖೆಯನ್ನೇ ತೆಗೆದುಕೊಳ್ಳಲಿ—ಅನೇಕ ಇಲಾಖೆಗಳಲ್ಲಿ ಅಪ್ರತ್ಯಕ್ಷವಾಗಿ 100-200 ರೂಪಾಯಿಗಳವರೆಗೂ ಲಂಚಾ ತೆಗೆದುಕೊಳ್ಳುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಆದರೆ ಈ ಸಬ್-ರಿಜಿಸ್ಟ್ರಾರ್ಸ್ ಅವರ ಕಛೇರಿಯಲ್ಲಿ "ಒಳಫೀಜು" ಎಂಬುದಾಗಿ ಹೇಳಿ ತೆಗೆದುಕೊಳ್ಳುತ್ತಿರುವಂಥ ವಿಚಾರವನ್ನು ಈ ಮಾನ್ಯ ಸಭೆಯಲ್ಲಿ ಪದೇ ಪದೇ ಇಂಥ ವಿಷಯಗಳನ್ನು ತಿಳಿಸತಕ್ಕದ್ದು ನನಗೇನೋ ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಕಾರಣವೇನೆಂದರೆ ನಾವೇನೋ ಒಂದು ಘನೋದ್ದೇಶವನ್ನಿಟ್ಟುಕೊಂಡು ಈ ಸಭೆಯಲ್ಲಿ ಇಂಥ ವಿಚಾರಗಳನ್ನು ಒಂದೆರಡಾವರ್ತಿ ಹೇಳಿದರೆ—ಇದಕ್ಕೆ ಎಷ್ಟರಮಟ್ಟಿನ ಬೆಲೆಯನ್ನು ಸರ್ಕಾರದವರು ಕೊಡುತ್ತಿದ್ದಾರೆ ಎನ್ನುವುದನ್ನು ನಾವು ಗ್ರಹಿಸಿದ ಬಳಿಕ, ನಾವು ಈ ವಿಚಾರಗಳನ್ನು ವ್ಯಥಾ ಕಾರಣ ಈ ಸಭೆಯ ಮುಂದೆ ಪದೇ ಪದೇ ಹೇಳತಕ್ಕದ್ದು ಸರಿಯಲ್ಲವೆಂದು ನಾನು ಭಾವಿಸಿದ್ದೇನೆ. ಆದರೆ ಇತ್ತೀಚೆಗೇನೋ ಈ ಕಛೇರಿಗಳ ಮೇಲೆಲ್ಲಾ ಒಂದು ವಿಜಿಲೆಂಟ್‌ವಾಚ್ ಇಟ್ಟು ಈ ಅಕ್ರಮಗಳನ್ನೆಲ್ಲಾ ತಡೆಗಟ್ಟಲು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಒಬ್ಬರನ್ನು ಪರೀಕ್ಷಾರ್ಥವಾಗಿ ಒಂದು ಜಿಲ್ಲೆಗೆ ಮಾತ್ರ ನೇಮಕಮಾಡಿರುತ್ತಾರೆಂದು ತಿಳಿದುಬಂತು. ಇಂಥ ವಿಜಿಲೆಂಟ್ ಆಫೀಸರ ಸಂಖ್ಯೆಯನ್ನು ಇನ್ನೂ ಹೆಚ್ಚುಮಾಡಿ ಇವರು ಸಕಾಲಕ್ಕೆ ಸರಿಯಾಗಿ ಪ್ರತಿಯೊಂದು ಆಫೀಸನ್ನೂ ಇನ್ಸ್‌ಪೆಕ್ಷನ್ ಮಾಡಿ, ಈ ಇಲಾಖೆಗೆ ಇಲ್ಲಿಯವರೆಗೂ ಬಂದಿರತಕ್ಕಂಥ ಅಪವಾದವನ್ನು ತಡೆಗಟ್ಟಬೇಕೆಂದೂ, ಈ ಇಲಾಖೆಯಲ್ಲಿ ಇಂಪೆಂಡಿಂಗ್ ಡಾಕ್ಯುಮೆಂಟುಗಳನ್ನು ಇನ್ನೂ ತ್ವರಿತವಾಗಿ ಕ್ರಮ ಪ್ರಕಾರ ನಡೆಸಲು ಸಾಧ್ಯವಾಗುತ್ತದೆಯೇ ಎಂಬುದನ್ನು ಪರಿಶೀಲನೆ ನಡೆಸಬೇಕೆಂದೂ ಸಲಹೆಮಾಡುತ್ತೇನೆ. ಹೀಗೆ ಮಾಡುವುದರಿಂದ ಈ ಇಲಾಖೆಯ ಉತ್ಪತ್ತಿ ಕೂಡ ಜಾಸ್ತಿ ಆಗುತ್ತದೆಂದು ಈ ಎರಡು ಮಾತುಗಳನ್ನು ಹೇಳಿ, ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ).—ಸ್ವಾಮಿ, ಈ ರಿಜಿಸ್ಟ್ರೇಷನ್ ಚಾರ್ಜ್ ವಿಚಾರದಲ್ಲಿ ನಾವು ಒಂದಂಶವನ್ನು 1952-53 ರಿಂದಲೂ ಒಂದೇ ಸಮನಾಗಿ ತಿಳಿಸುತ್ತಲೇ ಬಂದಿದ್ದೇವೆ. ಅದು ಏನು ವಿಚಾರ ಎಂದರೆ, ಈ ಕ್ರಯ, ಭೋಗ್ಯ, ಆಧಾರ ಇತ್ಯಾದಿ ಪತ್ರಗಳು ರಿಜಿಸ್ಟ್ರಾಗತಕ್ಕ ಬಗ್ಗೆ ಆ ರಿಜಿ

ಸ್ಟ್ರಾರ್ ಆಫೀಸಿನಲ್ಲಿ ಒಂದು ಎನ್‌ಕಂಬ್ರೆನ್ಸ್ ಸರ್ಟಿಫಿಕೇಟನ್ನು ಕೊಡುವಂತೆ ಮಾಡಬೇಕೆಂಬುದೇ ಆಗಿದೆ. ಈ ಬಗ್ಗೆ ಅವರು ಒಂದೇ ಪ್ರತ್ಯೇಕ ದಾಖಲೆಯನ್ನೇ ಇಡುವಂತೆ ಏರ್ಪಾಡಾಗಬೇಕಾಗಿದೆ. ಈ ದಿವಸ ಬೊಂಬಾಯಿ ಪ್ರಾಂತ್ಯದಲ್ಲಿ ಆರೀತಿ ಮಾಡಲಾಗುತ್ತಿದೆಯಂತೆ. ಬೊಂಬಾಯಿ ಪ್ರಾಂತ್ಯದಲ್ಲಿ ಈ ದಿವಸ ಯಾವುದಾದರೊಂದು ಆಸ್ತಿ ಅಥವಾ ಸ್ವತ್ತು ದಾವಾ-ಡಿಕ್ರಿ ಆಯಿತೆಂದರೆ ಆ ಕೋರ್ಟಿನವರು ಕೂಡಲೇ ವಿಚಾರವನ್ನು ಆ ಸಂಬಂಧಪಟ್ಟ ಸರಹದ್ದು ರಿಜಿಸ್ಟ್ರಾರ್ ಆಫೀಸಿಗೆ ರಿಪೋರ್ಟ್ ಮಾಡಿಬಿಡುತ್ತಾರಂತೆ. ಹೀಗೆ ಅಲ್ಲಿ ನಡೆಯುತ್ತಿರುವುದರಿಂದ ಜನರಿಗೆ ತುಂಬ ಅನುಕೂಲವಾಗಿದೆ. ಆಸ್ತಿಕೊಳ್ಳತಕ್ಕವರಿಗೆ ಬಹಳ ಅನುಕೂಲವಾಗಿದೆ. ಆದರೆ ನಾವು ಈಚೆಗೆ ನಮ್ಮ ಸಂಸ್ಥಾನದಲ್ಲಿ ಕೋರ್ಟು ಫೀಜ್ ಮತ್ತು ರಿಜಿಷ್ಟ್ರೇಷನ್ ಫೀಜುಗಳನ್ನೇನೋ ಜಾಸ್ತಿ ಮಾಡಿದ್ದೇವೆ. ಆದರೆ ಅದಕ್ಕೆ ತಕ್ಕ ಹಾಗೆ ಜನರಿಗೆ ಅನುಕೂಲವನ್ನು ಮಾತ್ರ ಕಲ್ಪಿಸಿಲ್ಲ. ಆದಕಾರಣ ನಮ್ಮಲ್ಲಿಯೂ ಸಹ ಬೊಂಬಾಯಿನ ಮಾದರಿಯಲ್ಲಿ ಇಲ್ಲಿಯೂ ಜಾರಿಗೆ ತಂದರೆ, ಈ ಎನ್‌ಕಂಬ್ರೆನ್ಸ್ ಸರ್ಟಿಫಿಕೇಟನ್ನು ಕೊಡತಕ್ಕಂಥ ವ್ಯವಸ್ಥೆಯಲ್ಲಿ ಈ ಆಫೀಸಿನಲ್ಲಿ ಕ್ರಮವಾಗಿ ಜಾರಿಗೆ ತಂದರೆ, ಆಗ ಈ ವಿಚಾರ ಜನರಿಗೆಲ್ಲಾ ಚೆನ್ನಾಗಿ ತಿಳಿವಳಿಕೆ ಬರುತ್ತದೆ. ಆದರೆ ಈ ದಿವಸ ಆ ಹಳ್ಳಿಯ ಜನರಿಗೆ ಎಷ್ಟೋ ಸಂದರ್ಭಗಳಲ್ಲಿ ಈ ವಿಚಾರವೇ ಅವರಿಗೆ ತಿಳಿಯದೆ ಬಹಳ ತೊಂದರೆಗಳಾಗಿರುತ್ತವೆ. ಈ ಸಬ್ ರಿಜಿಸ್ಟ್ರಾರ್ ಅವರ ಕಛೇರಿಯಲ್ಲಿ ಹತ್ತಾರು ಕೆಲಸಗಳನ್ನು ಅವರು ನಡೆಸುತ್ತಿರುವಾಗ ಈ ಒಂದು ಕೆಲಸವನ್ನೂ ಕೂಡ ಮಾಡಬೇಕೆಂದರೆ ಇದೂ ಅದೇ ಆಗುತ್ತದೆ. ಯಾರಿಗೆ ಬೇಕಾದರೂ ಯಾವ ಹೊತ್ತಿನಲ್ಲಾಗಲಿ ದಾಖಲೆ ದೊರೆಯಲು ಅನುಕೂಲವಾಗುತ್ತದೆ. ಈ ಮಾರ್ಗವನ್ನು ಜಾರಿಗೆ ತಂದು ಜನರು ಮೋಸಹೋಗುವುದನ್ನು ತಪ್ಪಿಸಬೇಕೆಂದು ತಿಳಿಸಿ ನಾನು ಈ ನನ್ನ ಎರಡು ಮಾತುಗಳನ್ನು ಹೇಳಿ ಕುಳಿತುಕೊಳ್ಳುತ್ತೇನೆ.

ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಜಮೀನು ಅಡಮಾನ ಬ್ಯಾಂಕಿನವರುಗಳಿಂದ ಅಥವಾ ಜಮೀನು ಅಡಮಾನದ ಬ್ಯಾಂಕಿನವರ ಪರವಾಗಿ, ಎಂದರೆ, ಈ ಸಹಕಾರ ಸಂಘಗಳ ಬಗ್ಗೆ, ನಡೆಸಲಾಗುತ್ತಿರುವ ಎಲ್ಲ ಲೇವಾದೇವಿಗಳ ಬಗ್ಗೆಯೂ ಸಂದಾಯ ಮಾಡಬೇಕಾಗಿದ್ದಂಥ ಸ್ಟಾಂಪ್ ಪೇಪರಿನ ಬಗ್ಗೆ ಅರ್ಧ ರಿಯಾಯಿತಿಯನ್ನು ಕೊಡಲಾಗಿದೆ ಎಂದು ಸರ್ಕಾರದವರು ಹೇಳಿರುತ್ತಾರೆ. ಆದರೆ ಹೀಗೆ ಅವರು ಅರ್ಧ ಫೀಜನ್ನು ಮನ್ನಾ ಮಾಡಿದ್ದೇವೆಂದು ಹೇಳುತ್ತಿರುವ ಸಂದರ್ಭದಲ್ಲಿ ನಾವು ಮುಖ್ಯವಾಗಿ ಎರಡು ಅಂಶಗಳಿಗೆ ಗಮನಕೊಡಬೇಕಾಗಿದೆ. ಒಂದು ದೀರ್ಘ ಕಾಲಾವಧಿ ಸಾಲ ಮತ್ತೊಂದು ಅಲ್ಪ ಕಾಲಾವಧಿಯ ಸಾಲ ಎಂದು ಎರಡು ಭಾಗಮಾಡಿದ್ದಾರೆ. ಲ್ಯಾಂಡ್ ಮಾರ್ಗೇಜ್ ಸೊಸೈಟಿಯಲ್ಲಿ ಲಾಂಗ್ ಟರ್ಮ್ ಲೋನಿಗೆ ಅರ್ಜಿ ಹಾಕತಕ್ಕ ಬಗ್ಗೆ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಈ ಬ್ಯಾಂಕಿನ ಲ್ಯಾಂಡ್ ಮಾರ್ಗೇಜ್ ಸೊಸೈಟಿಗಳಿರುತ್ತವೆ. ಈ ಸಾಲಕ್ಕೆ ದರಖಾಸ್ತು ಹಾಕಿಕೊಂಡಿರತಕ್ಕವರು ಮೊದಲು ಆ ತಾಲ್ಲೂಕಿನಲ್ಲಿರುವ ಸೊಸೈಟಿಗಳಲ್ಲಿ ಅರ್ಧ ಸ್ಟಾಂಪ್ ಫೀಜನ್ನು ಕೊಟ್ಟು ಅಲ್ಲಿ ತಮ್ಮ ಕಾಗದ ಪತ್ರಗಳನ್ನು ಮೊದಲು ರಿಜಿಸ್ಟರ್ ಮಾಡಿಸಬೇಕಾಗಿದೆ. ಅನಂತರ ಅವರು ಪುನಃ ಅದೇ ಪತ್ರಗಳನ್ನು ಈ ಸೆಂಟ್ರಲ್ ಬ್ಯಾಂಕಿನಲ್ಲೂ ಮತ್ತೊಮ್ಮೆ ರಿಜಿಸ್ಟರ್ ಮಾಡಿಸಿಕೊಡಬೇಕಾಗಿದೆ. ಹೀಗಿರುವುದರಿಂದ ಸರ್ಕಾರದವರು ಈ ಸಹಕಾರ ಸಂಘಗಳ ಲೇವಾದೇವಿಯ ಬಗ್ಗೆ ಅರ್ಧ ಫೀಜನ್ನು ಮನ್ನಾ ಮಾಡಿರುತ್ತೇವೆಂದು ಹೇಳಿಕೊಳ್ಳುತ್ತಿರುವಂತೆ ಇಲ್ಲಿ ಜನರಿಗೆ ಕಾರ್ಯರೂಪದಲ್ಲಿ ಆ ರೀತಿ ಉಳಿತಾಯವೇನೂ ಆಗುತ್ತಿಲ್ಲ. ಹೀಗೆ ಅವರು ತಮ್ಮ ಕಾಗದ ಪತ್ರಗಳನ್ನು ಒಂದು ಕಡೆಗೆ ರಿಜಿಸ್ಟರಾದದ್ದು ಸಾಲದೆಂದು ಹೇಳಿ ಎರಡು ಕಡೆಗಳಲ್ಲಿ ರಿಜಿಸ್ಟರು ಮಾಡಿಸಿಕೊಳ್ಳುತ್ತಿರುವುದರಿಂದ ಈ ಎರಡು ಕಡೆಗಳಲ್ಲೂ ಕೊಡತಕ್ಕ ಫೀಜನ್ನು ಲೆಕ್ಕ ಹಾಕಿಕೊಂಡರೆ ಆಗ ಇವರು ಪೂರ್ತಿ ಛಾರ್ಜನ್ನು ಕೊಟ್ಟ ಹಾಗೆಯೇ ಆಯಿತು. ನಾನು ಆ ಬ್ಯಾಂಕಿನ ಒಬ್ಬ ಡೈರೆಕ್ಟರು. ನಾನು ಅಲ್ಲಿಯ ವಿಚಾರಗಳನ್ನೆಲ್ಲಾ ಚೆನ್ನಾಗಿ ತಿಳಿದುಕೊಂಡು ಬಂದು ಈಗ ಇಲ್ಲಿ ಚರ್ಚೆ ಮಾಡುತ್ತಿದ್ದೇನೆ. ಅಂತೂ ಸರ್ಕಾರದವರು ನೀಡಿರತಕ್ಕಂಥ ಮನ್ನಣೆಯಿಂದ ಆ ಜನರಿಗೆ ಯಾವ ಅನುಕೂಲವೂ ಸಿಕ್ಕುತ್ತಿಲ್ಲ. ಇದರ ಜೊತೆಗೆ ಅವರು ಅಪ್ಲಿಕೇಷನ್ ಫೀಜನ್ನೂ—ರಿಜಿಷ್ಟ್ರೇಷನ್ನೂ ಸಹ ಕೊಡಬೇಕಾಗಿದೆ. ಈ ಅಪ್ಲಿಕೇಷನ್ ಫೀಜು ಎಷ್ಟು ಆಗುತ್ತದೆಯೋ ಅಷ್ಟೇ ಆ ರಿಜಿಸ್ಟ್ರೇಷನ್ ಫೀಜೂ ಆಗುತ್ತದೆ. ಈ ವಿಚಾರವನ್ನು ನಾನು ಹೋದ ವರ್ಷವೇ ಸರ್ಕಾರದವರ ಗಮನಕ್ಕೆ ತಂದಿದ್ದೆನು. ಆಗ ಸರ್ಕಾರದವರು ಇದನ್ನು ಸರಿಪಡಿಸುತ್ತೇವೆಂದು ಭರವಸೆ ನೀಡಿದ್ದರು. ಆದರೆ ಈ ತಹಲ್‌ವರೆಗೆ ಏನೂ ಕೆಲಸವಾಗಿಲ್ಲ.

ಈಗ ಈ ಷಾರ್ಟ್ ಟರ್ಮ್ ಲೋನುಗಳಿಗೆ ಸ್ಟಾಂಪ್ ಫೀಜು ಮತ್ತು ಎನ್‌ಕಂಬ್ರೆನ್ಸ್ ಸರ್ಟಿಫಿಕೇಟಿನ ಬಗ್ಗೆ ಪಾವತಿಮಾಡಬೇಕಾದಂಥ ಫೀಜು ಇತ್ಯಾದಿಗಳನ್ನೆಲ್ಲಾ ಪೂರ್ತಿಯಾಗಿ ಮನ್ನಾ ಮಾಡಿಬಿಟ್ಟಿದ್ದಾರೆ. ಆದರೆ ಆ ಲಾಂಗ್ ಟರ್ಮ್ ಲೋನುಗಳಿಗೂ ಮತ್ತು ಷಾರ್ಟ್‌ಟರ್ಮ್ ಲೋನುಗಳಿಗೂ ಹೀಗೊಂದು, ಭೇದ ಅಥವಾ ವ್ಯತ್ಯಾಸ ಮಾಡಿರುವುದು ಖಂಡಿತ ಸರಿಯಾದದ್ದಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಅವರು ಒಂದೇ ವರ್ಷದಲ್ಲಿ ಸಾಲ ತೀರಿಸುತ್ತಾರೆ. ಆದ್ದರಿಂದ ಅವರಿಗೆ ಇವುಗಳನ್ನೆಲ್ಲಾ ಮನ್ನಾ ಮಾಡಿರುತ್ತಾರೆ.

ಶ್ರೀ ಜಿ. ಶಿವಪ್ಪ.—ಆ ಬ್ಯಾಂಕಿನವರೂ ಸಹ ಈ ವಿಚಾರವಾಗಿ ಸರ್ಕಾರಕ್ಕೆ ರಿಪೋರ್ಟು ಮಾಡಿದ್ದಾರೆ. ಇತ್ತೀಚೆಗೆ ದೇಶದಲ್ಲಿ ಈ ಕೋ-ಆಪರೇಟಿವ್ ಮೂವ್‌ಮೆಂಟು ಹೆಚ್ಚುತ್ತಿದೆ. ಅವರು ವೇರ್ ಹೌಸ್—ಇತ್ಯಾದಿ ನಾನಾ ಕಾರ್ಯಕ್ರಮಗಳನ್ನು ನಡೆಸಲು ಪ್ರಯತ್ನಪಟ್ಟಿದ್ದಾರೆ. ಇಂಥ ಸಮಯದಲ್ಲಿ ಈ ಸಂಸ್ಥೆಗಳಿಗೆ ತಾವು ಒಂದು ಅನುಕೂಲವನ್ನು ಕಲ್ಪಿಸಿಕೊಡತಕ್ಕದ್ದು ನ್ಯಾಯ. ಈಗ ಈ ಎಲ್ಲಾ ಸಂಸ್ಥೆಗಳವರೂ ಇಂಥ ಒಂದು ರಿಯಾಯಿತಿಯನ್ನು ನೀಡಬೇಕೆಂದು ಮನವಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ತಾವು ಒಂದು ಉದಾರ ರೀತಿಯಿಂದ ವರ್ತಿಸಬೇಕಾದದ್ದು ತಮ್ಮ ಕರ್ತವ್ಯವಾಗಿದೆ. ಈ ಸಂಸ್ಥೆಗಳನ್ನು ಸರ್ಕಾರ ಬೆಳಸಿಕೊಂಡು ಉಳಿಸಿಕೊಂಡು ಬರಬೇಕಾದ್ದು ಅದರ ಜವಾಬ್ದಾರಿ. ಇದರಲ್ಲಿ ತಾವು ಭೇದ ಭಾವನೆಯನ್ನು ತೋರಿಸಬಾರದು, ಎಲ್ಲರಿಗೂ ಒಂದೇ ಸಮನಾದ ಅನುಕೂಲಗಳನ್ನು ನೀಡಬೇಕಾದದ್ದು ಅಗತ್ಯವಾಗಿದೆ. ತತ್ವದೃಷ್ಟಿಯಲ್ಲಿ ನೋಡುವುದಾದರೂ ಕೂಡ ಈ ವಿಚಾರದಲ್ಲಿ ಬೇಧ ಮಾಡಲು ಅವಕಾಶವಿಲ್ಲ. ಆದ್ದರಿಂದ ನಾನೀಗ ಸರ್ಕಾರದವರ ಗಮನಕ್ಕೆ ಈ ಮುಖ್ಯವಾದ ಅಂಶಗಳನ್ನೆಲ್ಲಾ ತಂದಿರುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಈ ಡಿಮ್ಯಾಂಡಿನ ವಿಷಯದಲ್ಲಿ ಶ್ರೀ ಚಿಕ್ಕಲಿಂಗಯ್ಯನವರು ಎರಡು ವಿಷಯಗಳನ್ನು ಪ್ರಸ್ತಾಪಮಾಡಿದರು. ಮೊದಲನೆಯದಾಗಿ ರೆಕಾರ್ಡ್ ಆಫ್ ಲ್ಯಾಂಡ್ ಇಂಡೆಕ್ಸನ್ನು ಸಬ್ ರಿಜಿಸ್ಟ್ರಾರ್‌ರವರು maintain ಮಾಡಬೇಕು, ಅದರಿಂದ ಅನುಕೂಲವಾಗುತ್ತದೆ ಎನ್ನುವುದು. ಇದು ನೋಡುವುದಕ್ಕೆ ಸುಲಭವಾಗಿ ಕಂಡರೂ ಮತ್ತು ಅನುಕೂಲವಾಗುತ್ತದೆ ಎಂಬುದು ಮನಸ್ಸಿಗೆ ಬಂದರೂ ಕೂಡ ಇದರಿಂದ ಕೆಲಸ ವಿಪರೀತವಾಗುತ್ತದೆ. ಆದ ಕಾರಣ ಇದು ಎಷ್ಟು ಮಟ್ಟಿಗೆ ಸಾಧ್ಯವಾಗುತ್ತದೆ ಎಂಬುದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿ ಅಷ್ಟು ಮಾತ್ರ ಈಗ ಸದ್ಯದಲ್ಲಿ ಅವರಿಗೆ ಭರವಸೆಕೊಡುತ್ತೇನೆ.

ಮನಿಲೆಂಡರ್ಸ್ ಆಕ್ಟ್ ಇನ್-ಇಫೆಕ್ಟಿವ್ ಆಗಿದೆ ಎಂದು ಹೇಳಿದರು. ಈ ಆಕ್ಟ್ ಪ್ರಕಾರ ಮನೀಲೆಂಡರ್ಸ್ ಎಲ್ಲರೂ ಕೂಡ ರಿಜಿಸ್ಟರ್ ಮಾಡಿಕೊಳ್ಳಬೇಕು. ರೂಲ್ಸ್ ಪ್ರಕಾರ ಅವರ ಸರ್ಟಿಫಿಕೇಟ್ ಏನಿದೆ ಅದನ್ನು ಮೂರು ವರ್ಷಗಳ ಮೇಲೆ ಒಬ್ಬರೂ ಕೂಡ ರಿನ್ಯೂ ಮಾಡಿಕೊಳ್ಳಲಿಲ್ಲ. ಅನೇಕ ವೇಳೆ ಸರ್ಕಾರದವರು ಅವರಿಗೆ ಒತ್ತಾಯಮಾಡಿದರೂ ಕೂಡ ರಿನ್ಯೂ ಮಾಡಿಕೊಳ್ಳಲಿಲ್ಲ. ಅವರ ಮೇಲೆ ಪ್ರಾಸಿಕ್ಯೂಷನ್ ಹಾಕಬೇಕು, ಕಾನೂನು ಪ್ರಕಾರ ಶಿಕ್ಷೆ ಮಾಡಬೇಕೆಂಬುದೇ ಸರ್ಕಾರದವರ ಆಶೆ. ಆದರೆ ನಾವು ಮಾಡಿದ ಕಾನೂನಿನಲ್ಲಿ ಸ್ವಲ್ಪ ಲೋಪ ದೋಷ ಇದ್ದುದರಿಂದ ಅವರ ಮೇಲೆ ಕಾನೂನು ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ತೊಂದರೆ ಆಯಿತು. ಅದಕ್ಕೆ ಉಗ್ರವಾದ ಒಂದು ಪೀನಲ್ ಕ್ಲಾಸ್‌ನ್ನು ಹಾಕಬೇಕು. ಯಾವ ಮಟ್ಟದಲ್ಲಿ ಮತ್ತು ಯಾವ ರೀತಿ ಮಾರ್ಪಾಡು ಮಾಡಬೇಕೆಂಬುದನ್ನು ಯೋಚನೆಮಾಡಿ ಅದನ್ನು ಈ ಸಭೆಯ ಮುಂದೆ ತರಬೇಕು ಎನ್ನುವುದು ಸರ್ಕಾರದ ಆಶಯವಾಗಿದೆ. ಆದರೆ ಇನ್ನು ಮುಂದೆ ರಾಜ್ಯದ ಪುನರ್‌ವಿಂಗಡಣೆಯಾಗುವುದರಿಂದ ಅದು ಆದ ಮೇಲೆ ಒಂದೇ ಸಲ ಆ ಶಾಸನವನ್ನು ಜಾರಿಗೆ ತರುವುದು ಉತ್ತಮ ಎಂದು ಅಭಿಪ್ರಾಯಪಟ್ಟು ಅದನ್ನು ಇಷ್ಟಕ್ಕೇ ನಿಲ್ಲಿಸಿದ್ದೇವೆಯೇ ವಿನಾ ಸರ್ಕಾರದವರಿಗೆ ಖಂಡಿತವಾಗಿಯೂ ಮನಿಲೆಂಡರ್ಸ್ ಆಕ್ಟ್ ಇಫೆಕ್ಟಿವ್ ಆಗಿರಬೇಕೆಂಬುದರಲ್ಲಿ ಆಶೆ ಇದೆ. ಆ ರೀತಿ ಮಾಡುವುದಕ್ಕೆ ತಕ್ಕ ಏರ್ಪಾಡನ್ನು ಆದಷ್ಟು ಬೇಗ ಮಾಡುತ್ತೇವೆ.

ಮೂರನೆಯದಾಗಿ ಶ್ರೀ ಚಿಕ್ಕಲಿಂಗಯ್ಯನವರು ಈ ಒಳಫೀಜಿನ ವಿಷಯದಲ್ಲಿ ಬಹಳವಾಗಿ ಪಶ್ಚಾತ್ತಾಪಪಟ್ಟರು. ಸಬ್ ರಿಜಿಸ್ಟ್ರಾರ್‌ರ ಆಫೀಸಿನಲ್ಲಿ ಒಳಫೀಜು ಕೊಡಕೂಡದು ಎಂದು ಬೋರ್ಡ್ ಹಾಕಿದ್ದಾರೆ. ಒಪ್ಪಿಕೊಳ್ಳೋಣ. ಎಷ್ಟೋ ಕಡೆ ಲಂಚ ಕಾಣದ ಹಾಗೆ ಕೊಡುತ್ತಾರೆ, ಬಡಪಾಯಿ ಸಬ್ ರಿಜಿಸ್ಟ್ರಾರ್‌ರ ಮೇಲೆ ಸರ್ಕಾರದ ಕಣ್ಣು ಏಕೆ ಬೀಳಬೇಕು ಎಂದು ಕೇಳಿದರು. ಇದಕ್ಕೆ ಕಾರಣ ಸಬ್ ರಿಜಿಸ್ಟ್ರಾರ್ ಆಫೀಸು ಬಹಳ ಕಾಲದಿಂದ ಲಂಚಕ್ಕೆ ಹೆಸರುವಾಸಿ ಆದದ್ದು ಎಂದು ಅಷ್ಟೆ. ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲೇ ಆಗಲಿ, ತಾಲ್ಲೂಕು ಆಫೀಸಿನಲ್ಲೇ ಆಗಲಿ, ಡಿಸ್ಟ್ರಿಕ್ಟ್ ಆಫೀಸಿನಲ್ಲೇ ಆಗಲಿ ಅಥವಾ ಸರ್ಕಾರದ ಯಾವ ಆಫೀಸಿನಲ್ಲೇ ಆಗಲಿ ಒಳ ಫೀಜು ಎನ್ನುವುದು ಯಾವ ವಿಧದಲ್ಲೇ ಇರಲಿ ಅದನ್ನು ಸಾಧ್ಯವಾದರೆ ಮೂಲೋತ್ಪಾಟನ ಮಾಡಬೇಕು, ಇಲ್ಲದೇ ಇದ್ದರೆ ಹತೋಟಿಯನ್ನಾದರೂ ಮಾಡಬೇಕೆಂಬುದರಲ್ಲಿ ಸರ್ಕಾರದವರಿಗೆ ತುಂಬ ಆಸಕ್ತಿ ಇದೆ. ಆದರೆ ಸರ್ಕಾರದವರಲ್ಲಿ ಆಸಕ್ತಿ ಇದ್ದರೆ ಮಾತ್ರ ಸಾಲದು ; ಸಾರ್ವಜನಿಕರಲ್ಲೂ ಕೂಡ ಆಸಕ್ತಿ ಇರಬೇಕೆಂಬುದು ಭಿನ್ನಾಭಿಪ್ರಾಯಕ್ಕೆ ಆಸ್ಪದವಾದುದಲ್ಲ. ಸಾಮಾನ್ಯವಾಗಿ ಈ ಒಳ ಫೀಜು ಕೊಡುವುದು, ಒಬ್ಬರಿಗೆ ಕಾಣುವಂತೆ ಕೊಡುವುದು ಅಲ್ಲ. ಒಬ್ಬರಿಗೂ ಕಾಣದಂತೆ ಗುಟ್ಟಿನಲ್ಲಿ ಮಾಡತಕ್ಕ ಈ ಕೆಲಸವನ್ನು ಬಹಿರಂಗಪಡಿಸಿ, ಅದನ್ನು ಸಾಬೀತುಮಾಡಿ, ಅದರ ಮೇಲೆ ಉಗ್ರ ಕಾರ್ಯಕ್ರಮ ತಗೆದುಕೊಳ್ಳುವುದು ಸ್ವಲ್ಪ ಕಷ್ಟತಮವಾದ ಕೆಲಸ. ಸರ್ಕಾರದವರಿಗೆ ಆ ವಿಷಯದಲ್ಲಿ ತಾತ್ಸಾರ ಮನೋಭಾವವಿಲ್ಲ, ಸಿಕ್ಕಿದವರನ್ನು ಬಲಿ ಹಾಕಬೇಕೆಂದು ಇದ್ದೇವೆ, ಹಾಕುತ್ತಲೂ ಇದ್ದೇವೆ. ಆದರೆ ಸಿಕ್ಕುವುದೇ ಸ್ವಲ್ಪ ಕಷ್ಟ. ಅಡ್ಡಿ ಆತಂಕಗಳು ಅನೇಕವು ಬರುತ್ತವೆ. ಅವು ನಾನಾ ಕಾರಣಗಳಿಂದ ಬರುತ್ತವೆ. ಒಂದೊಂದು ವೇಳೆ, ಹೊಸದಾಗಿ ರಾಜ್ಯಾಂಗ ಜಾರಿಗೆ ಬಂದ ಮೇಲೆ, ಅನುಮಾನಕ್ಕೆಡೆ ಇಲ್ಲದಂತೆ ಸಾಬೀತಾದರೆ ಮಾತ್ರ ಶಿಕ್ಷೆ ಮಾಡುವುದಕ್ಕೆ ಸಾಧ್ಯವೇ ಹೊರತು ಇಲ್ಲದೇ ಇದ್ದರೆ ಸಾಧ್ಯವಿಲ್ಲ. ಮೊನ್ನೆ ತಾನೆ ಇದಕ್ಕೆ ಸಂಬಂಧಪಟ್ಟ ಪ್ರಶ್ನೆಗೆ ಉತ್ತರ ಕೊಡುತ್ತಾ, ಲಾಯರನ್ನಿಟ್ಟುಕೊಳ್ಳುವುದಕ್ಕೆ ಏಕೆ ಅವಕಾಶ ಕೊಡಕೂಡದು ಎಂಬುದನ್ನು ಹೇಳಿದೆ. ಕಾರಣವೇನೆಂದರೆ, ಆ ರೀತಿ ಮಾಡುವುದರಿಂದ ನಿಧಾನವಾಗುತ್ತದೆ. ಆದ್ದರಿಂದ ನಾನಾದರೂ ತಮ್ಮಲ್ಲಿ ಅರಿಕೆಮಾಡುತ್ತೇನೆ, ಸರ್ಕಾರದವರಿಗೆ ಇದನ್ನು ಶುದ್ಧೀಕರಣಮಾಡಿ, ಈ ಲಂಚಗೂಳಿತನವನ್ನು ಸಾಧ್ಯವಾದಷ್ಟು ಹತೋಟಿಯಲ್ಲಿಡಬೇಕೆಂಬುದರಲ್ಲಿ ತಮಗೆಲ್ಲರಿಗಿಂತಲೂ ಕೂಡ ಹೆಚ್ಚಿನ ಆಸಕ್ತಿ ಇದೆ. ಸಬ್‌ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ "ಒಳಫೀಜು"ನ ನೋಟೀಸ್ ಏಕೆ ಹಾಕಿದ್ದೇವೆ ಎಂದರೆ ಅದು ಜನಗಳ ತಿಳಿವಳಿಕೆಗೆ ಬರಬೇಕು. ಬಾಕಿ ಕಡೆ ಏಕೆ ಹಾಕಬಾರದು ಎಂದು ಕೇಳಿದರು. ಅದು ಬಹಳ ಒಳ್ಳೆಯ ಸಲಹೆ ಅದನ್ನು ಸರ್ಕಾರದವರು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ನಾರಾಯಣಸ್ವಾಮಿ (ಮೈಸೂರು ದಕ್ಷಿಣ).—"ಒಳಫೀಜು" ಎಂದು ತಾವು ಬೋರ್ಡ್ ಹಾಕುತ್ತೀರಿ. ಅವರು ಹೊರಗಡೆಯೇ ತೆಗೆದುಕೊಳ್ಳುತ್ತಾರೆ. (ಸಭೆಯಲ್ಲಿ ನಗು !)

ಶ್ರೀ ಎಂ. ಚಿಕ್ಕಲಿಂಗಯ್ಯ.—ಏಕೆ ಹೇಳಿದೆ. ಎಂದರೆ ಸರ್ಕಾರದ ದೃಷ್ಟಿಯಿಂದ ಅದು ಒಳ್ಳೆಯದಲ್ಲ, ಆಡಳಿತಕ್ಕೆ ಚೆನ್ನಾಗಿ ಕಾಣುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಇಲ್ಲದೇ ಇದ್ದರೆ ಸರ್ಕಾರಕ್ಕೂ ಒಳ್ಳೆಯದು, ತಮಗೂ ಒಳ್ಳೆಯದು. ಒಂದು ವೇಳೆ ಒಳಫೀಜು ಕೊಡಬೇಡಿ ಎಂದು ಹೇಳುವುದರಲ್ಲಿ, ಬೋರ್ಡ್ ಹಾಕುವುದರಲ್ಲಿ ತಪ್ಪೇನಿದೆ ?

ಶ್ರೀ ಎಂ. ಚಿಕ್ಕಲಿಂಗಯ್ಯ.—ಸರ್ಕಾರದವರೇ ಲಂಚಗೂಳಿತನ ಇದೆ ಎಂದು ಒಪ್ಪಿಕೊಂಡಹಾಗಾಯಿತಲ್ಲವೇ !

ಶ್ರೀ ಎಚ್. ಎಂ. ಚನ್ನಬಸಪ್ಪ.—ದೇಶದಲ್ಲಿ ಲಂಚಗೂಳಿತನ ಇಲ್ಲ ಎಂದು ಯಾರೂ ಹೇಳುತ್ತಿಲ್ಲ. ಕೊಡತಕ್ಕ ಜನ ಇದ್ದಾರೆ, ತೆಗೆದುಕೊಳ್ಳತಕ್ಕ ಜನ ಇದ್ದಾರೆ. ಅದನ್ನು ಹತೋಟಿಮಾಡಬೇಕು, ಸಾಧ್ಯವಾದಮಟ್ಟಿಗೂ ಮೂಲೋತ್ಪಾಟನ ಮಾಡಬೇಕು ಎಂಬುದೇ ಸರ್ಕಾರದ ಆಶಯ. ಒಟ್ಟಿನಲ್ಲಿ ಈ ಒಳಫೀಜು ಸಬ್‌ರಿಜಿಸ್ಟ್ರಾರ್‌ರವರ ಆಫೀಸಿನಲ್ಲಾಗಲಿ, ಇತರ ಯಾವ ಕ್ಷೇತ್ರದಲ್ಲೇ ಆಗಲಿ ಹತೋಟಿ ಮಾಡುವುದಕ್ಕೆ ತಕ್ಕ ಏರ್ಪಾಡನ್ನು ಸರ್ಕಾರದವರು ಮಾಡುತ್ತಾರೆ, ಈಗಲೂ ಮಾಡುತ್ತಾ ಇದ್ದಾರೆ ಎಂದು ಹೇಳಿದರೆ ಸಾಕಾಗಿದೆ. ಈ ನೋಟೀಸು ಏಕೆ ಇರಬೇಕೆಂಬುದು ಅವರಿಗೇ ಅರ್ಥವಾಗುತ್ತದೆ.

ಒಂದು ಡಿಸ್ಟ್ರಿಕ್ಟ್‌ನಲ್ಲಿ ಮಾತ್ರ ಏಕೆ ಡಿಸ್ಟ್ರಿಕ್ಟ್ ಸೂಪರ್‌ವೈಜರ್‌ನ್ನು ನೇಮಕಮಾಡಿದ್ದೀರಿ, ಅದರಿಂದ ಸ್ವಲ್ಪ ಆದಾಯ ಹೆಚ್ಚಾಯಿತೇ, ಒಳಫೀಜು ಕಮ್ಮಿ ಆಯಿತೇ ಎಂಬ ಅಭಿಪ್ರಾಯ ಬರುವ ರೀತಿಯಲ್ಲಿ ಅವರು ಕೇಳಿದರು. ಉದ್ದೇಶ ಅದಲ್ಲ. ಆ ಡಿಸ್ಟ್ರಿಕ್ಟಿನ ರಿಜಿಸ್ಟ್ರಾರ್ಸ್ ಆಫೀಸುಗಳಲ್ಲಿ ಡಿಫಿಷಿಯೆಂಟ್ ಸ್ಟ್ಯಾಂಪಿಂಗ್ ಏನಾದರೂ ಆಗಿ ಅದರಿಂದ ಸರ್ಕಾರದವರಿಗೆ ಏನಾದರೂ ನಷ್ಟವಾಗಿದೆಯೇ ಎಂಬುದನ್ನು ಸ್ಕ್ರೂಟಿನೈಸ್ ಮಾಡುವುದಕ್ಕೆ ಒಂದು ಜಿಲ್ಲೆಗೆ ಮಾತ್ರ ಒಬ್ಬ ಡಿಸ್ಟ್ರಿಕ್ಟ್ ಆಫೀಸರನ್ನು ಏರ್ಪಾಡುಮಾಡಿದ್ದೇವೆ. ಅದರಿಂದ ಸರ್ಕಾರದವರಿಗೆ ಲಾಭವೇನೋ ಆಯಿತು. ಸುಮಾರು ನಾಲ್ಕು ಸಾವಿರ ರೂಪಾಯಿ ಖರ್ಚಾಗಿದೆ, 12,690 ರೂಪಾಯಿ ಉತ್ಪತ್ತಿ ಆಗಿದೆ. ಒಳಫೀಜು ಕಮ್ಮಿ ಆಯಿತು ಎಂದು ಅಲ್ಲ. ಡಿಫಿಷಿಯೆಂಟ್ ಸ್ಟ್ಯಾಂಪಿಂಗ್ ಇದ್ದು, ಅದನ್ನು ಸ್ಕ್ರೂಟಿನೈಸ್ ಮಾಡಿ, ಉತ್ತಮಪಡಿಸಿದುದರಿಂದ ಹೆಚ್ಚಿಗೆ ಉತ್ಪತ್ತಿ ಆಯಿತು. ಇತರ ಎಲ್ಲಾ ಕಡೆಯೂ ಕೂಡ ಇದೇ ರೀತಿ ಪರಿಶೀಲನೆಮಾಡಬೇಕೆನ್ನುವ ವಿಷಯ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ; ಅದನ್ನು ಪರ್ಯಾಲೋಚಿಸಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

Mr. DEPUTY SPEAKER.—The question is :

"That a sum not exceeding Rs. 5,76,000 be granted to the Government to defray the charges which will come in course of payment during the year ending 31st day of March 1957, in respect of 'Registration'."

The motion was adopted.

DEMAND No. 17—SCIENTIFIC DEPARTMENTS.

36. SCIENTIFIC DEPARTMENTS.

Mr. DEPUTY SPEAKER.—Motion moved :

"That a sum not exceeding Rs. 9,83,000 be granted to the Government to defray the charges which will come in course of payment during the year ending 31st day of March 1957, in respect of 'Scientific Departments'."

5-30 P.M.

*ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸ್ವಾಮಿ, ವಿಜ್ಞಾನ ವಿಷಯಗಳಿಗೆ ಸಂಬಂಧಪಟ್ಟ ಇಲಾಖೆಗಳ ಡಿಮ್ಯಾಂಡಿಗೆ ನಾನು ನನ್ನ ಬೆಂಬಲವನ್ನು ನೀಡುತ್ತೇನೆ. ಈ ಸಂಬಂಧದಲ್ಲಿ ನಾನು ಒಂದೆರಡು ಜರೂರು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ಯಾವುದೇ ದೇಶ ನಿಜವಾಗಿಯೂ ಅಭಿವೃದ್ಧಿಯನ್ನು ಹೊಂದಬೇಕಾದರೆ, ಆ ದೇಶದಲ್ಲಿ ವಿಜ್ಞಾನಕ್ಕೆ ಸಂಬಂಧಪಟ್ಟ ಸಂಶೋಧನೆಗಳಿಗೆ ಸಾಕಷ್ಟು ಪ್ರೋತ್ಸಾಹ ಮತ್ತು ಅವಕಾಶವನ್ನು ಕಲ್ಪಿಸಿಕೊಡುವುದು ಸರ್ಕಾರದವರ ಕರ್ತವ್ಯ. ನಮ್ಮ ದೇಶದಲ್ಲಿ ಹೆಮ್ಮೆಪಟ್ಟುಕೊಳ್ಳುವಷ್ಟು ವಿಜ್ಞಾನ ಸಂಶೋಧನೆಗಳು ನಡೆಯದೇ ಇದ್ದರೂ ಕೂಡ, ಅದರ ಪ್ರಾಮುಖ್ಯತೆಯನ್ನು ಚನ್ನಾಗಿ ಅರಿತಿದ್ದೇವೆ. ಈ ಇಲಾಖೆ ಚೆನ್ನಾಗಿ ಕೆಲಸಮಾಡಿ ನಮ್ಮ ಭೂ ಸಂಪತ್ತು, ಸಸ್ಯ ಸಂಪತ್ತು ಮತ್ತು ಶಿಲಾ ಸಂಪತ್ತು—ಇವುಗಳನ್ನು ಜನತೆಯ ಕಲ್ಯಾಣಕ್ಕಾಗಿ ಉಪಯೋಗಿಸುವ ವಿಧಾನಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಕಂಡುಹಿಡಿಯುತ್ತೇವೆಯೋ ಅಷ್ಟಷ್ಟು ಮಟ್ಟಿಗೆ ದೇಶ ಅಭಿವೃದ್ಧಿಗೆ ಬರುತ್ತದೆ. ಈ ದೃಷ್ಟಿಯಿಂದ ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬೇಕಾಗಿರುವ ವಿಷಯವೇನೆಂದರೆ, ಈಗ ಚಿಕ್ಕಮಗಳೂರು ಜಿಲ್ಲೆಯ ಮತ್ತು ಹಾಸನ ಜಿಲ್ಲೆಯ ಸಹ್ಯಾದ್ರಿಪರ್ವತದ ಭಾಗಗಳಲ್ಲಿ ಏಲಕ್ಕಿ ಬೆಳೆಗೆ ಕೊಟ್ಟ ಪ್ರೋತ್ಸಾಹದ ದೆಸೆಯಿಂದ ಅಲ್ಲಿಯ ಜನರು ಬೇಕಾದಷ್ಟು ಸಂಪಾದನೆ ಮಾಡುತ್ತಿದ್ದಾರೆ. ಆದರೆ, ಇದೇ ಪರ್ವತದ ಉತ್ತರ ಪ್ರದೇಶವಾದ ಶಿವಮೊಗ್ಗ ಜಿಲ್ಲೆಯ ಭಾಗದಲ್ಲಿ ಇದೇ ರೀತಿ ಏಲಕ್ಕಿಯನ್ನು ಬೆಳೆಯುವ ಯಾವ experiment ಸಹ ನಡೆಯದೆ, ಆ ಪ್ರದೇಶ ಬಹಳ ಹಿಂದೆ ಬಿದ್ದಿದೆ. ಅಲ್ಲಿ ಸಾಕಷ್ಟು ಸಂಶೋಧನೆ ನಡೆಸಿದರೆ ಅಲ್ಲಿಯೂ ಸಾಕಷ್ಟು ಬೆಳೆಯಬಹುದು. ಆದ್ದರಿಂದ ಇಲಾಖೆಯವರು ಈ ಬಗ್ಗೆ ಆಸಕ್ತಿವಹಿಸಿ ಸಂಶೋಧನೆಮಾಡಬೇಕೆಂಬುದು ಒಂದು. ಎರಡನೆಯದಾಗಿ ಹೊನ್ನೆಮರಡು ಮುಂತಾದ ಬೃಹತ್‌ಯೋಜನೆಗಳ ಪರಿಣಾಮವಾಗಿ ಆ ಪರ್ವತದ ಅನೇಕ ಪ್ರದೇಶಗಳು ಮುಳುಗಡೆಗೆ ಒಳಪಡುವುದರಿಂದ ಆ ಪ್ರದೇಶದಲ್ಲಿ ಹೇರಳವಾಗಿ ಖನಿಜಗಳು ಸಿಕ್ಕಬಹುದೋ ಏನೋ. ಏಕೆಂದರೆ ಸಮೀಪದಲ್ಲೇ ಕೆಲವು ಪ್ರದೇಶಗಳಲ್ಲಿ ಮ್ಯಾಂಗನೀಸ್ ಖನಿಜಗಳನ್ನು ತೆಗೆಯುತ್ತಿದ್ದಾರೆ. ಆದ್ದರಿಂದ ಶಾಶ್ವತವಾಗಿ ಮುಳುಗಡೆಗೆ ಬರುವ ಈ ಭೂಪ್ರದೇಶದಲ್ಲಿರತಕ್ಕ ಖನಿಜ ಪದಾರ್ಥಗಳನ್ನು ಈಗಲೇ ಪರಿಶೋಧನೆ ಮಾಡಿ ಉಪಯೋಗಿಸಿಕೊಳ್ಳುವುದು ಸೂಕ್ತ ಸಲಹೆಯಾಗಬಹುದೆಂದು ಭಾವಿಸಿ ಅದನ್ನು ನಾನ ಸರ್ಕಾರದ ಗಮನಕ್ಕೆ ತರುತ್ತಾ ಈ ಡಿಮ್ಯಾಂಡಿಗೆ ನನ್ನ ಬೆಂಬಲ ನೀಡುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಅಧ್ಯಕ್ಷರೇ, ನಾನು ಈ ಡಿಮ್ಯಾಂಡನ್ನು ವಿರೋಧಿಸುತ್ತೇನೆ. ಸರ್ಕಾರದವರು ಈ ಇಲಾಖೆಯಿಂದ ಎಷ್ಟರ ಮಟ್ಟಿನ ಪ್ರತಿಫಲ ಹೊಂದಬೇಕೋ ಅಷ್ಟನ್ನು ಹೊಂದುತ್ತಿಲ್ಲ, ಅಲಕ್ಷ್ಯದಿಂದ ವರ್ತಿಸುತ್ತಿದ್ದಾರೆಂಬುದು ನನ್ನ ಆಪಾದನೆ. ಸ್ವಾಮಿ, ಈ ಸಭೆಯ ಒತ್ತಾಯದ ಮೇಲೆ ಭೀಮಪ್ಪನಾಯಕ್ ಕಮಿಟಿಯೆಂದು ಒಂದು ಕಮಿಟಿಯನ್ನು ಸರ್ಕಾರದವರು ನೇಮಕ ಮಾಡಿದರು. ಎಂದೂ ಎಂದಿನಂತೆ ಸರ್ಕಾರ ಈ ಕಮಿಟಿಯನ್ನು ನೇಮಿಸುವುದರಲ್ಲೇನೋ ಬಹಳ ಮಟ್ಟಿನ ಆಸಕ್ತಿಯನ್ನು ತೋರಿಸಿತು. ಆದರೆ, ರಿಪೋರ್ಟ್ ಬಂದದ್ದರ ಮೇಲೆ ಎಳ್ಳಷ್ಟಾದರೂ ಆಸಕ್ತಿಯನ್ನು ಸರ್ಕಾರ ತೋರಿಸಿತೇ? ಆ ರಿಪೋರ್ಟಿನಲ್ಲಿ ಏನಿದೆಯೆಂಬುದನ್ನೂ ಸಹ ನೋಡಿಲ್ಲ. ಯಾವಾಗ ಕೇಳಿದರೂ ಸರ್ಕಾರದವರು ಪರಿಶೀಲಿಸುತ್ತಿದ್ದಾರೆಂದು ಜವಾಬು ಹೇಳುತ್ತಿದ್ದಾರೆ. ಕೊನೆಗೆ ಆ ರಿಪೋರ್ಟು ಮೂಲೆಗೆ ಬಿದ್ದುಹೋಗುತ್ತದೆ. ಇಂಡಿಯಾ ದೇಶದ ಅನೇಕ ಕಾರ್ಖಾನೆಗಳನ್ನು ನೋಡಿಕೊಂಡು ಬಂದಿರುವವರೂ ಅನೇಕ ಭೂಗರ್ಭ ಸಂಶೋಧನೆಗಳನ್ನು ಮಾಡಿದ ಎಂಜಿನಿಯರುಗಳೂ ಸೇರಿ ಮಾಡಿದ ವರದಿ ಇದು. ಇದರಿಂದ ಎಳ್ಳಷ್ಟೂ ಪ್ರಯೋಜನ ಹೊಂದಿಲ್ಲ. ನಮ್ಮ ಜಿಯಾ

(ಶ್ರೀ ಬಿ. ಹುಚ್ಚೇಗೌಡ)

ಲಜಿ ಇಲಾಖೆಯಲ್ಲಿರುವ ಖನಿಜಾಭಿವೃದ್ಧಿ ಶಾಖೆಗೆ ಹೆಚ್ಚಿಗೆ ದ್ರವ್ಯವನ್ನು ಒದಗಿಸಿ ದೇಶದ ಸಂಪತ್ತನ್ನು ಜಾಸ್ತಿ ಮಾಡಿ ತೆರಿಗೆ, ಕಂದಾಯಗಳನ್ನು ಕಡಮೆ ಮಾಡುವ ಯೋಚನೆಯನ್ನು ಇದುವರೆಗೂ ಸರ್ಕಾರ ಮಾಡಿಲ್ಲ. ಈ ಇಲಾಖೆಯಲ್ಲಿ ಖರ್ಚಿಗೆ ತಕ್ಕಷ್ಟು ಉತ್ಪತ್ತಿ ಬರುತ್ತಿಲ್ಲ. ಅನೇಕ ದೂರುಗಳು ಈ ಇಲಾಖೆಯ ವಿಷಯದಲ್ಲಿ ಬಂದಿವೆ. ಖನಿಜಗಳನ್ನು ತೆಗೆಯಲು ಮುಂದೆ ಬರುವವರಿಗೆ ಸಾಕಷ್ಟು ಅನುಕೂಲ ಮಾಡಿಕೊಡುತ್ತಿಲ್ಲ. ಹೆಚ್ಚಿಗೆ ದುಡ್ಡು ಹಾಕಿದರೂ ಪರವಾಯಿಲ್ಲ, ಅವರಿಗೆ ಖನಿಜಗಳನ್ನು ತೆಗೆಯುವುದಕ್ಕೆ ಬೇಕಾದ ಸಲಕರಣೆ, ಸಹಾಯಗಳನ್ನು ಏಕೆ ಸರ್ಕಾರ ಮಾಡಿಕೊಡುವುದಿಲ್ಲವೋ ಗೊತ್ತಿಲ್ಲ. ಪ್ರಾಸ್ಪೆಕ್ಟಿಂಗ್ ಲೈಸೆನ್ಸಿಗೆ, ಮೈನಿಂಗ್ ಲೈಸೆನ್ಸಿಗೆ ಎಲ್ಲಕ್ಕೂ ಸರ್ಕಾರದವರು ಹಣ ತೆಗೆದುಕೊಳ್ಳುತ್ತಾರೆ. ರಾಯಲ್ಟಿ ಬೇರೆ ಸರ್ಕಾರಕ್ಕೆ ಬರುತ್ತದೆ. ಇಷ್ಟಾದರೂ ಅವರಿಗೆ ಬೇಕಾದ ಅನುಕೂಲಗಳನ್ನು ಒದಗಿಸಿಕೊಡದೆ ತಡಮಾಡಿ ಲೈಸೆನ್ಸೀಗಳಿಗೂ ಲುಕ್ಸಾನಾಗುತ್ತಿದೆ, ಸರ್ಕಾರದವರಿಗೂ ನಷ್ಟವಾಗುತ್ತಿದೆ. ಕಾಗದ ಪತ್ರಗಳಿಗೆ ಜವಾಬು ಬರುವುದೇ ಬಹಳ ನಿಧಾನ. ಮೈನಿಂಗ್ ಲೈಸೆನ್ಸ್ ಕೊಡಬೇಕಾದರೆ ಫಾರೆಸ್ಟ್ ಇಲಾಖೆ ಮತ್ತು ರೆವಿನ್ಯೂ ಇಲಾಖೆಗೆ—ಎರಡಕ್ಕೂ ಕಳುಹಿಸಬೇಕಾಗಿರುವುದರಿಂದ ನಿಧಾನವಾಗುತ್ತದೆ ಎಂದು ಸರ್ಕಾರದವರೇನೋ ಹೇಳುತ್ತಾರೆ. ವಾಸ್ತವವಾಗಿ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಕೈ ಬೆಚ್ಚಗೆ ಮಾಡದೆ ಹೋದರೆ ಹೇಗೆ ಕಾಗದ ಪತ್ರಗಳು ಹೊರಗೆ ಬರುವುದಿಲ್ಲವೋ ಹಾಗೆ ಇಲ್ಲಿಯೂ ಕಾಗದಗಳು ಹೊರಗೆ ಬರುವುದಿಲ್ಲ. ಖನಿಜದ ಮಂತ್ರಿಗಳಿಗೆ ಹೇಳಿದರೆ, ನಿಧಾನವಾದರೂ ಖನಿಜ ಎಲ್ಲಿಗೂ ಹೋಗುವುದಿಲ್ಲ, ಭೂಮಿಯಲ್ಲೇ ಇರುತ್ತದೆ, ನಮ್ಮ ಸಂಪತ್ತು ನಮ್ಮಲ್ಲೇ ಇರುತ್ತದೆ ಎಂದು ಹೇಳುತ್ತಾರೆ. ಪ್ರಗತಿ ವಿರೋಧವಾಗಿ ಮಾತನಾಡುವವರಿಗೇನು ಹೇಳುವುದು ? ನಿಧಾನವಾಗುವುದಕ್ಕೆ ನ್ಯಾಯವಾದ time ಇದ್ದರೇನೋ ಪರವಾಯಿಲ್ಲ. ಎಷ್ಟು ನಿಧಾನವಾಗುತ್ತಿದೆಯೆಂಬುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. 1952 ನೆಯ ಇಸವಿಯಲ್ಲಿ ಬರೆದ ಒಂದು ಕಾಗದಕ್ಕೆ ಉತ್ತರವನ್ನು 1956ನೆಯ ಇಸವಿಯಲ್ಲಿ ಕೊಡುತ್ತಾ ಡೈರೆಕ್ಟರವರು ಈ ರೀತಿ ಹೇಳಿದ್ದಾರೆ :

Extract from letter :

"7th February 1956 from the Office of the Director of Geology in Mysore, Bangalore.

With reference to your application dated 28th September 1952 for the grant of a prospecting licence for manganese and manganese dioxide over an area of 90 acres of land, I write to state that a portion of the block is already covered by a prospecting licence No. 1416. . . . ."

ನಾವು ಕೊಟ್ಟಿರುವ applicationನ ಜಮೀನು ಆಗಲೇ ಕವರ್ ಆಗಿದೆ ಎಂದು ಹೇಳಬೇಕಾದರೆ ನಾಲ್ಕು ವರ್ಷ ಆಗಿದೆ. Application 28ನೇ ಸೆಪ್ಟೆಂಬರ್ 1952ರಲ್ಲಿ ಕೊಟ್ಟದ್ದಕ್ಕೆ 7ನೇ ಫೆಬ್ರುವರಿ 1956ರಲ್ಲಿ reply ಬಂತು. ಜಮೀನು ಕೇಳಿದರೆ ಲೈಸೆನ್ಸ್ ಕೊಡದೆ reply ಬರಬೇಕಾದರೆ ನಾಲ್ಕು ವರ್ಷಗಳಾದುವು. ಅದು reasonable time ಎನ್ನಿಸುತ್ತದೆಯೇ ? ನಾಲ್ಕು ವರ್ಷಗಳ ಮೇಲೆ ಆ ಅರ್ಜಿಯನ್ನು refer ಮಾಡುವುದರಲ್ಲಿ ಏನು ಅರ್ಥ ? ಇಂಥ ಉದಾಹರಣೆಗಳನ್ನು ನೂರಾರು ಕೊಡಬಲ್ಲೆ. ಈ ಇಲಾಖೆಯಲ್ಲಿ ನಡೆಯತಕ್ಕದ್ದು ಒಂದೇ ಅಲ್ಲ. ಫಾರೆಸ್ಟ್ ಇಲಾಖೆಯಲ್ಲೂ ಅಷ್ಟೆ. Range Officer, District Forest Officer, Chief Conservator of Forests, ಹೀಗೆ ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿ ಹೋದ ಹಾಗೆ ಹೋಗಬೇಕು. ಶೇಕುದಾರರಿಂದ, ಅಮಲ್ದಾರ್, ಸಬ್ ಡಿವಿಷನ್ ಆಫೀಸರ್, ಡೆಪ್ಯುಟಿ ಕಮಿಷನರ್, ರೆವಿನ್ಯೂ ಕಮಿಷನರಿಗೆ ಬಂದ ಕಾಗದ ಸರ್ಕಾರಕ್ಕೆ ಹೋದರೆ ಅಲ್ಲಿ ಎರಡು ವರ್ಷ ಮೂರು ವರ್ಷವಾಗುತ್ತದೆ. ಇಂತಹ ಕಾರಣದ ಮೇಲೆ ನಿಂತಿದೆ ಎಂದು ಏತಕ್ಕೆ ಹೇಳ ಕೂಡದು ? ಏತಕ್ಕೆ ಸತಾಯಿಸುತ್ತೀರಿ ? ಆಮೇಲೆ ಸರ್ಕಾರದವರು ಇಂಥಿಂಥ ಬ್ಲಾಕುಗಳಿವೆ ಎಂದು advertise ಮಾಡಿದ್ದಕ್ಕೆ ಅರ್ಜಿಗಳನ್ನು ಹಾಕಿದರೂ ಅವರಿಗೆ ಇವೊತ್ತಿನವರೆಗೂ ವರ್ಷಗಟ್ಟಲೆ ಕೊಟ್ಟಿಲ್ಲ. ಇದಕ್ಕೆ ಏನು ಅರ್ಥ ? ಇಂಥಾದ್ದು ನಿಲ್ಲಿಸಿಕೊಳ್ಳಬೇಕಾದರೆ ಬಾಕಿಯದನ್ನು ಎಷ್ಟು ಮಟ್ಟಿಗೆ ನಿಧಾನ ಮಾಡುತ್ತಾರೆ ಎಂದು ತಾವೇ ತಿಳಿದುಕೊಳ್ಳಬಹುದು. Border ವ್ಯಾಜ್ಯಗಳು ಎಲ್ಲಿಗೆ ನಿಂತಿವೆಯೋ ಅಲ್ಲಿಗೇ ಇರುತ್ತವೆ. ಸರ್ವೇ ಫೀಸ್ ಹಣ ಕೊಟ್ಟುಬಿಟ್ಟು ವರ್ಷಗಟ್ಟಲೆ ಕೆಲಸ ಬಾಕಿ ಇರುತ್ತದೆ. ಎರಡು 'areaಗಳ ಮಧ್ಯ ಒಂದು ಫರ್ಲಾಂಗ್ neutral area ಬಿಟ್ಟಿರುತ್ತಾರೆ. ಇನ್ನೊಂದು ಕಡೆ ಬಿಡುವುದಿಲ್ಲ. ಅದಕ್ಕೆ ಏನು ಕಾರಣ ಎಂಬುದು ಗೊತ್ತಾಗುವುದಿಲ್ಲ. ಇದಕ್ಕೆ ಏನೋ motive ಇರುತ್ತದೆ. Mineral Concession ರೂಲ್ಸ್‌ನ್ನು ಸರಿಯಾಗಿ follow ಮಾಡಿ, ಒಂದು policyಯನ್ನು ಸರಿಯಾಗಿ follow ಮಾಡಲಿ ಎಂದು ನಾನು ಹೇಳುತ್ತಾ ಇರುವುದು. ಕೆಲವು ಅರ್ಜಿಗಳು ಬಂದರೆ ಇವೊತ್ತು, ನಾಳೆ ತೀರ್ಮಾನವಾಗುತ್ತದೆ. ಇನ್ನೊಂದು ಬಂದರೆ ವರ್ಷಗಟ್ಟಲೆ ತೀರ್ಮಾನವಾಗುವುದಿಲ್ಲ. ಭದ್ರಾವತಿ ಕಬ್ಬಿಣ ಕಾರ್ಖಾನೆಗೋಸ್ಕರ ಕೆಲವು areaಗಳನ್ನು reserve ಮಾಡಿಕೊಂಡಿದ್ದಾರೆ. ಅದರಲ್ಲಿ ಇಲಾಖೆಯವರು ಕೆಲವನ್ನು ಹೊರಗಡೆಗೆ ಮಾರುತ್ತಾರೆ. ಎಷ್ಟೋ complaints ಕೇಂದ್ರ ಸರ್ಕಾರಕ್ಕೂ ಹೋಗಿದೆ. ಮುಖ್ಯಮಂತ್ರಿಗಳಿಗೆ ಎಷ್ಟೋ ಜನ ಈ ರೀತಿ ಅನಾನುಕೂಲವಾಗಿದೆ, ಅನ್ಯಾಯ ಮಾಡುತ್ತಿದ್ದೀರಿ ಎಂದು ಅರ್ಜಿ ಕೊಟ್ಟಿದ್ದಾರೆ. ಸರಕಾರ ಹೆಚ್ಚಿಗೆ ಫೀಸ್ ಹಾಕಿಕೊಂಡು ಹೆಚ್ಚಿಗೆ royalty ತೆಗೆದುಕೊಳ್ಳಲಿ. ಕೊಟ್ಟರೆ ಮಾಡುತ್ತಾರೆ, ಇಲ್ಲದಿದ್ದರೆ ಇಲ್ಲ. ಯಾವುದೇ ಅರ್ಜಿಯ ಮೇಲೆ ಇಲ್ಲ ಅಥವಾ ಉಂಟು ಎಂದು ಹೇಳುವುದಿಲ್ಲ. ಇದು ಒಂದು business ; ಇವತ್ತು ಇದ್ದಷ್ಟು ನಾಳೆ ಇರುವುದಿಲ್ಲ. ಹಿಂದೆ ಅನೇಕರು ಟನ್ 1ಕ್ಕೆ ಒಂದು ರೂಪಾಯಿನಂತೆ ಮಾರಾಟ ಮಾಡಿದರೂ, ಬಿಟ್ಟು ಹೋದರು. ಹಾಗಿದೆ ಬಿಸಿನೆಸ್ ಎನ್ನುವುದು. ಆದ್ದರಿಂದ ಸರ್ಕಾರದವರು ಆದಷ್ಟು ಮಟ್ಟಿಗೆ ವ್ಯಾಪಾರಿತನದಿಂದ ವರ್ತಿಸಬೇಕು. ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ಸರ್ಕಾರಕ್ಕೂ ಅನಾನುಕೂಲವಾಗುತ್ತದೆ. ಆದಷ್ಟು ಜಾಗ್ರತೆ recordನ್ನು ತೀರ್ಮಾನ ಮಾಡಬೇಕು. ನ್ಯಾಯವಾದ ಕಾರಣವನ್ನು ಕೊಟ್ಟರೆ ಒಪ್ಪುತ್ತಾರೆ. ಒಂದು ಘಂಟೆಯಲ್ಲಿ ತೀರ್ಮಾನ ಮಾಡುವುದನ್ನು ನಾಲ್ಕು ವರ್ಷಗಳಲ್ಲೂ ಮಾಡದೆ ಇರುವ

ಎಷ್ಟೋ ನಿದರ್ಶನಗಳಿವೆ. ನಾನು ಇದನ್ನು ವಿರೋಧಿಸುತ್ತೇನೆ.

Mr. DEPUTY SPEAKER.—I want to know if there are more members to speak. Since we have already fixed the time limit, I just want to close the discussion by 6 O'clock. If the members want to sit for some time more, I have no objection.

Sri H. M. CHANNABASAPPA.—Hon'ble Members have made out certain points which are very important and I feel that sufficient time will have to be given to the Government for giving information with a view to satisfy not only the members of this House but also the country.

*ಶ್ರೀ ಸಿ ಎಚ್. ಲಿಂಗದೇವರು (ಚಿಕ್ಕನಾಯಕನಹಳ್ಳಿ).—ಸ್ವಾಮಿ, ಈ ಸಭೆಯ ಮುಂದೆ ಮಂಡಿಸಿರತಕ್ಕ ಈ ಡಿಮ್ಯಾಂಡ್ ವಿಷಯದಲ್ಲಿ ಒಂದೆರಡು ಮಾತುಗಳನ್ನು ಆಡಬೇಕೆಂದು ಇಷ್ಟಪಡುತ್ತೇನೆ. ಜಿಯೋಲಾಜಿಕಲ್ ಇಲಾಖೆಯು 4-5 ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಇತ್ತೋ ಇಲ್ಲವೋ ಗೊತ್ತಿಲ್ಲ. ಸಾಮಾನ್ಯವಾಗಿ ಜನರಿಗೆ ಜಿಯೋಲಾಜಿಕಲ್ ಇಲಾಖೆಯ ಹೆಸರೇ ಗೊತ್ತಿರಲಿಲ್ಲ. ಯುದ್ಧಾನಂತರದಲ್ಲಿ ಇದರ ಚಟುವಟಿಕೆಗಳು ಜಾಸ್ತಿಯಾಗಿವೆ. ಇದರಲ್ಲಿ ತುಂಬ ಅನುಕೂಲವಿದೆಯೆಂದು ಸರ್ಕಾರದವರು ಕಣ್ಣು ತೆರೆದು Mineral Development Committee ಮಾಡಿ, ಖನಿಜ ಸಂಪತ್ತು ಏನು ಇದೆಯೋ ಅದರಿಂದ ಹೆಚ್ಚಿಗೆ ಉತ್ಪತ್ತಿ ತೆಗೆದುಕೊಳ್ಳಬೇಕೆಂದು "ಬ್ಯುರೋ" ಸ್ಥಾಪನೆ ಮಾಡಿದರು. ಪ್ರತಿವರ್ಷವೂ ಕೂಡ ಇದರಿಂದ ಬೇಕಾದಷ್ಟು ಉತ್ಪತ್ತಿ ಬರುತ್ತದೆ. ಆದರೆ ಅದನ್ನು ಎಷ್ಟು ಅಭಿವೃದ್ಧಿಪಡಿಸಬೇಕೋ ಅಷ್ಟು ಅಭಿವೃದ್ಧಿಪಡಿಸದೆ ಬಹಳ ಹೀನ ಸ್ಥಿತಿಯಲ್ಲಿದೆ. ನಮ್ಮ ಖನಿಜ ಸಂಪತ್ತು ಎಷ್ಟು ಇದೆಯೋ ಅಷ್ಟನ್ನು ಉಪಯೋಗಿಸಬೇಕು ಎನ್ನುವ ಉದ್ದೇಶದಿಂದ ಶ್ರೀ ಭೀಮಪ್ಪನಾಯಕ್ ಕಮಿಟಿಮಾಡಿ ಅವರಿಂದ ಸರ್ಕಾರಕ್ಕೆ ಒಂದು ವರದಿ ಕೂಡ ಬಂತು. ಒಂದು ವರ್ಷವಾದರೂ ಕೂಡ ಇಲ್ಲಿಯವರೆಗೂ ಆ ವರದಿಯನ್ನು ಕಾರ್ಯಗತ ಮಾಡದೇ ಇದ್ದಾರೆ. ಅದನ್ನು ಮಾಡಿದ ಪಕ್ಷದಲ್ಲಿ ಖೋತಾ ಎಷ್ಟಿದೆ, ಅದರ ಎರಡಾಣೆ ಭಾಗವಾದರೂ ಸರಿದೂಗಿಸಬಹುದು, ಎಂದು ಧಾರಾಳವಾಗಿ ಹೇಳಬಹುದು. ಬಳ್ಳಾರಿದಲ್ಲಿರುವ ಭಂಗಾರದ ಗಣಿಯಲ್ಲಿ 23 ಲಕ್ಷ ರೂಪಾಯಿಗಳನ್ನು invest ಮಾಡಿದ್ದಾರೆ. ಕಾರಣಾಂತರದಿಂದ ಹೆಚ್ಚಾಗಿ ಭಂಗಾರ ದೊರೆಯುತ್ತಿಲ್ಲ ಎಂದು ತಾತ್ಕಾಲಿಕ ವರದಿಯನ್ನು ತರಿಸಿಕೊಂಡು ನಿಲ್ಲಿಸಿದ್ದಾರೆ. ಅವರು ಇನ್ನೂ ಧೈರ್ಯವಾಗಿ ಮುಂದೆ ಹೋಗಿದ್ದ ಪಕ್ಷದಲ್ಲಿ ಭಂಗಾರ ಹೆಚ್ಚಿಗೆ ಸಿಕ್ಕಿ ಅನುಕೂಲವಾಗುತ್ತಿತ್ತೋ ಏನೋ. ಆ ಕ್ಷೇತ್ರದ ಜನರು ಹೇಳುತ್ತಿರುವುದರಿಂದ ನನಗೂ ಆ ರೀತಿ ಅನ್ನಿಸುತ್ತದೆ. Private Companyಗಳು ಕೋಲಾರದಲ್ಲಿ ಭಂಗಾರ ಸಿಕ್ಕುವುದಿಲ್ಲ ಎಂದು ವರದಿ ಮಾಡಿದರು. ಹೋದವರುಷ Mines ನಿಲ್ಲಿಸಬೇಕು ಎಂದು ಕೂಡ ಹೇಳುತ್ತಿದ್ದರು. ಇತ್ತೀಚೆಗೆ ಹೊಸಕಡೆ ಭಂಗಾರದ ಗಣಿ ಸಿಕ್ಕಿ ಅದನ್ನು ಜಾಸ್ತಿ ಮಾಡಬೇಕೆಂದು ವರದಿ ಬಂದಿದೆ. ಆ ರೀತಿ ಇಲ್ಲಿಯೂ ಕೂಡ ಹೆಚ್ಚಿಗೆ ಸಿಕ್ಕಬಹುದು ಎಂಬ ಅಭಿಪ್ರಾಯವಿದೆ. ಅದು ಮುಂದೆ ಪರಿಶೀಲನೆ ಮಾಡಬೇಕಾದ ಅಂಶ. ಅದನ್ನು ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ಇನ್ನು ಬ್ಯುರೋ ಆಫ್ ಮಿನರಲ್ ಡೆವಲಪ್‌ಮೆಂಟ್‌ನವರು white clay ಶುದ್ಧಿಮಾಡಿ ಹೊರಗಡೆಗೆ ಕಳುಹಿಸುತ್ತಿದ್ದಾರೆ. ಪೋರ್ಸಲೇನ್ ಫ್ಯಾಕ್ಟರಿಗೆ ಬೇಕಾದ ಕಚ್ಚಾ ಮಾಲುಗಳನ್ನು ಹೊರದೇಶಗಳಿಂದ ತರಿಸಿಕೊಂಡು ಹೆಚ್ಚಿಗೆ ಮೊಬಲಗನ್ನು ಖರ್ಚು ಮಾಡುವುದಕ್ಕೆ ಬದಲಾಗಿ ನಮ್ಮ ದೇಶದಲ್ಲಿರುವ ಸಂಪತ್ತನ್ನು ಅಭಿವೃದ್ಧಿಪಡಿಸಿದರೆ ಕೈಗಾರಿಕೆಗೆ ಅನುಕೂಲವಾಗುತ್ತದೆ. ನಮ್ಮ ಇಲಾಖೆಗೂ ಹೆಚ್ಚಿಗೆ ಮೊಬಲಗು ಬರುತ್ತದೆ. ತಿಪಟೂರು ಹತ್ತಿರ chrome ore ಇದೆ. ಇಡೀ ಇಂಡಿಯಾ ದೇಶದಲ್ಲೇ ಶೇಕಡ 50, 60 ಇರುವ chrome ore ಎಲ್ಲಿಯೂ ಸಿಕ್ಕುವುದಿಲ್ಲ ಎಂದು ಹೇಳುತ್ತಾರೆ. ಅಂತಹ ದೊಡ್ಡ ಸಂಪತ್ತನ್ನು ಭೂಗರ್ಭದಿಂದ ತೆಗೆಸಿ, ಹೆಚ್ಚಿಗೆ ಹಣವನ್ನು ಸಂಪಾದನೆ ಮಾಡುವುದಕ್ಕೆ ಒಳ್ಳೆಯ ದಾರಿ. ಅದನ್ನು ಕೂಡ ಶೀಘ್ರವಾಗಿ ಹೆಚ್ಚಿಗೆ ತೆಗೆಸಲು ಪ್ರಯತ್ನ ಮಾಡಬೇಕು ಎಂದು ಹೇಳಿ ಈ ಡಿಮ್ಯಾಂಡಿಗೆ support ಕೊಡುತ್ತೇನೆ.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಸಭೆಯ ಮುಂದೆ ಮಂಡಿಸಿರತಕ್ಕ ಈ ಡಿಮ್ಯಾಂಡನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕೆಂದಿದ್ದೇನೆ. ಶ್ರೀಮಾನ್ ಹುಚ್ಚೇಗೌಡರು ಮಾತನಾಡುತ್ತಾ ಈ ಇಲಾಖೆಯ ವಿಷಯದಲ್ಲಿ ಸರ್ಕಾರ ಏನೂ ನಿಗಾ ತೆಗೆದುಕೊಂಡಿಲ್ಲ ಮತ್ತು ಇದರಿಂದ ಎಷ್ಟು ನಿರೀಕ್ಷಿಸಬಹುದಾಗಿತ್ತೋ ಅಷ್ಟು ಆದಾಯವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಟ್ಟಿಲ್ಲ ಎಂದು ಹೇಳಿದರು. ಅಲ್ಲದೆ ಭೀಮಪ್ಪನಾಯಕ್ ಸಮಿತಿಯ ಶಿಫಾರಸ್ಸನ್ನು ಸರ್ಕಾರ ಜಾರಿಗೆ ತಂದಿಲ್ಲ ಆದುದರಿಂದ ಇದನ್ನು ವಿರೋಧಿಸುತ್ತೇನೆಂದು ಹೇಳಿದರು. ಅವರು ಬಡ್ಜೆಟ್ಟನ್ನು ಸರಿಯಾಗಿ ನೋಡಲಿಲ್ಲವೆಂದು ಕಾಣುತ್ತದೆ. ಇದುವರೆಗೂ ಕೂಡ ಸೈಂಟಿಫಿಕ್ ಡಿಪಾರ್ಟ್‌ಮೆಂಟುಗಳಿಗೆ ಅಭಿವೃದ್ಧಿ ಯೋಜನೆಗಳಿಗೆ 5,50.000 ರೂಪಾಯಿ ಒದಗಿಸುತ್ತಿದ್ದೆವು; ಈ ಸಾರಿ 5,50,000 ರೂಪಾಯಿ ಒದಗಿಸಿದ್ದೇವೆ. ನಾನು ನೋಡಿದುದರಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಮೂದಿಸಿರುವ ಚಟುವಟಿಕೆಗಳನ್ನು ಹೆಚ್ಚಿಸಬೇಕೆಂದು ಈ ಇಲಾಖೆಗೆ ಈ ರೀತಿಯಲ್ಲಿ ಹೆಚ್ಚು ಹಣವನ್ನೊದಗಿಸಿರುವುದು. ಇದು ನಿಜವಾಗಿಯೂ ಸಂತೋಷದ ವಿಚಾರ. ಈ ಇಲಾಖೆ ಬೆಳೆಯುವುದಕ್ಕೆ ಇದು ಆಶಾದಾಯಕವಾಗಿದೆ. ಅಭಿವೃದ್ಧಿ ಯೋಜನೆಗಳನ್ನು ಕೂಡ ಭೀಮಪ್ಪನಾಯಕರ ಸಮಿತಿಯ ಶಿಫಾರಸ್ಸುಗಳ ಆಧಾರದ ಮೇಲೆ ತೆಗೆದುಕೊಂಡು ಸರ್ಕಾರದವರು ಕೆಲವು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಇದರಲ್ಲಿ ನಮ್ಮ ದೇಶಾದ್ಯಂತ intensive geological and mineral survey ಮಾಡಿ ಎಲ್ಲೆಲ್ಲಿ ಖನಿಜಗಳು ಸಿಕ್ಕುತ್ತವೆ, ಲಾಭದಾಯಕವಾದವು ಎಲ್ಲೆಲ್ಲಿ ಸಿಕ್ಕುತ್ತವೆ ಎಂಬುದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ಶಿಫಾರಸು ಮಾಡಿದ್ದಾರೆ. Explorationಗೆ 35,000 ರೂಪಾಯಿ ಒದಗಿಸಿದ್ದಾರೆ. ಶ್ರೀ ಲಿಂಗದೇವರು ಹೇಳಿದ ಹಾಗೆ ಕ್ರೋಮ್ ಡಿಪಾಜಿಟ್ಸ್ ಬಹಳ ಪ್ರಾಮುಖ್ಯತೆಯನ್ನು ಹೊಂದಿದೆ, ಇದನ್ನು ನಮ್ಮ ಸರ್ಕಾರ ಅಭಿವೃದ್ಧಿ ಮಾಡಬೇಕೆಂದು ಶಿಫಾರಸು ಮಾಡಿದ್ದಾರೆ. ಇದಕ್ಕೂ ಹಣವನ್ನೊದಗಿಸಿದ್ದಾರೆ. ಮ್ಯಾಂಗನೀಸ್ ಗಣಿಗಳನ್ನು exploit ಮಾಡುವುದಕ್ಕೆ ಮೈನಿಂಗ್ ಕೆಲಸ ಮಾಡಲು ಲೈಸೆನ್ಸ್

(ಶ್ರೀ ಡಿ. ದೇವರಾಜ ಅರಸ್)

ಪಡೆದಿರುವವರಿದ್ದಾರೆ. ಇವರು ತಾವು ಕೆಲಸ ಮಾಡಿಸುವ ಕಾಲದಲ್ಲಿ rich ores ಮಾತ್ರ ತೆಗೆದು ಮಾರಾಟ ಮಾಡಿಕೊಂಡು, ಎಲ್ಲಿ low percentage ore ಇರುತ್ತದೆಯೋ ಅದನ್ನು ಬಿಸಾಡಿ ಹೋಗುತ್ತಾರೆ. ಇದರಿಂದ ದೇಶಕ್ಕೆ ನಷ್ಟ. ಇದಕ್ಕೆ ಬೆನಿಫಿಸಿಯೇಷನ್ ಪ್ಲಾಂಟ್ ಎಂಬ ಒಂದು ಯಂತ್ರವನ್ನು ಸರ್ಕಾರದವರು ಹಾಕಿ ಅದರ ಪ್ರಕಾರ low percentage ore ಎಲ್ಲಿವೆಯೋ ಅದನ್ನು ಕೂಡ work ಮಾಡಿಸಬೇಕು. Beneficiation plant ಹಾಕಬೇಕೆಂದು ಏರ್ಪಾಡು ಮಾಡಿದೆ ಎಂದು ಸರ್ಕಾರದಿಂದ ಉತ್ತರ ಬಂದಿದೆ. ಹೀಗೆ ಕೆಲವು ಶಿಫಾರಸುಗಳನ್ನು ವರದಿಯ ಆಧಾರದ ಮೇಲೆ ಸರ್ಕಾರದವರು ಕಾರ್ಯಗತ ಮಾಡಲು ಕಾರ್ಯಕ್ರಮ ಕೈಗೊಂಡಿರುವುದು ಈ ಬಡ್ಜೆಟ್ಟನ್ನು ನೋಡಿದರೆ ವ್ಯಕ್ತವಾಗುತ್ತದೆ. ನಮ್ಮ ದೇಶದಲ್ಲಿ ಅತಿ ಮುಖ್ಯವಾದ ಕೆಲವು ಖನಿಜಗಳಿವೆ. 20ನೆಯ ಶತಮಾನದಲ್ಲಿ, ನಮ್ಮ ಇಂಡಿಯಾ ದೇಶದ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕಾಭಿವೃದ್ಧಿ ಮಾಡಬೇಕೆಂಬ ಯಾವ ನೀತಿ ಇದೆಯೋ ಅದಕ್ಕನುಸಾರವಾಗಿ, ನಮ್ಮ ದೇಶದಲ್ಲಿರತಕ್ಕ ಈ ಖನಿಜ ಸಂಪತ್ತನ್ನು ಅಭಿವೃದ್ಧಿ ಮಾಡಬೇಕೆಂದು ಈ ಸಮಿತಿಯು ವರದಿಯಲ್ಲಿ ಶಿಫಾರಸು ಮಾಡಿದ್ದಾರೆ. ಈ ಸಲಹೆಗನುಗುಣವಾಗಿ ನಮ್ಮ ದೇಶದ ಖನಿಜ ಸಂಪತ್ತಿನಿಂದ ಸರ್ಕಾರದ ಉತ್ಪತ್ತಿಯನ್ನು ಹೆಚ್ಚಿಸಬೇಕಾದರೆ, ನಾವು ಇನ್ನು ಮುಂದಾದರೂ ಖಾಸಗಿ ಜನರಿಗೆ ಲೈಸೆನ್ಸ್ ಕೊಡುವುದನ್ನು ಕಡಮೆ ಮಾಡಬೇಕು, ಕಾಲಕ್ರಮೇಣ ಇದನ್ನು ಸಂಪೂರ್ಣವಾಗಿ ತಪ್ಪಿಸಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುವುದಕ್ಕೆ ನಿಂತಿದ್ದೇನೆ. ಇದುವರೆಗೆ ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ನಮ್ಮ ದೇಶದಲ್ಲಿ ಕೆಲವು ಜನ ಗಣಿ ಕೆಲಸ ವಹಿಸಿಕೊಂಡಿರುವ ಗಣಿ ಮಾಲೀಕರು ಅನೇಕ ತಪ್ಪುಗಳನ್ನು ಮಾಡುತ್ತಿದ್ದಾರೆ. ತಾವು ಲೈಸೆನ್ಸ್‌ಗಳನ್ನು ತೆಗೆದುಕೊಂಡು ದುರುಪಯೋಗ ಮಾಡುತ್ತಿದ್ದಾರೆ. ಲೈಸೆನ್ಸುಗಳನ್ನು ಇತರರಿಗೆ ಮಾರಾಟ ಮಾಡುತ್ತಿದ್ದಾರೆ. ಕೆಲವರ ಜೀವನದ ಕಸಬೇನೆಂದರೆ, ಇಲಾಖೆಯಿಂದ 20 ರಿಂದ 100ರ ವರೆಗೆ ತಮ್ಮ ಹೆಸರಿನಲ್ಲಿ ಲೈಸೆನ್ಸ್‌ಗಳನ್ನು ತೆಗೆದಿಟ್ಟುಕೊಂಡು, ಕೆಲಸ ಮಾಡತಕ್ಕ ಬೇರೆ ಕಂಪನಿಗಳು ಅಥವಾ ವ್ಯಕ್ತಿಗಳಿಗೆ ಮಾರಾಟಮಾಡಿ ಲಾಭ ಸಂಪಾದನೆಮಾಡಿ ಜೀವನ ಮಾಡುವುದಾಗಿದೆ.

ಶ್ರೀ ಹುಚ್ಚೇಗೌಡರು ಹೇಳಿದುದನ್ನು ಕೇಳಿ ನನಗೆ ಆಶ್ಚರ್ಯವಾಗುತ್ತದೆ. ಸರ್ಕಾರದವರು ಏನೋ ಒಂದು ಉದ್ದೇಶವನ್ನಿಟ್ಟುಕೊಂಡು ಲೈಸೆನ್ಸುಗಳನ್ನು ಕಾಲಕ್ಕೆ ಸರಿಯಾಗಿ ಕೊಡುತ್ತಿಲ್ಲ, ತೊಂದರೆ ಕೊಡುತ್ತಿದ್ದಾರೆಂದು ಆಪಾದನೆ ಮಾಡಿದರು.

ಶ್ರೀ ಬಿ. ಹುಚ್ಚೇಗೌಡ.—ಸರ್ಕಾರವೇ ಮಾಡಲಿ; ಆದರೆ ಲೈಸೆನ್ಸ್ ಕೊಡುವುದನ್ನೇಕೆ ನಿಧಾನ ಮಾಡಬೇಕು ?

ಶ್ರೀ ಡಿ. ದೇವರಾಜ ಅರಸ್.—ಇದರಲ್ಲಿ ನೇರವಾಗಿ ಕಾನೂನನ್ನನುಸರಿಸಿ ಕೆಲಸ ಮಾಡತಕ್ಕ ಜನರಿಗೆ ಯಾರಿಗೂ ತೊಂದರೆಯಾಗಿಲ್ಲ, ಯಾರು ಮೋಸ ಮಾಡುತ್ತಿದ್ದಾರೋ ಅವರಿಗೆ ತೊಂದರೆಯಾಗಿರಬಹುದು. ಲೈಸೆನ್ಸ್ ತೆಗೆದುಕೊಂಡ ಮೇಲೆ ಆರು ತಿಂಗಳೊಳಗೆ mining lease ಸರ್ಕಾರಕ್ಕೆ ಬರೆದು ಕೊಡಬೇಕೆಂದು ಕಾನೂನಿದೆ. ಇದನ್ನು ಬರೆದು ಕೊಡದೆ ವರ್ಷಗಟ್ಟಲೆ ಅವರು ಗಣಿ ಕೆಲಸ ನಡೆಸುತ್ತಿದ್ದಾರೆಂದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಬಿ. ಹುಚ್ಚೇಗೌಡ.—ಅಂಥಾದ್ದನ್ನು ವಜಾ ಮಾಡಿ.

ಶ್ರೀ ಡಿ. ದೇವರಾಜ ಅರಸ್.—ಮೈನಿಂಗ್ ಲೈಸೆನ್ಸ್ ಕೊಡುವ ಸಂಬಂಧವಾಗಿ ಕೆಲವು ನಿಬಂಧನೆಗಳಿವೆ. ಅವುಗಳ ಪ್ರಕಾರ ಇಂಥಿಂಥ ಖನಿಜವನ್ನು ಇಷ್ಟು ಪ್ರಮಾಣದಲ್ಲಿ ಲೈಸೆನ್ಸ್ ತೆಗೆದುಕೊಂಡಿರುವ ವ್ಯಕ್ತಿ ಹೊರಗೆ ಸಾಗಿಸಬಹುದೆಂದು ವಿಧಾಯಕವಾಗಿದೆ. ಒಂದೆರಡು ಟನ್‌ಗಳಷ್ಟು ಕಳುಹಿಸಬಹುದು, 20-30 ಟನ್‌ಗಳ ಮೇಲೆ ಹೊರಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡಬಾರದೆಂದಿದ್ದರೂ ಈಗ ನಮಗೆ ತಿಳಿದು ಬಂದಿರುವಹಾಗೆ ಹತ್ತು ಇಪ್ಪತ್ತು ಸಾವಿರ ಟನ್‌ಗಳಷ್ಟನ್ನು ಬರಿಯ ಪ್ರಾಸ್ಪೆಕ್ಟಿಂಗ್ ಲೈಸೆನ್ಸಿನ ಮೇಲೆ ಹೊರಗೆ ಸಾಗಿಸಿರುವುದು, ಸಾಗಿಸಿಕೊಂಡು ಹೋಗುತ್ತಿರುವುದು ನಮಗೆ ಕಂಡುಬಂದಿದೆ.

ಶ್ರೀ ಬಿ. ಹುಚ್ಚೇಗೌಡ.—ಪರ್ಮಿಟ್ ಇಲ್ಲದೆ ಸಾಗಿಸಿದ್ದಾರೆಂದು ಕಂಡು ಬಂದಿದೆಯೆ ?

ಶ್ರೀ ಡಿ. ದೇವರಾಜ ಅರಸ್.—ಹೌದು.

ಶ್ರೀ ಬಿ. ಹುಚ್ಚೇಗೌಡ.—ಇದು ನಿಮ್ಮ ಸರ್ಕಾರದ ದಕ್ಷತೆಯನ್ನು ತೋರಿಸುತ್ತದೆ.

ಶ್ರೀ ಡಿ. ದೇವರಾಜ ಅರಸ್.—ತಾವು ಮಂತ್ರಿಗಳಾದಾಗ ಏನು ಮಾಡುತ್ತೀರೆಂಬುದನ್ನು ನೋಡೋಣ !

ಹೀಗೆ ಲೈಸೆನ್ಸ್ ಪಡೆದಿರತಕ್ಕ ಕೆಲವು ಜನರು ಈ ಒಂದು ಕಸಬನ್ನು ಇಟ್ಟುಕೊಂಡು, ಇದನ್ನು monopoly ಮಾಡಿಕೊಂಡು, ಒಬ್ಬೊಬ್ಬನೇ ಬೇಕಾದಷ್ಟು ಲೈಸೆನ್ಸ್ ಪಡೆದು ಸಾವಿರಾರು ಟನ್‌ಗಳನ್ನು ಹೊರಗೆ ಸಾಗಿಸುವುದು, ಅಥವಾ ತಮ್ಮ ಊರಿನಲ್ಲಿ ಬೇರೆಯವರಿಗೆ ಮಾರುವುದು ಹೀಗೆ ಮಾಡುತ್ತಿರುವುದು ಕಂಡು ಬಂದಿದೆ.

6 P.M.

ನಾನು ಈ ಸಂದರ್ಭದಲ್ಲಿ ಸರ್ಕಾರದವರಿಗೆ ಪ್ರಶ್ನೆ ಮಾಡಬೇಕಾದ್ದೊಂದಿದೆ. ಏನೆಂದರೆ ಇಂಥ ಜನರೂ ಇದ್ದಾರೆಯೇ ? ಇಂಥವರು ಸಿಕ್ಕಿಬಿದ್ದಿದ್ದಾಗ ಸರ್ಕಾರದವರು ತೀವ್ರವಾದ ಕಾರ್ಯಕ್ರಮ ಯಾತಕ್ಕೆ ತೆಗೆದುಕೊಂಡಿಲ್ಲ ! ಹಾಗೇನಾದರೂ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆಯೇ ? ಇದನ್ನು ನಾವು ಅವರಿಂದ ಕೇಳಬೇಕಾಗಿದೆ. ಇದು ಹೊರತು ಅವರನ್ನು ಹಾಗೆಯೇ ಬಿಟ್ಟುಬಿಡಿ, ಅವರಿಗೆ ಏನಾದರೂ ಆಗಲಿ ಲೈಸೆನ್ಸ್ ಕೊಟ್ಟುಬಿಡಿ, ಕಾನೂನು ಪ್ರಕಾರ ನಡೆದಿರಲಿ, ಬಿಟ್ಟಿರಲಿ ಬೇಕಾದಹಾಗೆ ಲೈಸೆನ್ಸ್ ಕೊಡಿ ಎಂದು ಶಿಫಾರಸುಮಾಡುವುದಕ್ಕೆ ನಾನು ನಿಂತಿಲ್ಲ. ಸರ್ಕಾರದವರು ಕಠಿಣವಾಗಿ ವರ್ತಿಸಬೇಕು, ಯಾರ ಪ್ರಭಾವಕ್ಕೂ ಒಳಗಾಗಬಾರದು, ಎಷ್ಟೇ ದೊಡ್ಡ ಮನುಷ್ಯನಾಗಿರಲಿ ಕಾನೂನನ್ನನುಸರಿಸಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ರೀತಿ ಮಾಡಿ ಕಾನೂನು ನಿಬಂಧನೆಗಳಿಗೆ ಒಳಪಡಿಸಬೇಕು ಮತ್ತು ಶಿಕ್ಷೆಗೆ ಅರ್ಹರಾದವರಿಗೆ ಶಿಕ್ಷೆ ವಿಧಿಸಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ.

ಇನ್ನೊಂದು ವಿಚಾರವೇನೆಂದರೆ, ನಾನು ಮೊದಲೇ ತಿಳಿಸಿದಹಾಗೆ ಇಂಡಿಯಾ ಸರ್ಕಾರದ ಕಾನೂನಿನ ವ್ಯಾಪ್ತಿಗೂ ಕೂಡ ನಮ್ಮ mines, minerals, ಮಾಡುವುದು ಒಳಪಟ್ಟಿದೆ ಎಂದು ತಿಳಿದುಕೊಂಡಿದ್ದೇನೆ. ನಮ್ಮ ಸರ್ಕಾರದವರು ತಾವೇ ನೇರವಾಗಿ ಈ minerals ತೆಗೆಯುವುದನ್ನು ಪ್ರಾರಂಭ ಮಾಡಬೇಕು ಎಂದು ಹೇಳುತ್ತೇನೆ. ಸರ್ಕಾರದವರೇ ಸ್ವಂತಕ್ಕೆ ಇಟ್ಟುಕೊಂಡು ಯಂತ್ರೋಪಕರಣಗಳನ್ನು ಹಾಕಿ ಈ

mines work out ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಆ ಮೇಲೆ ನಮ್ಮ ಸರ್ಕಾರದವರೇ ಈ ಕೆಲಸವನ್ನು ಮಾಡಬೇಕಾದರೆ ಇಂಡಿಯಾ ಸರ್ಕಾರದವರ ಬೆಂಬಲ, ಮತ್ತು ಅಭಿಪ್ರಾಯವಾಗಲಿ ಬೇಕಾದ ಪಕ್ಷದಲ್ಲಿ, ನಾನು ಸಲಹೆ ಮಾಡುವುದೇನೆಂದರೆ, ಇನ್ನುಮೇಲೆ ನಾವು socialistic pattern of society build ಮಾಡಬೇಕು ಎಂಬ ಧ್ಯೇಯವನ್ನು ಇಟ್ಟುಕೊಂಡಿರುವುದರಿಂದ ಅದಕ್ಕನುಸಾರವಾಗಿ ಕೆಲಸ ಕಾರ್ಯಗಳನ್ನು ನಡೆಸಬೇಕಾದರೆ ನಮ್ಮ ದೇಶದಲ್ಲಿ ಈಗ ವರ್ಷೇ ವರ್ಷೇ ಉಂಟಾಗತಕ್ಕ ಈ ಬಡ್ಜೆಟ್ಟಿನ ಖೋತಾ ಏನಿದೆ, ಆಯ ವ್ಯಯದಲ್ಲಿ ಹಣ ಕಮ್ಮಿಯಾಗುತ್ತ ಇರುವುದು ಇದನ್ನು ಭರ್ತಿಮಾಡುವುದಕ್ಕೆ ನಮ್ಮ ಅಭಿವೃದ್ಧಿ ಯೋಜನೆಗಳು ಮತ್ತು ಎರಡನೆ ಪಾಂಚವಾರ್ಷಿಕ ಯೋಜನೆ, ಇವಕ್ಕೆಲ್ಲ ಹಣ ಬೇಕಾಗಿರುವ ಸಂದರ್ಭದಲ್ಲಿ ಇದು ಒಂದು ಹೊಸ source of income ಎಂದು ಸರ್ಕಾರದವರು ತಮ್ಮ ಕೈಗೆ ತೆಗೆದುಕೊಂಡು, ತಾವೇ ಈ minerals work out ಮಾಡುವುದಕ್ಕೆ ಮುಂದೆ ಪ್ರಯತ್ನ ಮಾಡಬೇಕು. ಹಾಗಿಲ್ಲದೆ ಯಾವುದೋ ಕಾಲದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ minerals ಮತ್ತು mineral deposits ಸಂಬಂಧದಲ್ಲಿ ಸರ್ಕಾರದವರು ತಾವೇ ನೇರವಾಗಿ ಆ ಕಾರ್ಯ ಮಾಡಲು ಎಷ್ಟು ಗಮನ ಕೊಡಬೇಕಾಗಿತ್ತೋ ಅಷ್ಟು ಕೊಟ್ಟಿರಲಿಲ್ಲ ಮತ್ತು ನಮ್ಮ ದೇಶ ಅವರ ಆಳ್ವಿಕೆಯಲ್ಲಿ ಇದ್ದಾಗ ಅವರಿಗೆ ಇಲ್ಲಿ ಆಸ್ತಿ ಕಟ್ಟಬೇಕೆಂದು ಇರಲಿಲ್ಲ. Private individuals ಇದರ ಉಪಯೋಗವನ್ನು ಹೊಂದುತ್ತಿದ್ದರು. ಜೊತೆಗೆ 50 ವರ್ಷಗಳ ಹಿಂದೆಯೇ, 25 ವರ್ಷಗಳ ಹಿಂದೆಯೇ ನಡೆದ ಸಂಗತಿ ಇರಬಹುದು. ನಮ್ಮ ಶ್ರೀಪಾರ್ಕ್ ಲಿಂಗದೇವರು ಈಗ chromiteಗೆ ಯಾವ ಪ್ರಾಮುಖ್ಯತೆ ಬಂದಿದೆ ಎಂದು ಹೇಳಿದರು. ಅನೇಕ mineralsನಲ್ಲಿ scientific researches ಜಾಸ್ತಿಯಾಗಿ ನಮ್ಮ ವಿಜ್ಞಾನಶಾಸ್ತ್ರ ಮುಂದುವರಿದು ಹೊಸ ಹೊಸ ಸಂಶೋಧನೆಗಳನ್ನು ಮಾಡುತ್ತಿರುವ ಕಾಲದಲ್ಲಿ ಅದರಿಂದ ದೊರಕುವ ಅನುಕೂಲಗಳನ್ನು ಉಪಯೋಗಿಸಿಕೊಳ್ಳದೆ ಈಗಲೂ ಕೂಡ ಹಳೆಯ ಕಂದಾಚಾರವನ್ನೇ ಅನುಸರಿಸಿ, private individualsಗೆ ಲೈಸೆನ್ಸ್ ಕೊಟ್ಟು ಈ ಕೈಗಾರಿಕೆಯನ್ನು ಅವರಿಗೇ ಬಿಟ್ಟುಕೊಂಡು ಬರತಕ್ಕದ್ದು ತೀರ ಸಾಧುವಾದ ಮಾರ್ಗವಲ್ಲ ಮತ್ತು ನಮ್ಮ ದೇಶದ ಆದಾಯವನ್ನು ಹೆಚ್ಚಿಸುವುದಕ್ಕೆ ಅನುಗುಣವಾದ ಮಾರ್ಗವಲ್ಲ. ಇದನ್ನು ಸರ್ಕಾರದವರು ತೀವ್ರವಾಗಿ ಪರ್ಯಾಲೋಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡಿ ಈ ಡಿಮ್ಯಾಂಡನ್ನು ಅನುಮೋದಿಸುತ್ತೇನೆ.

*ಶ್ರೀ ಜಿ. ಶಿವಪ್ಪ (ಹೊಳಲ್ಕೆರೆ).—ಸ್ವಾಮಿ, ಈ ಡಿಮ್ಯಾಂಡನ್ನು ಸಮರ್ಥನೆ ಮಾಡುತ್ತ, ಶ್ರೀಯುತ ದೇವರಾಜ ಅರಸ್‌ರವರು ಏನೇನು ಅಂಶಗಳನ್ನು ಹೇಳಿದರೋ ಅವುಗಳನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಏಕೆಂದರೆ ನನಗೂ ಸಹ ಹೆಚ್ಚಿಗೆ mining ವಿಚಾರದಲ್ಲಿ ನಿಗಾ ಇರಲಿಲ್ಲ. ಇತ್ತೀಚೆಗೆ ಒಂದೆರಡು ಸಂದರ್ಭಗಳಲ್ಲಿ ಮಂತ್ರಿಗಳ ಜೊತೆಯಲ್ಲಿ ಪ್ರವಾಸ ಮಾಡಿದ ಕಾಲದಲ್ಲಿ ಇದರಲ್ಲಿ ಬಹಳ ಅಕ್ರಮಗಳು ಅದಗಿವೆ ಎಂದು ನನಗೂ ಗೊತ್ತಾಯಿತು. ಅವರು ಎಷ್ಟು ಅಕ್ರಮಗಳನ್ನು ಮಾಡಿದ್ದಾರೆಂದರೆ ಇಷ್ಟೇ ಎಂದು ಹೇಳಲು ಸಾಧ್ಯವಿಲ್ಲ. Lease ತೆಗೆದುಕೊಂಡಿರತಕ್ಕವರಲ್ಲಿ ನನಗೆ ಗೊತ್ತಿರತಕ್ಕ ವಿಚಾರ ಮಾತ್ರ ಹೇಳುತ್ತೇನೆ. ಹೊರಗಡೆ ವಿಚಾರ ನನಗೆ ಗೊತ್ತಿಲ್ಲ. ನಮ್ಮ ಊರಿನ ಪಕ್ಕದಲ್ಲಿ ಅನೇಕ mines ಇವೆ. ಅಲ್ಲಿ ನಡೆದಿರುವ ಅಕ್ರಮಗಳನ್ನು ಸ್ವಲ್ಪ ಮಟ್ಟಿಗೆ ಹೇಳುತ್ತೇನೆ. ಆದರೆ ವ್ಯಕ್ತಿಗಳು ಯಾರು ಎಂಬುದನ್ನು ಹೇಳುವುದಿಲ್ಲ. ಒಬ್ಬ ಮನುಷ್ಯನಿಗೆ ಎರಡು ಲೀಸ್‌ಗಳು ಆಗಿವೆ. Prospective Lease (P.L.) ಮತ್ತು Mining Lease (M.L.). M.L. ಕೊಟ್ಟಿರುವ ಸ್ಥಳಕ್ಕೆ ಮುಕ್ಕಾಲು ಮೈಲಿ ಫಾಸಲೆಯಲ್ಲಿ P.L. ಕೊಟ್ಟಿದ್ದಾರೆ. ರೂಲ್ಸು ಪ್ರಕಾರ ಅವರು ತೆಗೆದಿರತಕ್ಕದ್ದು 1,000, 2,000 ಟನ್ ಎಂದು ಲೆಕ್ಕ ಕೊಡಬೇಕು. ಆದರೆ ಅವರು ಕಡಿಮೆ ಲೆಕ್ಕ ಕೊಟ್ಟು P.L. ನಲ್ಲಿ ತೆಗೆದಿರುವುದನ್ನು M.L.ನಲ್ಲಿ ಲೆಕ್ಕ ಕೊಟ್ಟಿದ್ದಾರೆ. ಅವರನ್ನು ಈ ಸಂಬಂಧದಲ್ಲಿ ವಿಚಾರಿಸಲಾಗಿ ಹೆಚ್ಚಾಗಿ ಮಳೆ ಬಂದುದರ ದೆಸೆಯಿಂದ ಎಲ್ಲಾ ಕೊಚ್ಚಿಕೊಂಡು ಬಂತು ಎಂದು ಮಂತ್ರಿಗಳ ಎದುರಿಗೆ ಹೇಳುತ್ತಾರೆ. ಆಮೇಲೆ ಅಳತೆಯಲ್ಲಿ ಲೆಕ್ಕಾಚಾರ ಒಂದೂ ಇಲ್ಲ. ಮಧ್ಯೆ ಬೌಂಡರಿ ಬಿಡಬೇಕೆಂದು ಅಗ್ರಿಮೆಂಟ್ ಮಾಡುವುದಿಲ್ಲ. ತುಂಬಿದ್ದು, ಹೇರಿದ್ದು, ಕಳುಹಿಸಿದ್ದು ಹೀಗೆ ಅನೇಕ ಅಕ್ರಮವಿದೆ. ಖಾಸಗಿ ಜನರು ಸುತ್ತ ಮುತ್ತಲಿನವರಾದರೆ ತೆಗೆಯಕೂಡದೆಂದು ಕಾನೂನಿದೆ. ಒಬ್ಬ ಮನುಷ್ಯನಿಗೆ 20 ರಿಂದ 60 ರೂಪಾಯಿಗಳ ವರೆಗೆ ಬರುತ್ತದೆ. ಗಾಂಧಿ ನಗರದಲ್ಲೋ, ಬೊಂಬಾಯಿನಲ್ಲೋ ಅಥವಾ ಕಲ್ಕತ್ತದಲ್ಲೋ ಇದ್ದುಕೊಂಡು ಇಲ್ಲಿ ಕೆಲಸ ನಡೆಸುತ್ತಾರೆ, ಸೇಟುಗಳ ಹಾಗೆ ಕೆಲಸ ಮಾಡುತ್ತಾರೆ. ನಮ್ಮವರಿಗೆ ಅವಕಾಶವಿರುವುದಿಲ್ಲ. ಸೇಲ್ಸ್ ರೂಲ್ಸ್ ಪ್ರಕಾರ ಸರ್ಕಾರದ ಅನುಮತಿ ಪಡೆದು ಮಾಡಬೇಕೆಂದಿದೆ. ಐವತ್ತು ಸಾವಿರಕ್ಕೆ, 80 ಸಾವಿರಕ್ಕೆ ವೈಟ್ ಪೇಪರ್ ಲೀಸ್ ಸೇಲ್ಸ್ ಆಗಿರುವುದೂ ಕಂಡು ಬಂದಿದೆ, ನನಗೆ ಎರಡು ಮೂರು ಕೇಸುಗಳು ಗೊತ್ತಾಗಿವೆ. ಎಂಭತ್ತು ಸಾವಿರದಿಂದ 90 ಸಾವಿರರೂಪಾಯಿಗಳಿಗೆ ಪೇಪರ್ ಪರ್ಮಿಷನ್ ಕೊಟ್ಟು ಮಾರಾಟ ಮಾಡಿದ್ದಾರೆ. ನಮ್ಮದು ಸೋಷಿಯಲಿಸ್ಟಿಕ್ ಪ್ಯಾಟರ್ನ್. ಇದೆಷ್ಟು ಸುಲಭವಾಗಿ ಹಣ ಸಂಪಾದನೆ ಮಾಡುವ ಮಾರ್ಗವೆಂಬುದನ್ನು ಊಹಿಸಬಹುದು.

ಆಮೇಲೆ ಬಹಳವಾಗಿ ತೆಗೆಯಬೇಕು, ಸರ್ಕಾರಕ್ಕೆ ಹೆಚ್ಚು ಉತ್ಪನ್ನವಾಗಬೇಕು ಎಂದು ಹೇಳುತ್ತಾರೆ. ಅದಕ್ಕೆ ಒಂದು ಕಾರ್ಪೊರೇಷನ್ ಮಾಡಿ ಎಕ್ಸ್‌ಪೆರಿಮೆಂಟ್ ಮಾಡಿ ಫೇರ್ ಟ್ರಯಲ್ ಕೊಡಲಿ, ಕೆಲವು ವರ್ಷ ಮಾಡಲಿ, ಈ ದಿವಸ 40 ಲಕ್ಷವೋ ಏನೋ ಹಣ ಬರುತ್ತಿದೆ, ಅದಕ್ಕಿಂತ ಹೆಚ್ಚಾಗಿ ಬರುತ್ತದೆ ಮತ್ತು ಖೋತಾ ಬಡ್ಜೆಟ್ ಸರಿದೂಗುವುದಕ್ಕೆ ಅವಕಾಶವಾಗುತ್ತದೆ. ಲೇಬರ್ ಲೆಜಿಸ್ಲೇಷನ್ ಇಲ್ಲೂ ಅನ್ವಯಿಸಿ ಲೇಬರ್ ಕೊಡುತ್ತಿದ್ದಾರೆ. ಆದರೆ ಕಷ್ಟ ಸುಖ ಯಾರೂ ಕೇಳುವುದಿಲ್ಲ. ಅವರು ಹೇಗೆ ಕೆಲಸ ಮಾಡುತ್ತಿದ್ದಾರೆಂಬುದನ್ನು ಸರ್ಕಾರ ನೋಡಿದ್ದರೆ ಚೆನ್ನಾಗಿ ನಡೆಸುವ ಶಕ್ತಿಯಿದೆ. ಅನೇಕ ಕಡೆ ಕೈಗಾರಿಕೆ ನಡೆಸುವವರಿಗೆ ಈ ಗಣಿಗಳನ್ನು ನಡೆಸುವುದಕ್ಕೆ ಶಕ್ತಿಯಿಲ್ಲವೆ? ಅದರಲ್ಲೂ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮೈನ್ಸ್‌ಗೆ ಹೆಚ್ಚು ಹಣ ಒದಗಿಸಿದೆ. ಇನ್ನೂ ಅನೇಕ ವಿಧವಾದ ಭೂಮಿಯಲ್ಲಡಗಿರುವ ಸಂಪತ್ತನ್ನು ಹೊರಗೆ ತೆಗೆಯಬೇಕಾದರೆ ನಮ್ಮ ಜಿಲ್ಲೆಯಲ್ಲಿರುವ ಮೈನ್ಸ್‌ಗೆ ಗಮನ ಕೊಟ್ಟರೆ ಅವಕಾಶ ಹೆಚ್ಚಾಗಿದೆ. ಸಿಲ್ವರ್ ಸಹ ನಮ್ಮ ಊರ ಪಕ್ಕದಲ್ಲಿ ಮೂರು ನಾಲ್ಕು ಮೈಲಿಯಲ್ಲಿದೆ. ಇಡೀ ಭರತಖಂಡದಲ್ಲೇ ಅಷ್ಟಿಲ್ಲ. ಒಂದು ಸಲ ಅಲ್ಲಿರುವ ಪ್ರಮಾಣ ಸಿಕ್ಕಿದರೆ ಭಾರತಕ್ಕೆಲ್ಲಾ ಒದಗಿಸಬಹುದೆಂದು ಮಂತ್ರಿಗಳು ಹೇಳಿದರು. ವರ್ಷಕ್ಕೆ ಎರಡು

(ಶ್ರೀ ಜಿ. ಶಿವಪ್ಪ)

ಕೋಟಿ ರೂಪಾಯಿ ಬೆಲೆ ಬಾಳುವ ಸಲ್ಫ್ಯೂರಿಕ್ ಆಸಿಡ್ ತರಿಸುತ್ತಿದ್ದೇವೆ. ಇಲ್ಲೇ ಅದು ಸಿಕ್ಕುತ್ತದೆ. ಚಿತ್ರದುರ್ಗ ತಾಲ್ಲೂಕಿನಲ್ಲಿ ಹೆಮ್ಮೆ ಪಡುವಷ್ಟು ಅವಕಾಶ ಇದೆ. ಡ್ರಿಲ್ಲಿಂಗ್ ಮೆಷೀನ್ ಹಾಕಿ ತೆಗೆಯಬಹುದು. ಮಾನ್ಯ ಚನ್ನಬಸಪ್ಪನವರು ಅಧಿಕಾರಸ್ಥಾನಕ್ಕೆ ಬಂದ ಮೇಲೆ ಭರಾಟೆಯಿಂದ ಕೆಲಸ ನಡೆಯುತ್ತಿದೆ. ಮಣ್ಣು ಕಲ್ಲಿನಲ್ಲಿ ನಡೆದು ಗುಡ್ಡ ಹತ್ತಿ ಇಳಿದು ಅಜಮಾಯಿಷಿ ಮಾಡುತ್ತಿದ್ದಾರೆ. ಅವರ ಜೊತೆಯಲ್ಲಿ ಹೋಗಿ ಬರುವುದಕ್ಕೆ ನನಗೇ ಸಾಕಾಗಿ ಹೋಯಿತು. ಎಂಟು ಹತ್ತು ಮೈನ್ಸ್ ಕಡೆ ಗಮನ ಕೊಟ್ಟಿದ್ದಾರೆ. ಕೆಲವರು ಕಡಮೆಯಾಗಿದೆಯೆಂದು ಹೇಳಿದರು. ನಾನು ಹಾಗೆ ತಿಳಿದುಕೊಂಡಿಲ್ಲ. ಮೊದಲಿದ್ದುದಕ್ಕಿಂತ ಚೆನ್ನಾಗಿ ಆಡಳಿತ ನಡೆಸುತ್ತಿದ್ದಾರೆ, ಎಲ್ಲವನ್ನೂ ಸರಿಪಡಿಸುತ್ತಾರೆ ಎಂಬ ಸಂಪೂರ್ಣ ನಂಬಿಕೆ ನನಗಿದೆ. ಸೇಲ್ಸ್ ಕೂಡ ಒಂದೇ ಸ್ಥಳದಲ್ಲಿ ಮೂರು ನಾಲ್ಕು ಕಡೆ ಆಗುತ್ತಿದೆ. ಸೇಲ್ಸ್ ಟ್ಯಾಕ್ಸ್ ತಪ್ಪಿಸಿಕೊಳ್ಳುವುದಕ್ಕೆ ಮೈನ್ಸ್ ಓನರ್ಸ್ ಪ್ರಯತ್ನ ಮಾಡುತ್ತಿದ್ದಾರೆ. ವೈಯಕ್ತಿಕವಾಗಿ ಮೈನ್ ಓನರ್ಸ್‌ಗೂ ನನಗೂ ಸಂಬಂಧವಿಲ್ಲ, ಪರಿಚಯಕೂಡ ಹೆಚ್ಚಾಗಿಲ್ಲ. ಹೀಗೆ ಅವರು ಈಗ ತಿಳಿದುಕೊಂಡಿರುವಂಥ ಅಂಶಗಳನ್ನು ಸರಿಪಡಿಸತಕ್ಕದ್ದು ದೇಶದ ಹಿತದೃಷ್ಟಿಯಿಂದ ಮತ್ತು ಸರ್ಕಾರದ ಹಿತದೃಷ್ಟಿಯಿಂದ ಅತ್ಯಾವಶ್ಯಕವೆಂದು ಹೇಳಿ ನಾನು ತಮ್ಮಲ್ಲಿ ಮನವಿ ಮಾಡಿ ಕೊಳ್ಳುತ್ತೇನೆ.

ಶ್ರೀ ಕೆ. ಪಟ್ಟಾಭಿರಾಮ್ (ಕೋಲಾರ).—ಮಾನ್ಯ ಸಭಾಪತಿಯವರೆ, ಈಗ ಸಭೆಯ ಮುಂದೆ ಇರುವ ವಿಚಾರದಲ್ಲಿ ನಾನು ಎರಡು ಮಾತುಗಳನ್ನು ಹೇಳಬೇಕೆಂದು ಇಚ್ಛೆ ಪಟ್ಟಿದ್ದೇನೆ. ಈ ಸಂದರ್ಭದಲ್ಲಿ ನನಗೆ ಏನು ಒಂದು ಅನಿಸುತ್ತದೆಯೆಂದರೆ—ಈ ಮೈನಿಂಗ್ ಬಾಬು ದೇಶಕ್ಕೆ ಬರಬೇಕಾದಂಥ ಅನೇಕ ವರಮಾನದ ಬಾಬುಗಳಲ್ಲಿ ಇದೂ ಕೂಡ ಬಹಳ ಮುಖ್ಯವಾದದ್ದು. ಈ ನಾಲ್ಕೈದು ವರ್ಷಗಳ ಒಂದೊಂದು ಪಟ್ಟಿಯನ್ನೂ ನಾವು ನೋಡುತ್ತಾ ಬಂದರೆ, ಈ ಬಾಬಿನಲ್ಲಿ ಯಾವ ರೀತಿ ವರಮಾನ ಬರುತ್ತಿದೆ, ಇದಕ್ಕೆ ಯಾವ ರೀತಿಯಲ್ಲಿ ಖರ್ಚಾಗುತ್ತಿದೆ ಎಂಬ ಅಂಶಗಳನ್ನು ನಾವು ಗಣನೆಗೆ ತೆಗೆದುಕೊಂಡು ನೋಡುವುದಾದರೆ, ಬರತಕ್ಕ ವರಮಾನಕ್ಕಿಂತಲೂ ಆಗುತ್ತಿರುವ ಖರ್ಚೇ ಹೆಚ್ಚಾಗಿದೆ. ಇದರಿಂದ ನಾವು ಎಷ್ಟು ವರಮಾನ ಬರಬೇಕೆಂದು ನಿರೀಕ್ಷೆ ಮಾಡಿಕೊಂಡಿದ್ದೆವೋ ಅಷ್ಟು ವರಮಾನ ಈ ದಿವಸ ಬರುತ್ತಿಲ್ಲವೆಂಬುದಾಗಿ ಸ್ಪಷ್ಟವಾಗಿ ಕಂಡು ಬರುತ್ತಿದೆ. ಆದುದರಿಂದ ಈಗಾಗಲೇ ಈ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರುಗಳು ತಿಳಿಸಿರುವಂತೆ ಸರ್ಕಾರದವರು ಈ ಬಗ್ಗೆ ತೀವ್ರ ಗಮನವನ್ನು ಕೊಡಬೇಕಾಗಿದೆ. ಅಪಾರವಾಗಿ ಹಣವನ್ನು ತಂದು ಈ ಭೂಮಿಗೆ ಚೆಲ್ಲಿ ಈ ಭೂಗರ್ಭದಲ್ಲಿ ಅಡಗಿರುವ ಅಪಾರವಾದಂಥ ಐಶ್ವರ್ಯವನ್ನು ಪಡೆದು ತಮ್ಮ ಸಂಪಾದನೆಯನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ನಮ್ಮ ದೇಶದಲ್ಲಿ ಮೈನಿಂಗ್ ಡಿಪಾರ್ಟ್‌ಮೆಂಟ್ ಅನೇಕ ವರ್ಷಗಳಿಂದಲೂ ಕೆಲಸ ಮಾಡುತ್ತಿದೆ.

ಆದರೆ, ಈಗ ಸಲ್ಫ್ಯೂರಿಕ್ ಆಸಿಡ್‌ನ್ನು (ಗಂಧಕ ದ್ರವ) ನಮ್ಮಲ್ಲಿಯೇ ತಯಾರಿಸಬೇಕೆಂಬ ವಿಚಾರ ಬಂದಿದೆ. ಅದಕ್ಕಾಗಿ ನಮ್ಮ ದೇಶದಲ್ಲೇ ಒಂದು ಈ ಆಸಿಡ್ ತಯಾರಿಸತಕ್ಕ ಪ್ಲಾಂಟನ್ನು ಹಾಕಬೇಕೆಂದು ಸದಸ್ಯರು ಕೇಳುತ್ತಿದ್ದಾರೆ. ಇದು ಬಹಳ ಪ್ರಾಮುಖ್ಯವಾದಂಥ ವಸ್ತು. ಆದರೆ ಈ ದಿವಸ ಇದನ್ನು ಸರ್ಕಾರದವರು ಬೇರೆ ದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದಾರೆ. ಈ ವಸ್ತುವು ನಮ್ಮ ದೇಶದಲ್ಲೇ ಸಿಕ್ಕುವಂತಿದ್ದಾಗ್ಯೂ ಈ ದಿವಸ ಇದನ್ನು ನಾವು ಅಮೆರಿಕಾದಿಂದ ತರಿಸಿಕೊಳ್ಳುತ್ತಿದ್ದೇವೆ. ಹೀಗೆ ತರಿಸಿಕೊಳ್ಳುವುದರ ಉದ್ದೇಶವನ್ನು ವಿವರಿಸುತ್ತಾ, ಈ ದಿವಸ ನಾವು ಈ ವಸ್ತುವನ್ನು ಇಲ್ಲೇ ತಯಾರಿಸಿದರೆ ತಯಾರಿಕೆಗೆ ಏನು ಬೆಲೆ ಆಗುತ್ತದೆಯೋ ಅದಕ್ಕಿಂತಲೂ ಕಡಮೆ ಬೆಲೆಯಲ್ಲಿ ನಮಗೆ ಅಮೆರಿಕಾದಿಂದ ಈ ವಸ್ತು ದೊರೆಯುತ್ತಿದೆ, ಅದಕ್ಕಾಗಿ ನಾವು ಈಗ ಇದನ್ನು ಅಲ್ಲಿಂದಲೇ ಆಮದು ಮಾಡಿಕೊಳ್ಳುತ್ತಿದ್ದೇವೆಂಬುದಾಗಿ ಸರ್ಕಾರದವರು ಹೇಳಬಹುದು. ಆದರೆ, ಈ ದಿವಸದ ಪ್ರಪಂಚದ ಪರಿಸ್ಥಿತಿಯಿರುವುದನ್ನು ಗಮನಿಸಿದರೆ, ಅದರಲ್ಲೂ ಈ ಎರಡನೇ ಮಹಾ ಯುದ್ಧವಾದನಂತರ, ಈ ಅಂತರರಾಷ್ಟ್ರೀಯ ವ್ಯವಹಾರ ದೃಷ್ಟಿಯಿಂದ ಈ ಅಂಶವನ್ನು ನಾವು ಪರಿಶೀಲಿಸಿದ್ದೇ ಆದರೆ, ನಮಗೆ ಇದರಿಂದ ಎಷ್ಟೇ ಖರ್ಚಾಗಲಿ ಏನೇ ಹಣ ವೆಚ್ಚವಾಗಲೀ ನಮ್ಮ ದೇಶದಲ್ಲಿ ಈ ಸಾಮಾನು ದೊರೆಯುವಂತಿದ್ದರೆ ಇದನ್ನು ಇಲ್ಲಿಯೇ ತಯಾರಿಸತಕ್ಕದ್ದು ಅತ್ಯಗತ್ಯವೆಂದು ಹೇಳುತ್ತೇನೆ. ಈ ಭೂಗರ್ಭ ಸಂಶೋಧನೆಯ ಕೆಲಸಗಳನ್ನು ನಮ್ಮ ಸರ್ಕಾರ ಬಹಳ ವರ್ಷಗಳಿಂದಲೂ ನಡೆಸಿಕೊಂಡು ಬರುತ್ತಿದೆ. ಈಗ ನಮ್ಮ ಭಾರತ ಸರ್ಕಾರ ಈ ಎರಡನೇ ಪಾಂಚವಾರ್ಷಿಕ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ನಾನಾ ಯೋಜನೆಗಳನ್ನು ಹಾಕಿಕೊಂಡಿದೆ. ನಮ್ಮ ಸರ್ಕಾರಕ್ಕೆ ಈ ಕಾರ್ಯವನ್ನು ಕೈಗೊಳ್ಳಲು ಹಣದ ಅಭಾವವಿದ್ದರೆ ಇವರು ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಮನವಿ ಮಾಡಿಕೊಂಡು ಅವರಿಂದ ಹಣದ ಸಹಾಯ ಪಡೆದು ಇದನ್ನು ಕಡ್ಡಾಯವಾಗಿ ಮಾಡಲೇಬೇಕು, ಇದು ಬಹಳ ಮುಖ್ಯವಾದಂಥ ವಿಚಾರ. ಇದು ಪ್ರಾಯಶಃ ಮುಂದಿನ ಭವಿಷ್ಯ ದೃಷ್ಟಿಯಿಂದ ಮತ್ತು ಅಂತರರಾಷ್ಟ್ರೀಯ ವೈವಿಧ್ಯಗಳ ದೃಷ್ಟಿಯಿಂದ ಈ ವಸ್ತುವನ್ನು ಎಂದರೆ, ಈ ಸಲ್ಫ್ಯೂರಿಕ್ ಆಸಿಡ್ಡನ್ನು, ಇಲ್ಲೇ ತಯಾರಿಸಬೇಕಾದದ್ದು ಅತ್ಯಗತ್ಯ. ಈ ವಿಷಯವನ್ನು ತಾವು ಖಂಡಿತ ಮುಂದಕ್ಕೆ ಹಾಕಿಕೊಂಡು ಹೋಗಬಾರದು. ಇದು ಜಿಯೋಲಾಜಿಕಲ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟಂಥ ವಿಚಾರ. ಅಲ್ಲದೆ ಇದು ಕೇಂದ್ರದ ಸಬ್‌ಜೆಕ್ಟ್. ಈ ದಿವಸ ಈ ಬಗ್ಗೆ ಎರಡು ಬಹಳ ಮುಖ್ಯವಾದ ಕೆಲಸಗಳು ನಡೆಯಬೇಕಾಗಿದೆ. ಈ ಜಿಯೋಲಾಜಿಕಲ್ ವಿಚಾರದ ಬಗ್ಗೆ ಸರ್ವೆ ನಡೆಸಿ ಎಲ್ಲೆಲ್ಲಿ ಭೂಗರ್ಭದಲ್ಲಿ ಏನೇನು ಸಂಪತ್ತು ಅಡಗಿದೆ ಎಂಬುದನ್ನು ಕಂಡುಹಿಡಿಯಲು ನಮ್ಮ ಸರ್ಕಾರದವರು ನೇಮಿಸಿರತಕ್ಕಂಥ ಇಲಾಖೆ ಬಹಳ ವರ್ಷಗಳಿಂದಲೂ ಈ ಕಾರ್ಯವನ್ನು ನಡೆಸಿಕೊಂಡು ಬರುತ್ತಿದೆ. ಈ ನಮ್ಮ ಇಲಾಖೆಯಲ್ಲಿ ದಕ್ಷರಾದಂಥ, ಪ್ರಾಜ್ಞರಾದಂಥ ಮೇಧಾವಿಗಳಾದಂಥ ಜನರಿದ್ದಾರೆ. ಈ ಇಲಾಖೆಯನ್ನೂ, ಕೇಂದ್ರ ಸರ್ಕಾರದ ಈ ಬಾಬಿನ ಇಲಾಖೆಯನ್ನೂ ಎರಡನ್ನೂ ಗಮನದಲ್ಲಿಟ್ಟುಕೊಂಡು ಹೋಲಿಕೆ ಮಾಡುತ್ತಾ ಹೋದರೆ ಈ ದಿವಸ ನಮ್ಮ ಸರ್ಕಾರದವರು ಕೇಂದ್ರದ ಇಲಾಖೆಯವರು ನಡೆಸಬೇಕಾಗಿದ್ದಂಥ ಕಾರ್ಯವನ್ನು ಈ ನಮ್ಮ ಇಲಾಖೆ ಮೂಲಕ ಈವರೆಗೂ ನಡೆಸಿಕೊಂಡು ಬಂದಿದ್ದಾರೆ. ಹೀಗಿರುವುದರಿಂದ ಈಗ ನಮ್ಮ ಸರ್ಕಾರ ಇಲ್ಲಿಯವರೆಗೂ ಈ ಇಲಾಖೆಗಾಗಿ ವೆಚ್ಚಮಾಡಿರುವಂಥ ಮೊಬಲಗನ್ನು ಇಂಡಿಯಾ ಸರ್ಕಾರದವರಿಂದ ವಸೂಲ್ಮಾಡುವುದಕ್ಕೇನಾದರೂ ಅವಕಾಶವಿದೆಯೋ ಎಂಬುದನ್ನು ಈಗ ಪರಿಶೀಲನೆ ಮಾಡಿ ನೋಡಬೇಕಾಗಿದೆ. ಈ ದಿವಸ ಈ ಕೈಗಾರಿಕಾ ನೀತಿಯ ಬಗ್ಗೆ ಕೇಂದ್ರದವರ ನಿಲುವು ಯಾವ ರೀತಿ ಇರುತ್ತದೆ ಎಂಬುದನ್ನು ಸ್ಪಷ್ಟಪಡಿಸುವಂತೆ ಮಾನ್ಯ ಮಂತ್ರಿಗಳು ಪ್ರಯತ್ನ

ಪಡುತ್ತಾರೆಂದು ನಾನು ಭರವಸೆಯುಳ್ಳವನಾಗಿದ್ದೇನೆ. ಹೀಗೆ ಪ್ರಯತ್ನ ಮಾಡಿದ್ದೇ ಆದರೆ ಈ ದಿವಸ ನಾವು ನಮ್ಮ ಸರ್ಕಾರಕ್ಕಾಗುತ್ತಿರುವ ಖರ್ಚನ್ನು ಮಿತವ್ಯಯಗೊಳಿಸುವುದಕ್ಕೂ ಸಹ ಇದರಿಂದ ಅವಕಾಶವಾಗುತ್ತದೆ. ಈ ದಿವಸ ನಿಜವಾಗಿಯೂ ಈ ನಮ್ಮ ಜಿಯೋಲಾಜಿಕಲ್ ಇಲಾಖೆ ಆ ಕೇಂದ್ರಕ್ಕೆ ಸಂಬಂಧಪಟ್ಟಂಥ, ಅದರ ಆಡಳಿತಕ್ಕೊಳಪಟ್ಟಂಥ ಕೆಲಸ ಕಾರ್ಯಗಳನ್ನು ಮಾಡುತ್ತಿರುವುದರಿಂದ ಇದರ ಬಗ್ಗೆ ಅವರು ನಮಗೆ ಒಂದು ದೊಡ್ಡ ಸಹಾಯ ನೀಡಲು ಅವಕಾಶವಿದೆ. ಇದನ್ನು ತಾವು ಮಾಡಬೇಕು.

ಮೂರನೆಯದಾಗಿ ನಮಗೆ ಈಗ ಹೊಸ ಹೊಸ ವಿಚಾರಗಳು ಕಾಣುತ್ತಾ ಇವೆ. ಮೊನ್ನೆ ಪತ್ರಿಕೆಯಲ್ಲಿ ನೋಡಿದೆ ಹೈದರಾಬಾದು ಸಂಸ್ಥಾನದಿಂದ ಕರ್ನಾಟಕಕ್ಕೆ ಬರತಕ್ಕ ರಾಯಚೂರು ಜಿಲ್ಲೆಯಲ್ಲಿ ವಜ್ರ ಸಿಕ್ಕಿದೆ ಎಂದು ಹೇಳುತ್ತಾರೆ. ಈಗತಾನೆ ತೀರ್ಥಹಳ್ಳಿ ತಾಲ್ಲೂಕಿನ ಹತ್ತಿರ ಅಂಬುತೀರ್ಥದಲ್ಲಿ ಪೆಟ್ರೋಲಿಯಂ ವಾಸನೆ ಬರುತ್ತಾ ಇದೆ ಎಂದು ಹೇಳುತ್ತಾ ಇದ್ದರು. ಭೂಗರ್ಭದಲ್ಲಿ ಅಡಗಿರತಕ್ಕ ಖನಿಜಸಂಪತ್ತನ್ನು ಮನುಷ್ಯನಿಂದ ಪೂರ್ಣವಾಗಿ ಸ್ವಾಧೀನಮಾಡಿಕೊಳ್ಳಲಿಕ್ಕೆ ಸಾಧ್ಯವಾಗಿದೆ ಎಂದು ಹೇಳಲು ಆಗುವುದಿಲ್ಲ. ಸ್ವಾಧೀನಮಾಡಿಕೊಳ್ಳತಕ್ಕ ಕಾರ್ಯದಲ್ಲಿ ತೊಡಗಿದ್ದಾರೆ. ಸರ್ಕಾರದವರು ಮುಂದೆ ಭೂಗರ್ಭದಲ್ಲಿರತಕ್ಕ ಖನಿಜ ಸಂಪತ್ತನ್ನು ಪಡೆದುಕೊಳ್ಳಲು ಪ್ರಯತ್ನ ಮಾಡಬೇಕು. ಆದರೆ ಅದರ ಖರ್ಚನ್ನು ಕೇವಲ ಸಂಸ್ಥಾನದ ಸರ್ಕಾರದ ಮೇಲೆ ಹೊರಿಸುವುದು ಸರಿಯಲ್ಲ. ಅದು ಎಲ್ಲೇ ಇದ್ದರೂ ಕೂಡ ಇಡೀ ದೇಶಕ್ಕೆ ಸಂಬಂಧಪಟ್ಟದ್ದು. ದೇಶದ ಸಂಪತ್ತನ್ನು ಹೆಚ್ಚಿಸಿದಂತೆ ಆಗುತ್ತದೆ. ಆದ್ದರಿಂದ ಅದರ ಖರ್ಚನ್ನು ಪೂರ್ಣವಾಗಿ ಇಂಡಿಯಾ ಸರ್ಕಾರದವರೇ ಕೊಡಬೇಕೆಂದು ಒತ್ತಾಯಪಡಿಸುವುದಕ್ಕೆ ಅದು ಒಂದು ಬಹಳ ಮುಖ್ಯವಾದ ಕಾರಣ ಎಂದು ಒಂದು ದೃಷ್ಟಿಯಿಂದ ಅನ್ನಿಸುತ್ತದೆ. ಶ್ರೀ ಭೀಮಪ್ಪ ನಾಯಕರ ರಿಪೋರ್ಟ್ ನೋಡಿದರೆ ಒಂದು ವಿಚಾರ ಕಾಣುತ್ತದೆ. ಇನ್ನೂ ಸ್ವಾಧೀನ ಮಾಡಿಕೊಳ್ಳಬೇಕಾಗಿರತಕ್ಕ ಮೂಲಗಳು ಅನೇಕವಿವೆ. ಅವುಗಳನ್ನು ಏಕೆ ಮಾಡಿಕೊಳ್ಳಲಿಲ್ಲ? ಒಂದು ಮಾತು ಮಾತ್ರ ಸ್ಪಷ್ಟವಾಗಿ ಕಾಣುತ್ತದೆ. ನಮ್ಮ ಮಿತ್ರರಾದ ಶ್ರೀ ದೇವರಾಜ್ ಅರಸ್‌ರವರ ಮತ್ತು ಶ್ರೀ ಶಿವಪ್ಪನವರ ಭಾಷಣಗಳನ್ನು ಕೇಳಿದೆ. ಮತ್ತೊಂದುಕಡೆ ಶ್ರೀ ಹುಚ್ಚೇಗೌಡರ ಭಾಷಣವನ್ನೂ ಕೇಳಿದೆ. ಈ ಡಿಮ್ಯಾಂಡ್ ಮೇಲೆ ಇಷ್ಟು ವಿಧವಾದ ಅಭಿಪ್ರಾಯ ಬರುತ್ತದೆ ಎಂದು ನಿರೀಕ್ಷೆ ಮಾಡಿರಲಿಲ್ಲ ಎಂದು ಕಾಣುತ್ತದೆ. ಹೊಸ ಮಂತ್ರಿಗಳಾದ ಶ್ರೀ ಚನ್ನಬಸಪ್ಪನವರು ಹೆಚ್ಚಿನ ಉತ್ಸಾಹ ತೋರಿಸುತ್ತಾ ಇದ್ದಾರೆ ಎಂಬುದು ನಿರ್ವಿವಾದವಾದದ್ದು, ಆದರೆ ಬರೀ ಉತ್ಸಾಹ ಸಾಲದು. ಅದರ ಜೊತೆಗೆ ಉತ್ಸಾಹಭರಿತವಾದ ಕಾರ್ಯಸಾಧನೆ ಕಾಣಬೇಕು ಎನ್ನುವ ಆಸೆ ಇದೆ. ಒಟ್ಟಿನಲ್ಲಿ ಜಿಯಾಲಜಿ ಡಿಪಾರ್ಟ್‌ಮೆಂಟಿನ ಕೆಲಸದಲ್ಲಿ ಬಹಳ ಶ್ರದ್ಧೆವಹಿಸಿದ್ದಾರೆ. ಸಂಸ್ಥಾನದ ಭೂಗರ್ಭಶಾಖೆ ಬಹಳ ವರ್ಷಗಳಿಂದಲೂ ನಡೆದುಕೊಂಡು ಬಂದಿರುವುದು ಒಂದು ಹೆಮ್ಮೆ, ಹಿರಿಮೆ ಮತ್ತು ವೈಶಿಷ್ಟ್ಯ ಎಂದು ಹೇಳಿದರೂ ತಪ್ಪಾಗಲಾರದು. ಇಲ್ಲಿ ಬಹಳ ಚೆನ್ನಾಗಿ ಕೆಲಸ ಆಗಿದೆ. ಪ್ರಾಯಶಃ ಒಂದಾನೊಂದು ಕಾಲದಲ್ಲಿ ಇಂಡಿಯಾ ಸರ್ಕಾರದವರಿಗೆ ಮಾರ್ಗಸೂಚನೆಯಾಗಿ ಮೈಸೂರು ಸರ್ಕಾರ ಬಹಳವಾಗಿ ಕೆಲಸಮಾಡಿದೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ಅಷ್ಟು ಪ್ರಾವೀಣ್ಯತೆ ಇದೆ ಎಂಬ ಭಾವನೆಯನ್ನು ಸರ್ಕಾರದ ಮುಂದೆ ಇಡಬೇಕೆಂದು ಮಾತ್ರ ಈ ಡಿಮ್ಯಾಂಡಿನ ಮೇಲೆ ಮಾತನಾಡಬೇಕೆಂದು ಇದ್ದೆ. ಇಂಡಿಯಾ ಸರ್ಕಾರದ ನೆರವು ಯಾವ ಪ್ರಮಾಣದಲ್ಲಿ ಬರಬೇಕೆಂಬುದರ ವಿಷಯದಲ್ಲೂ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಅವರು ಕೊಟ್ಟಿರುವುದು ನನಗೇನೋ ಅಷ್ಟು ತೃಪ್ತಿಕರವಾಗಿ ಕಾಣುತ್ತಿಲ್ಲ. ಮೈಸೂರು ಸಂಸ್ಥಾನದಲ್ಲಿ ಖನಿಜ ಸಂಪತ್ತನ್ನು ಬೆಳೆಸಲಿಕ್ಕೆ ಎಷ್ಟು ಅವಕಾಶವಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಒಂದು ಯೋಜನಾ ಉಪಸಮಿತಿಯನ್ನು ಮಾಡಿದ್ದರು. ಅದರಲ್ಲಿ ನಾನೂಕೂಡ ಸದಸ್ಯನಾಗಿದ್ದು ಸಲಹೆಗಳನ್ನು ಕೊಟ್ಟಿದ್ದೇನೆ. ಅಲ್ಲಿ ನಡೆದ ವಿಚಾರಗಳನ್ನು ತಿಳಿದುಕೊಳ್ಳಲಿಕ್ಕೆ ನನಗೆ ಅವಕಾಶ ಉಂಟಾಗಿತ್ತು. ಸಲಹೆಗಳನ್ನು ಕೊಟ್ಟಿದ್ದರೂ ಕೂಡ ಇಂಡಿಯಾ ಸರ್ಕಾರದವರು ಅವನ್ನು ತಳ್ಳಿಹಾಕಿರುವುದರಿಂದ ಮತ್ತೆ ಹೇಳುತ್ತಾ ಇದ್ದೇನೆ. Outside the plan, ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಕೆಲಸ ಮಾಡುವುದಕ್ಕೆ ಹೇಗೆ ಇಂಡಿಯಾ ಸರ್ಕಾರದವರು ಹೊರಟಿದ್ದಾರೋ ಅದೇ ರೀತಿ ಖನಿಜ ಸಂಪತ್ತಿನ ವಿಚಾರದಲ್ಲೂ ಇದಕ್ಕೆ ಸಂಬಂಧಪಟ್ಟವರನ್ನೆಲ್ಲಾ ಕೂಡಿಸಿ ಆ ಸಲಹೆಗಳನ್ನೆಲ್ಲಾ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಶ್ರೀ ಚನ್ನಬಸಪ್ಪನವರು ಈಗಾಗಲೆ ಆ ಪ್ರಯತ್ನ ಮಾಡಿದ್ದಾರೆ. ಅದನ್ನು ಒತ್ತಾಯಮಾಡಿ, ಮೈಸೂರು ದೇಶದ ಭವಿಷ್ಯ ಮತ್ತು ಮೈಸೂರು ದೇಶದ ಸಂಪದಭಿವೃದ್ಧಿಗೆ ಈ ಜಿಯಾಲಜಿ ಡಿಪಾರ್ಟ್‌ಮೆಂಟು ಬಹಳ ಮುಖ್ಯವಾದದ್ದು, ಇದು ಚೆನ್ನಾಗಿ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ಅಸಮಾಧಾನ ಬರತಕ್ಕ ಮಾತು ಇದೆ. ಅದೇನೆಂದರೆ ಶಿಬ್ಬಂದಿ ಖರ್ಚು ಜಾಸ್ತಿಯಾಗಿ ಕಾಣುತ್ತಾ ಇದೆ. ಈರೀತಿ ಆಗಬಾರದು. ಮಿತವ್ಯಯ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತು ಇಲಾಖೆಯನ್ನು ಸ್ಥಿರಗೊಳಿಸಿ ಇನ್ನು ತ್ವರಿತವಾಗಿ ಶ್ರೀ ಭೀಮಪ್ಪನಾಯಕರ ಸಮಿತಿಯವರು ಮಾಡಿರತಕ್ಕ ಕೆಲವು ಉಪಯುಕ್ತವಾದ ಸಲಹೆಗಳನ್ನು ಕಾರ್ಯಗತ ಮಾಡಲು ಹೆಚ್ಚಿನ ಆಸಕ್ತಿಯನ್ನು ತೋರಿಸಲು ಅವರನ್ನು ಹುರಿದುಂಬಿಸಬೇಕು. ಕೊನೆಯದಾಗಿ ಇಂಡಿಯಾ ಸರ್ಕಾರದ ನೆರವು ಅನೇಕವಾಗಿ ಬರಬೇಕಾಗಿದೆ, ಅವನ್ನು ದೊರಕಿಸಿಕೊಳ್ಳಬೇಕು. ನನ್ನ ಆಸೆ ಹೀಗಿದೆ, ಈ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ, ಬಡ್ಜೆಟ್‌ನಲ್ಲಿ ಏನು ವರಮಾನ ಬಂತು, ಬೊಕ್ಕಸಕ್ಕೆ ಎಷ್ಟು ಸೇರಿತು ಎಂದು ಹೇಳಿ ಯಾವರೀತಿ ಆಸಕ್ತಿಯಿಂದ ನೋಡುತ್ತೇವೆಯೋ ಅದೇರೀತಿ ಈ ಜಿಯಾಲಜಿ ಡಿಪಾರ್ಟ್‌ಮೆಂಟು ಆಗಬೇಕು. ಆರೀತಿ ಆಗುವವರೆಗೂ ತೃಪ್ತಿಯಾಗುವುದಿಲ್ಲ. ಈ ರೀತಿಯಾಗಿ ಸರ್ವತೋಮುಖವಾದ ಅಭಿವೃದ್ಧಿಯನ್ನು ಬೆಳೆಸುವುದಕ್ಕೆ ನಮ್ಮ ಪರಮ ಮಿತ್ರರಾದ ಮಾನ್ಯ ಸಚಿವರು ಪ್ರಯತ್ನಪಡಲಿ, ಅವರ ಉತ್ಸಾಹ ಈ ಧಾಟಿಯಲ್ಲಿ ಹೊರಹೊಮ್ಮಲಿ ಎಂದು ಆಸೆಪಟ್ಟು ನಾನು ಈ ಎರಡು ಮೂರು ಸಲಹೆಗಳನ್ನು ಸರ್ಕಾರದವರ ಮುಂದಿಡುತ್ತೇನೆ.

*ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು—ದಕ್ಷಿಣ).—ಮಾನ್ಯ ಸಭಾಪತಿಯವರೇ, ವಿಜ್ಞಾನ ವಿಷಯಗಳಿಗೆ ಸಂಬಂಧಪಟ್ಟ 9 ಲಕ್ಷದ 83 ಸಾವಿರ ರೂಪಾಯಿಗಳ ಈ ಬೇಡಿಕೆಯ ಬಗ್ಗೆ ನಾನು ಒಂದೆರಡು ಅಂಶಗಳನ್ನು ಪ್ರಸ್ತಾಪ ಮಾಡಲು ಬಯಸುತ್ತೇನೆ. ಶ್ರೀಮಾನ್ ಪಟ್ಟಾಭಿರಾಮನ್‌ರವರು ಮಾತನಾಡುತ್ತಾ ಖನಿಜಗಳನ್ನು ತೆಗೆಯುವ ವಿಷಯದಲ್ಲಿ ಮತ್ತು ಹೊಸ ಖನಿಜಗಳು ಎಲ್ಲೆಲ್ಲಿ ಸಿಕ್ಕುತ್ತವೆ ಎಂಬ ಪರಿಶೋಧನೆಯನ್ನು ನಡೆಸುವುದರಲ್ಲಿ ಕೇಂದ್ರದ ನೆರ

(ಶ್ರೀ ಎ. ವಿ. ನರಸಿಂಹರೆಡ್ಡಿ.)

ವನ್ನು ತೆಗೆದುಕೊಳ್ಳುವುದು ಉಚಿತವೇ ಎಂಬುದನ್ನು ಯೋಚನೆ ಮಾಡಿ ಎಂದು ಹೇಳಿದರು. ಖನಿಜದ ಬಾಬು ಕೇಂದ್ರಕ್ಕೆ ಸೇರಿದ್ದೆಂಬುದು ನಿರ್ವಿವಾದ ವಾದ ಅಂಶ. ಆದ್ದರಿಂದ ಪ್ರಾಂತೀಯ ಸರ್ಕಾರ ಕೇಂದ್ರ ಸರ್ಕಾರದಿಂದ ನೆರವನ್ನು ತೆಗೆದುಕೊಂಡರೆ ಈ ಬಾಬಿನಿಂದ ಕೇಂದ್ರ ಸರ್ಕಾರದಿಂದ ನಮಗೆ ಬರುವ ನೆರವು ಕಡಮೆಯಾಗುವುದಿಲ್ಲವೇ ಎಂಬುದನ್ನು ಈ ಸಂದರ್ಭದಲ್ಲಿ ಯೋಚನೆ ಮಾಡುವುದು ಯುಕ್ತ ಎಂಬುದನ್ನು ನಾನು ಹೇಳ ಬಯಸುತ್ತೇನೆ.

ಎರಡನೆಯದಾಗಿ, ಹಣಕಾಸಿನ ದೃಷ್ಟಿ; ನಾವು ಸಂತೋಷದಾಯಕವಾದ ಪರಿಸ್ಥಿತಿಯಲ್ಲಿಲ್ಲ. ಜೊತೆಗೆ ಹೊಸದಾಗಿ ತೆರಿಗೆಗಳನ್ನು ಹಾಕುವ ಯೋಜನೆಯನ್ನು ಕೂಡ ಈ ವರ್ಷ ನಾವು ಕೈಬಿಟ್ಟಿದ್ದೇವೆ. ಆದ್ದರಿಂದ ಸರ್ಕಾರದವರು ಖನಿಜಗಳನ್ನು ತೆಗೆಯುವುದರ ಮೂಲಕ ವರಮಾನವನ್ನು ಹೆಚ್ಚಿಸಿಕೊಳ್ಳುವುದರ ಕಡೆ ತೀವ್ರಾಸಕ್ತಿಯನ್ನು ತೋರಿಸುವುದು ತುಂಬ ಅವಶ್ಯಕವಾಗಿದೆಯೆಂಬದನ್ನು ನಾವು ಹೇಳಬೇಕಾಗಿಲ್ಲ. ಈ ವರೆಗೆ ನಡೆಯುತ್ತಿರುವ ಕ್ರಮದಲ್ಲಿ ಅನೇಕ ಲೋಪದೋಷಗಳು ತುಂಬಿವೆಯೆಂಬುದನ್ನು ಮಾನ್ಯ ಮಿತ್ರರುಗಳನೇಕರು ಎತ್ತಿ ತೋರಿಸಿದ್ದಾರೆ. ಅಲ್ಲದೆ ಸಾರ್ವಜನಿಕರ ಮುಂದೆ ಬಂದಿದ್ದ ಒಂದೆರಡು ನಿರ್ದಿಷ್ಟವಾದ ಘಟನೆಗಳು ಇನ್ನೂ ಮರೆಯದೆ ಹಾಗೆಯೇ ನಿಂತಿವೆ. ಅವುಗಳ ಬಗ್ಗೆ ಪ್ರಸ್ತಾಪ ನಡೆಸದೆ, ಇರತಕ್ಕ ಅಂಕಿ ಅಂಶಗಳನ್ನು ಸಾರ್ವಜನಿಕರ ಮುಂದೆ ಇಡದೆಹೋದರೆ ಈಗ ಸಾರ್ವಜನಿಕರ ಮನಸ್ಸಿನಲ್ಲಿ ಉಂಟಾಗಿರುವ ಸಂದೇಹ ಹೋಗುವುದಿಲ್ಲವೆಂದು ಭಾವಿಸಿ ನಾನು ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಹಿಂದೆ, ಮಾನ್ಯ ಸಚಿವರು ಅಧಿಕಾರಕ್ಕೆ ಬಂದ ಮೇಲೆ ಎಸ್. ವಿ. ಸುಬ್ರಮ್ಮಣ್ಯಂರವರಿಗೆ ಲೈಸೆನ್ಸ್ ಇಲ್ಲದೆ ಖನಿಜ ತೆಗೆಯುವುದಕ್ಕೆ ಅವಕಾಶ ಕೊಟ್ಟಿದ್ದರು, ಅವರು ಬೇಕಾದಷ್ಟು ಖನಿಜವನ್ನು ತೆಗೆದು ಸಾಗಿಸುತ್ತಿದ್ದರು ಎಂದು ದೊಡ್ಡ ಕೋಲಾಹಲವೆದ್ದಿತ್ತು. ಅದರ ಮೇಲೆ ವಿಚಾರಣೆ ನಡೆಸುತ್ತಿದ್ದಾರೆಂದು ತಿಳಿದುಬಂದಿತ್ತು. ಆದರೆ, ಅದಾದಮೇಲೆ ಅಲ್ಲಿ, ಇಲ್ಲಿ—ಜನರು ಬಹಿರಂಗವಾಗಿಲ್ಲದಿದ್ದರೂ, ಒಳಗೊಳಗೇ—ಈ ವಿವಾದದ ವಿಷಯದಲ್ಲಿ ತಣ್ಣೀರೆರಚಿದಂತಾಗಿದೆ ಎಂದು ಹೇಳಿಕೊಳ್ಳುತ್ತಿದ್ದಾರೆ. ರಾಷ್ಟ್ರೀಯ ವಿಷಯಗಳಿಂದ ದೂರವಾಗಿದ್ದ ಕೆಲವು ನನ್ನ ಮಿತ್ರರು ಎಸ್. ವಿ. ಸುಬ್ರಮ್ಮಣ್ಯಂರವರು ಖನಿಜವನ್ನು ಸಾಗಿಸುತ್ತಿದ್ದ ವಿಷಯವೇನಾಯಿತು ಎಂದು ಆಸಕ್ತಿಯಿಂದ ಕೇಳುತ್ತಿದ್ದಾರೆ. ಆದ್ದರಿಂದ ಎಲ್ಲಕ್ಕೂ ಸಹಾಯಕವಾಗುವ ರೀತಿಯಲ್ಲಿ ಸರ್ಕಾರದವರು ಎಲ್ಲಾ ವಿಷಯಗಳನ್ನೂ ಬಹಿರಂಗವಾಗಿ ದೇಶದ ಮುಂದಿಡಲಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಆಮೇಲೆ, ಲೈಸೆನ್ಸ್ ಕೊಡತಕ್ಕ ವಿಷಯದಲ್ಲಿ ಈಗಿರುವ ಕಾನೂನಿನಲ್ಲಿ ಅನೇಕ ಲೋಪದೋಷಗಳಿವೆ.

ಸ್ವಾಮಿ, ಖನಿಜಗಳನ್ನು ತೆಗೆಯತಕ್ಕ ಪ್ರದೇಶವನ್ನು ಯಾರಾದರೂ ವ್ಯಕ್ತಿ ಕೊಡಬೇಕು ಎಂದು ಕೇಳಿದಾಗ ದನ್ನೂ ಸರ್ವೆ ಮಾಡುವುದಕ್ಕೆ ಸ್ವಲ್ಪ ಕಾಲವನ್ನು ಕೊಟ್ಟು, ಆಮೇಲೆ ಖಾಯಂ ಖನಿಜಗಳನ್ನು ತೆಗೆಯುವುದಕ್ಕೂ, ಗುತ್ತಿಗೆ ಕೊಡುವುದಕ್ಕೂ ಮಧ್ಯದಲ್ಲಿ ಕಾಲಾವಕಾಶವನ್ನೂ ಉಂಟುಮಾಡಿದ್ದಾರೆಂದು ಕೇಳಿದ್ದೇನೆ. ಖನಿಜ ಸಿಕ್ಕುವಹಾಗಿದ್ದರೆ ಈ ಸರ್ವೆ ಮಾಡತಕ್ಕದ್ದು, ಖನಿಜತೆಗೆದು ಸಾಗಿಸತಕ್ಕದ್ದು—ಈ ಎರಡು ಕ್ರಮಗಳು ಪ್ರಾಯಶಃ ಕೆಲಸಮಾಡುವ ದೃಷ್ಟಿಯಿಂದ ಅವಶ್ಯಕ ವಿರಬಹುದು. ಸರ್ವೆ ಮಾಡುವ ನೆಪದಲ್ಲಿ ಖನಿಜವನ್ನು ತೆಗೆದು ಸಾಗಿಸುವುದಕ್ಕೆ ಅವಕಾಶ ಕೊಡದರೀತಿಯಲ್ಲಿ ಸರ್ಕಾರದವರು ನಿಗಾ ಇಡುವುದು ಅವಶ್ಯಕವಾಗಿದೆ. ಈ ಒಂದು ಲೋಪದಿಂದ ಶ್ರೀ ಎಸ್ ವಿ. ಸುಬ್ರಹ್ಮಣಂರವರ ಪ್ರಸಂಗ ಬೃಹದಾಕಾರವಾಗಿ ಸಾರ್ವಜನಿಕರ ಮುಂದೆ ಬಂತೆಂದು ಆಲೋಚಿಸುತ್ತೇನೆ. ಇನ್ನು ಮುಂದಾದರೂ ಸರ್ಕಾರದವರು ಸರ್ವೆ ಕಾಲದಲ್ಲಿ ಖನಿಜ ತೆಗೆಯುತ್ತಿದ್ದಾರೆಯೇ ಇಲ್ಲವೇ ಎನ್ನುವ ಬಗ್ಗೆ ನಿಗಾವನ್ನು ಇಟ್ಟು ಲೈಸೆನ್ಸ್ ಕೊಡುವಾಗ ಏನು ಒತ್ತಾಯವನ್ನು ಹಾಕಬೇಕೋ ಅದನ್ನು ಹಾಕಿ ಲೈಸೆನ್ಸ್ ಪಡೆದಮೇಲೆ ಮಾತ್ರ ಖನಿಜವನ್ನು ಸಾಗಿಸುವುದಕ್ಕೆ ಅವಕಾಶವಿರುವಂತೆ ಏರ್ಪಾಡು ಮಾಡಬೇಕು. ಇವೊತ್ತು ಕೇಂದ್ರದ ಕೈಗೆ ಅನೇಕ ಇಲಾಖೆಗಳ ಆಡಳಿತವನ್ನು ವಹಿಸಿ ಅವುಗಳು ಎಷ್ಟರಮಟ್ಟಿಗೆ ನಡೆಯುತ್ತಿವೆ ಎಂಬುದನ್ನು ನೋಡುತ್ತಿದ್ದೇವೆ. ಕೇಂದ್ರದ ನೆರವನ್ನು ಪಡೆದು ಕೇಂದ್ರದವರು ಇಂತಹ ಖನಿಜಗಳನ್ನು ತೆಗೆಸುವ ಕಾರ್ಯವನ್ನು ಮಾಡುವ ವಿಷಯದಲ್ಲಿ ನಾನು ಒಪ್ಪುವುದಿಲ್ಲ. ಈಗಾಗಲೆ ನಾವು ಹಣಕಾಸಿನ ಒಪ್ಪಂದವನ್ನು ಕೇಂದ್ರ ಸರ್ಕಾರದೊಂದಿಗೆ ಮಾಡಿಕೊಳ್ಳುವಾಗ ಅನೇಕ ಆದಾಯ ಬಾಬುಗಳನ್ನು ಕೇಂದ್ರಕ್ಕೆ ಬಿಟ್ಟುಕೊಟ್ಟಿದ್ದೇವೆ. ಹೀಗೆ ಒಪ್ಪಂದ ಮಾಡುವಾಗಲೂಕೂಡ, ಕೇಂದ್ರದಿಂದ ಬರುವ ಹಣವನ್ನು ಕಾಲಕ್ರಮೇಣ ಕಡಿಮೆ ಮಾಡುತ್ತಾರೆಂದು ಹೇಳಿದ್ದಾರೆ. ಅದೃಷ್ಟವಶಾತ್ ಕಳೆದಸಾಲಿನಲ್ಲಿ ಖೋತಾ ಮಾಡದೆ ಕಳಿತಿದ್ದಾರೆ. ಇದಕ್ಕೆ ಕೇಂದ್ರದವರನ್ನು ಅಭಿನಂದಿಸುತ್ತೇನೆ. ಇಂಥ ಪರಿಸ್ಥಿತಿ ತಪ್ಪಬೇಕು. ಪ್ರಾಂತಗಳು ಆಡಳಿತವನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಕಷ್ಟು ಆದಾಯವಿರಬೇಕು. ಆ ದೃಷ್ಟಿಯಿಂದ ಪರಿಶೀಲಿಸುವುದಾದರೆ ನಿಜವಾಗಿಯೂ ಆಯಾ ಪ್ರಾಂತದಲ್ಲಿ ಸಂಬಂಧಪಟ್ಟ ಖನಿಜಗಳನ್ನು ತೆಗೆಸುವುದಕ್ಕೆ ಆಯಾ ಪ್ರಾಂತಗಳಿಗೆ ಅಧಿಕಾರವಿರುವುದು ಸೂಕ್ತ. ಹಾಗೇನಾದರೂ ಅಧಿಕಾರವನ್ನು ನಡೆಸುವುದಕ್ಕೆ ಪ್ರಾಂತಗಳಿಗೆ ಚೈತನ್ಯ ಇಲ್ಲದೇ ಹೋದರೆ, ಕೇಂದ್ರದಿಂದ ನೆರವನ್ನು ಸಾಲದ ರೂಪದಲ್ಲಿಯೋ, grant ರೂಪದಲ್ಲಿಯೋ ಪಡೆಯಬೇಕೇ ಹೊರತು, ಕೇಂದ್ರಕ್ಕೆ ಈ ಇಲಾಖೆಯನ್ನು ವಹಿಸಕೂಡದು. ನಾವು ಈ ರೀತಿ ದಾಸ್ಯ ಒಪ್ಪುವುದಿಲ್ಲ. ಏಕೆಂದರೆ, ಪುನರ್ವಿಂಗಡಣೆಯಾದಮೇಲೆ ಎಲ್ಲ ಪ್ರಾಂತಗಳೂ ಕೂಡ ಕೇಂದ್ರದ ದೃಷ್ಟಿಯಿಂದ ಸ್ವಪರಿಪೂರ್ಣ ಆಡಳಿತವನ್ನು ನಡೆಸಬೇಕಾಗಿದೆ. ಹೀಗಿರುವ ಸಂದರ್ಭದಲ್ಲಿ ಹಣಬರುವ ಇಲಾಖೆಗಳನ್ನು ಕೇಂದ್ರಕ್ಕೆ ವಹಿಸುತ್ತಾಹೋದರೆ, ಆಡಳಿತ ಯಂತ್ರವನ್ನು ನಡೆಸುವುದಕ್ಕೆ ಆಗದೆ ಹೋಗುತ್ತದೆ. ಆದ್ದರಿಂದ ಸರ್ಕಾರದವರು ಆದಷ್ಟು ತೀವ್ರವಾದ ರೀತಿಯಲ್ಲಿ ಆದಾಯ ಬರತಕ್ಕ ಇಲಾಖೆಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಇಲಾಖೆಗಳೂ ಸಹ ಆದಾಯಬರುವುದಕ್ಕೆ ಪ್ರಯತ್ನ ಪಡಬೇಕು, ತಮಗೆ ಹಣಕಾಸಿನ ಕೊರತೆ ಇದ್ದರೆ, ಹಣಕಾಸಿನ ಸೌಲಭ್ಯ ಕಡಿಮೆಯಾದರೆ, ಕೇಂದ್ರದಿಂದ ಬೇರೆ ರೀತಿ ಯಾದಂತಹ ನೆರವನ್ನು ತೆಗೆದುಕೊಳ್ಳಬೇಕು. ತಮ್ಮ ಅಧೀನದಲ್ಲಿರತಕ್ಕ ಇಲಾಖೆಗಳನ್ನು ಚೆನ್ನಾಗಿ ನಡೆಸಿ ದೇಶದ ಬೊಕ್ಕಸಕ್ಕೆ ಹಣವನ್ನು ಸಿಕ್ಕುವಂತೆ ಏರ್ಪಾಡು ಮಾಡಬೇಕೆಂದು ತಿಳಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಈ ಡಿಮ್ಯಾಂಡಿನ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಬಹಳ ಸಲಹೆಗಳನ್ನು ಕೊಟ್ಟಿರುವುದಕ್ಕಾಗಿ ಅವರಿ

ಗೆಲ್ಲಾ ನಾನು ತುಂಬ ಕೃತಜ್ಞನಾಗಿದ್ದೇನೆ. ಶ್ರೀ ಹುಚ್ಚೇಗೌಡರು ಟೀಕೆ ಟಿಪ್ಪಣಿಗಳನ್ನು ಮಾಡುವಾಗ ಇಲಾಖೆಯು ಉತ್ತಮವಾಗಬೇಕೆಂಬ ವಿಶಾಲ ಮನೋಭಾವನೆಯಿಂದ ಮಾಡಿದ್ದಾರೆಯೇ ವಿನಾ, ಇಲಾಖೆಯಲ್ಲಿ ತಪ್ಪನ್ನು ಕಂಡುಹಿಡಿಯಬೇಕೆಂಬ ಮನೋಭಾವದಿಂದ ಮಾಡಿಲ್ಲವೆಂದು ತಿಳಿದುಕೊಂಡಿದ್ದೇನೆ. ಶ್ರೀ ಹುಚ್ಚೇಗೌಡರನ್ನು ಡಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷರಾಗಿದ್ದಂದಿನಿಂದಲೂ ನಾನು ಬಲ್ಲೆ.

ಶ್ರೀ ಬಿ. ಹುಚ್ಚೇಗೌಡ.—ಇದು ನಾಲ್ಕು ವರ್ಷಗಳಿಂದ delay ಆಗಿವೆ. ತಾವು credit ತೆಗೆದುಕೊಳ್ಳುವ ಹಾಗಿಲ್ಲ. When the letter is delayed for 4 years, how can the Minister take the credit ?

Sri H. M. CHANNABASAPPA.—I am grateful to Sri Hutche Gowda. He wants me to work more efficiently and bring in more money and see that the wealth hidden within the earth is brought out to the benefit of the country. ಖಂಡಿತವಾಗಿ ತೆರಿಗೆ ಹಾಕುವುದು ಬಹಳ ಹೆಚ್ಚಾಗಿದೆ. ಜನಗಳಿಗೆ ಹೆಚ್ಚಿಗೆ ತೆರಿಗೆ ಹಾಕುವುದಕ್ಕೆ ಬದಲಾಗಿ ಬೇರೆ ಮಾರ್ಗಗಳನ್ನು ಅನುಸರಿಸಬೇಕು. ಮೊದಲು ಭೂಗರ್ಭದ ಸಂಪತ್ತನ್ನು ತೆಗೆದು ಜನಗಳ ಅನುಕೂಲಕ್ಕೆ ಮತ್ತು ದೇಶಾಭಿವೃದ್ಧಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಬೇಕೆಂದು ಹೇಳಿದರು. ಅದು ಬಹಳ ಅತ್ಯುತ್ತಮವಾದ ಸಲಹೆ.

6-30 P.M.

ಇದನ್ನು ಆ ರೀತಿ ಮಾಡಬೇಕೆಂಬ ಸದುದ್ದೇಶದಿಂದ ಈಗ ನಾವು ಭೂಗರ್ಭದಲ್ಲಿರುವ ಸಂಪತ್ತನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಬೇಕೆಂದು ಸ್ವಲ್ಪ ಬಿಗಿ ಮಾಡಿದ್ದರಿಂದ, ಕೆಲವು ಜನರು ಅಲ್ಲಲ್ಲಿ ನಮಗೆ ಬಹಳ ಕಷ್ಟವಾಗಿದೆಯೆಂದು ಹೇಳುವುದು ಸ್ವಾಭಾವಿಕ. ನ್ಯಾಯಕ್ಕೆ ವಿರೋಧವಾಗಿ, ಕಾನೂನಿಗೆ ವಿರೋಧವಾಗಿ ನಾವು ಯಾರಿಗಾದರೂ ತೊಂದರೆ ಕೊಟ್ಟಿದ್ದರೆ ಅದು ತಪ್ಪು, ನಾನು ಒಪ್ಪಿಕೊಳ್ಳುತ್ತೇನೆ. ಇಂಥ ತಪ್ಪಾಗಿದೆಯೆಂದು ತೋರಿಸಿದ ಪಕ್ಷದಲ್ಲಿ ಕೂಡಲೆ ಇಪ್ಪತ್ತನಾಲ್ಕು ಗಂಟೆಯೊಳಗೆ ಅದನ್ನು ಸರಿಪಡಿಸಲು ಸಿದ್ಧವಾಗಿದ್ದೇನೆ.

ಇನ್ನೊಂದೆರಡು ವಿಷಯಗಳಿಗೆ ಉತ್ತರ ಹೇಳಬೇಕಾಗಿದೆ. ಕೆಲವು ದಿವಸಗಳಿಂದ ಉತ್ಪತ್ತಿ ಕಡಮೆಯಾಗಿದೆ ಎಂಬ ವಾದವನ್ನು ಮುಂದಿಟ್ಟಿದ್ದಾರೆ. ಹಿಂದಿನಂತೆ ಸುಲಭವಾಗಿ ಈಗ ಲೈಸೆನ್ಸ್ ಸಿಕ್ಕುವುದಿಲ್ಲ ಈಗ ಕಷ್ಟ, ನಿಜ. ಒಬ್ಬ ಮನುಷ್ಯ ಎಷ್ಟು ಭೂಮಿಯಲ್ಲಿ ಅಗೆಯುವುದು ಸಾಧ್ಯ ಎಂಬುದನ್ನು ನೋಡಬೇಕು. ಒಂದೆಕರೆ, ಎರಡೆಕರೆಯಲ್ಲಿ ಮಾಡಬಹುದು, ಅದು ಬಿಟ್ಟು ನೂರಾರು, ಸಾವಿರಾರು ಎಕರೆಯನ್ನು ಒಬ್ಬನಿಗೆ ಕೊಟ್ಟರೆ, ಇದು social pattern of societyಗೆ ವಿರೋಧ. ಒಬ್ಬ ಮನುಷ್ಯನಿಗೆ ಸಾವಿರ ಎಕರೆ ಕೊಡಬೇಕೆಂದು ಹೇಳುವುದು ನಮ್ಮ ಈ ಸಮಾಜವಾದಿ ತತ್ವಕ್ಕೆ ಸಲ್ಲದು. ಇದನ್ನು ಸರಿಪಡಿಸಬೇಕೆಂದು ಪ್ರಯತ್ನ ಮಾಡಿದರೆ, ಅದಕ್ಕೆ ಅಡ್ಡಿ ಆತಂಕಗಳು ಬರುತ್ತವೆ. ಒಬ್ಬೊಬ್ಬ ಮನುಷ್ಯ ಸುಮ್ಮನೆ ಲೈಸೆನ್ಸ್‌ಗಾಗಿ ಅರ್ಜಿ ಹಾಕಿಕೊಂಡು ಪ್ರತಿಸಾರಿಯೂ ಅವನಿಗೇ ಕೊಟ್ಟರೆ, ಅವನಿಗೆ monopoly ಬರುತ್ತದೆ. ಬಸ್ ಲೈಸೆನ್ಸ್ ತೆಗೆದುಕೊಂಡಹಾಗೆ ತೆಗೆದುಕೊಂಡು, ಅದನ್ನು ಹೇಗೆ ತಿಂಗಳಿಗೆ ನೂರು, ಇನ್ನೂರು, ಸಾವಿರ ರೂಪಾಯಿಗಳಿಗೆ ಮಾರಿಕೊಂಡು ಜೀವನ ಮಾಡುತ್ತಿದ್ದರೋ ಹಾಗೆ ಈ ಲೈಸೆನ್ಸನ್ನೂ ಮಾರಿಕೊಂಡು ಜೀವನ ಮಾಡಿಕೊಳ್ಳುವ ಜನರೂ ಇದ್ದಾರೆ. ಇದನ್ನು ತಪ್ಪಿಸಿ ಸರಿಪಡಿಸುವುದು ತಪ್ಪೆ ಎಂಬುದನ್ನು ಮಾನ್ಯ ಸದಸ್ಯರೇ ಹೇಳಲಿ. ಕಾನೂನಿನಲ್ಲಿ ಅವಕಾಶವಿದೆ ಎಂದು ಮಾರುವುದಕ್ಕೆ ಹೊರಟು ಐದು, ಹತ್ತು ಸಾವಿರ ರೂಪಾಯಿ ಸಂಪಾದನೆ ಮಾಡುತ್ತಾರೆ. ಕಾನೂನು ದೃಷ್ಟಿಯಿಂದ ಒಬ್ಬರನ್ನು ಸಾಹುಕಾರರಾಗಿ ಮಾಡಿ ಇನ್ನು ಮಿಕ್ಕವರನ್ನು ಗರೀಬರಾಗಿ ಮಾಡುವುದು ಕಾನೂನಲ್ಲ. ಈ ಸಂಬಂಧವಾಗಿ ಕೆಲವು ಅಂಕಿ ಅಂಶಗಳನ್ನು ಕೊಟ್ಟರೆ ಅವುಗಳು ತಮ್ಮಷ್ಟಕ್ಕೆ ತಾವೇ ಮಾತನಾಡುತ್ತವೆ.

ಉತ್ಪತ್ತಿಯ ವಿಷಯ ಹೇಳಿದರು. ಜಿಯಲಾಜಿಕಲ್ ಇಲಾಖೆಯಲ್ಲಿ royalty, rent, other receipts, Bureau of Mineral Department ಈ ರೀತಿ ಇದೆ :—

Last year's receipts... 9,12,000 rupees.

Year before last year. 6,31,000 ,,

and year before ... 4 lakhs and odd.

I will give you the figures for the last six years.

		Rs.
1945-46	...	1,12,000
1946-47	...	1,00,000
1950-51	...	1,39,000
1952-53	...	4,27,000
1953-54	...	6,31,000
1954-55	...	9,12,000

1955-56 up to 13th March 1956 Rs. 12,13,250-5-2 ಹೀಗೆ ಬಂದಿದೆ. ಹೀಗಿರುವಾಗ ಉತ್ಪತ್ತಿ ಕಡಮೆಯಾಗಿದೆ ಎನ್ನುವುದು ಸರಿಯೇ ?

ಶ್ರೀ ಬಿ. ಹುಚ್ಚೇಗೌಡ.—ಸಿಬ್ಬಂದಿ ಖರ್ಚು ಎಷ್ಟಾಗಿದೆ ಎಂಬ ವಿಷಯ ಹೇಳಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನೂ ಹೇಳುತ್ತೇನೆ.

ಇದರಲ್ಲಿ ಉತ್ಪತ್ತಿಯನ್ನು ಇನ್ನೂ ಹೆಚ್ಚು ಮಾಡಬೇಕೆಂಬಿದೆ. ಹನ್ನೆರಡು ಲಕ್ಷದಿಂದ ಒಂದು ಕೋಟಿ ರೂಪಾಯಿ ಆಗಬೇಕು ; ಹಾಗಾದರೆ, I shall be exceedingly happy and I am sure, in the years to come, it is possible to make one crore and even two crores and I and you will live to see that day.

ಇನ್ನು ಶ್ರೀ ಭೀಮಪ್ಪನಾಯಕರ ಇಡೀ ವರದಿಯನ್ನು ಬದಿಗೊತ್ತಿದ್ದಾರೆಂದು ಹೇಳಿದರು. ಅದನ್ನು ಕೇಳಿ ನನ್ನ ಮನಸ್ಸಿಗೆ ಬಹಳ ನೋವಾಯಿತು. ಅವರು ನನ್ನ ಮಿತ್ರರು. ನಾವು ಅವರ ವರದಿಯನ್ನು ಹಿಂದಕ್ಕೆ ಹಾಕಿಲ್ಲ. ಹಿಂದಕ್ಕೆ ಹಾಕುವುದು ಕಷ್ಟ. ಶ್ರೀಮಾನ್ ಭೀಮಪ್ಪನಾಯಕರ ವರದಿ ಸರ್ಕಾರಕ್ಕೆ ಬಂದದ್ದು 1955ನೆಯ ಇಸವಿ ಫೆಬ್ರವರಿಯಲ್ಲಿ. ಕೇವಲ ನಾಲ್ಕೈದು ತಿಂಗಳೊಳಗಾಗಿ ಅದನ್ನು ಪರಿಶೀಲನೆ ಮಾಡಿ ಏನೇನು ಕಾರ್ಯಕ್ರಮಗಳನ್ನು ಈಗಿರತಕ್ಕ ಪರಿಸ್ಥಿತಿಯಲ್ಲಿ ತೆಗೆದುಕೊಳ್ಳಬೇಕೋ ಅಷ್ಟನ್ನೂ ಸರ್ಕಾರ ತೆಗೆದುಕೊಂಡಿದೆ. ಉದಾಹರಣೆಗೆ ಹೇಳುವು

(ಶ್ರೀ ಎಚ್. ಎಂ. ಚನ್ನಬಸಪ್ಪ.)

ದಾದರೆ ಭೀಮಪ್ಪನಾಯಕರ ಸಮಿತಿ ವರದಿಯ 96ನೆ ಪುಟದಲ್ಲಿ ಎಂಟು ಮುಖ್ಯವಾದ ಶಿಫಾರ್ಸುಗಳನ್ನು ಮಾಡಿದ್ದಾರೆ. ಇವುಗಳಲ್ಲಿ ಐದು ಶಿಫಾರ್ಸುಗಳನ್ನು ಜಾರಿಗೆ ತರತಕ್ಕ ವ್ಯವಸ್ಥೆ ಮಾಡಿದ್ದೇವೆ.

ಒಬ್ಬ ಸದಸ್ಯರು.—ಆ ವರದಿ ಬಂದು ಆಗಲೇ ಒಂದು ವರ್ಷವಾಯಿತಲ್ಲವೇ ?

Sri H. M. CHANNABASAPPA.—I ask you, in the history of the administration, has any report been as quickly implemented as this report ? You cannot accuse the Government of indifference to this report. On the other hand, in the heart of hearts, you will congratulate the Government for taking prompt action in this matter. ಮೊದಲನೆಯದಾಗಿ Utilisation of sulphide deposits in Chitaldrug District. ಇದಕ್ಕಾಗಿ ಪಂಚವಾರ್ಷಿಕ ಯೋಜನೆಯಲ್ಲಿ 2,50,000 ರೂಪಾಯಿಗಳನ್ನು ಸೇರಿಸಿದ್ದೇವೆ. ಎರಡನೆಯದು Expansion of Chromite mining industry by putting beneficiation and concentration plant. ಇದಕ್ಕಾಗಿ ಐದು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇನೆ. ಮೂರನೆಯದು Starting of China Clay Industry near Thirthahalli in Malnad area ಇದಕ್ಕಾಗಿ ಆರು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ನಾಲ್ಕನೆಯದು Putting beneficiation plant and upgrading manganese ores in Kumsi area. ಇದಕ್ಕೆ ಐದು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆಂದು ತಿಳಿಸಿದೆ. ಮತ್ತೆ ಐದನೆಯದು Organisation of diamond drilling units ಇದಕ್ಕಾಗಿ ಎರಡೂವರೆ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈ ರೀತಿಯಾಗಿ ಅವರು ಮಾಡಿರತಕ್ಕ ಎಂಟು ಶಿಫಾರ್ಸುಗಳಲ್ಲಿ ಐದನ್ನು ಒಪ್ಪಿಕೊಂಡು ಅದಕ್ಕೆ ಅವಶ್ಯಕವಾದ ಹಣವನ್ನು ಒದಗಿಸಿ, ಆ ಬಗ್ಗೆ ಕಾರ್ಯಕ್ರಮವನ್ನು ಇದೇ ಏಪ್ರಿಲ್ ಒಂದನೇ ತಾರೀಖಿನಿಂದ ತೆಗೆದುಕೊಳ್ಳಬೇಕೆಂದು ನಿರ್ಧರ ಮಾಡಿರುವಾಗ ಈ ವರದಿಯನ್ನು ಒದಿಗೊತ್ತಿದ್ದೇವೆಂದು ಹೇಳಿ ನನ್ನ ಮನಸ್ಸನ್ನು ನೋಯಿಸಿದರಲ್ಲ ಎಂದು ಖೇದವಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಆರು ಲಕ್ಷ ಉತ್ಪತ್ತಿ ಇದ್ದದ್ದು 12 ಲಕ್ಷವಾಗಿದೆ ಎಂದು ತಿಳಿಸಿದಿರಿ. ರೇಟು ಒಂದಕ್ಕೆರಡರಷ್ಟು ಜಾಸ್ತಿ ಮಾಡಿದ್ದರಿಂದಲ್ಲವೇ ಹೀಗೆ ಹೆಚ್ಚಾಗಿ ಬಂದಿರುವುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂಬತ್ತು ಲಕ್ಷದಿಂದ 12 ಲಕ್ಷವಾಗಿದೆ. I will explain to you in detail, even to the last pie. I am prepared to stand all the criticism. ಮತ್ತೆ ಸರಿಯಾದ ಪ್ರಗತಿಯನ್ನು ಹೊಂದಬಹುದಾಗಿತ್ತು, ಆದರೆ ನಾಯಕರ ವರದಿಯನ್ನು ಅನಾದರಣೆಯಿಂದ ನೋಡಿದ್ದಾರೆ ಎನ್ನುವುದು ಸರಿಯಲ್ಲವೆಂಬುದನ್ನು ತಮ್ಮ ಮನಸ್ಸಿಗೆ ಮುಂದಿಟ್ಟು ಮಾಡಿಕೊಡಲು ಹೇಳುತ್ತಿದ್ದೇನೆ. ಮತ್ತೆ ಇಚೀಚೆಗೆ ಬಹಳ complaints ಬರುತ್ತಿವೆ, ಕಾನೂನುಗಳನ್ನು ಮೀರಿ ಕೆಲವರು ನಡೆಯುತ್ತಿದ್ದಾರೆಂದು. ಅಂಥ ಜನಗಳಿಗೆ ಒಂದು ಬಾಗಿಲನ್ನು ತೋರಿಸಿ ಇಲ್ಲಿಯೇ ಹೋಗಬೇಕು, ಎಂದು ಹೇಳಲು ಸಾಧ್ಯವಾಗಲಾರದು. ಅವರುಗಳ ಮೇಲೆ ಕಾನೂನು ಬದ್ಧವಾದ ವ್ಯವಹಾರ ನಡೆಯಬೇಕು. ಕಾನೂನು ತಪ್ಪಿ ಕೆಲವರು ನಡೆಯುತ್ತಿದ್ದಾರೆ ಎನ್ನುವುದನ್ನು ಮಾತ್ರ ಒಪ್ಪಿಕೊಳ್ಳುತ್ತಿದ್ದೇನೆ.

ಎಸ್. ವಿ. ಸುಬ್ರಹ್ಮಣ್ಯಂರವರ ವಿಚಾರ ಪ್ರಸ್ತಾಪ ಮಾಡಿದರು. ಆ ವಿಷಯ ಜನರಿಗೆ ತಿಳಿಯಬೇಕು. ಅದು ತಾವು ಹೇಳುವುದಲ್ಲ. ಎಲ್ಲೆ ಮೀರಿ ಸರ್ಕಾರಿ ಜಾಗದಲ್ಲಿ ಗಣಿ ತೆಗೆದಿದ್ದಾರೆಂಬ ಅಪಾದನೆ ಈ ದಿವಸ ಬಂದಿದೆ. ಒಂದ್ ದಿವಸ ನಾನು ಅಜಮಾಯಿಷಿ ಮಾಡಲು ಹೋದಾಗ ಶ್ರೀ ಹುಚ್ಚೇಗೌಡರೂ ಸಹ ನನ್ನ ಜೊತೆಯಲ್ಲಿದ್ದರು, ಬಿಸಿಲಿನಲ್ಲಿ ಗುಡ್ಡವನ್ನು ಹತ್ತಿ ನೋಡಿಕೊಂಡು ಬರುವಾಗ ಮೈಯಲ್ಲೆಲ್ಲಾ ಬೆವರು ಬಹಳವಾಗಿ ಹರಿದು ಬಟ್ಟೆಯಲ್ಲಾ ನೆನೆಯಿತು. ಅವರು ಪಕ್ಕದಲ್ಲಿರುವ ಬೇರೆ ಸರ್ಕಾರಿ ಜಮೀನಿನಲ್ಲಿ ತೆಗೆದರೆಂಬ ಅಪಾದನೆಯಿತ್ತು. ಅದನ್ನು ಪೋಲೀಸಿನವರು ಇನ್ವೆಸ್ಟಿಗೇಟ್ ಮಾಡಿದರು. ಆಗ ಹಿಂದಿನ ಡೈರೆಕ್ಟರು ಬಂದು ನಿರ್ಧಾರಮಾಡಿ ಜಾಗ ತೋರಿಸಿದ್ದರೆಂದು ವಾದ ಮಾಡಿದರು. ಹಿಂದಿನ ಡೈರೆಕ್ಟರು ಬಂದು ತೋರಿಸಿದ್ದರೆಂದು ಹೇಳಿದ್ದರಿಂದ ಕ್ರಿಮಿನಲ್ ಅಪರಾಧವಾಗುವುದಿಲ್ಲವೆಂದು ನಿರ್ಧಾರವಾಯಿತು. ಕ್ರಿಮಿನಲ್ ಇಂಟೆನ್ಷನ್ ಇಲ್ಲವೆಂದು ಕೋರ್ಟಿನವರು ಅಭಿಪ್ರಾಯಪಟ್ಟರು. ಆದ್ದರಿಂದ ಅದು ಅಪರಾಧಕ್ಕೆ ಗುರಿಯಾಗಿಲ್ಲ. ಅದರಲ್ಲೂ ಸರ್ಕಾರದವರು ನಿರ್ದಿಷ್ಟವಾಗಿ ತಪ್ಪು ಮಾಡಿದವರನ್ನು ಶಿಕ್ಷೆ ಮಾಡಲು ಸ್ವಲ್ಪವೂ ಹಿಂದೆಗೆಯುವುದಿಲ್ಲವೆಂದು ಘಂಟಾ ಘೋಷವಾಗಿ ತಿಳಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಹಿಂದೆ ಡೈರೆಕ್ಟರು ತೋರಿಸಿದ್ದರೇ ಎಂಬುದನ್ನು ಪರಿಶೀಲಿಸಲಾಗಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಡೈರೆಕ್ಟರೇ ಹೇಳಿದರು. ಆದ್ದರಿಂದಲೇ ಅಪರಾಧವಿಲ್ಲವೆಂದು ತೀರ್ಮಾನವಾಯಿತು.

Sri D. DEVARAJ URS.—Was the Director made responsible for that ?

Sri H. M. CHANNABASAPPA.—He is not there as a Director.

ಆ ಜಮೀನು ಸರ್ಕಾರದ್ದು ಎಂದು ಅವರು ಒಪ್ಪಿಕೊಂಡಿದ್ದಾರೆ, ಅದನ್ನು ಕೊಡಿ ಎಂದು ಹೇಳುತ್ತಿದ್ದಾರೆ. ಅದಾಗಬೇಕು, ಸರಿಯಾಗಿ ಪರೀಕ್ಷೆ ಮಾಡುತ್ತೇವೆ, ಅದು ಬೇರೆ ವಿಚಾರ. ಆದ್ದರಿಂದ ಆ ವಿಷಯದಲ್ಲಿ ತಪ್ಪಭಿಪ್ರಾಯ ಇಟ್ಟುಕೊಳ್ಳಬೇಕಾಗಿಲ್ಲ. ಎಲ್ಲಾದರೂ ತಪ್ಪು ಮಾಡಿದ್ದಾರೆಯೆ ಎಂದು ಕೇಳಿದರು. ಒಬ್ಬ ಮನುಷ್ಯ ತಪ್ಪು ಮಾಡಿದ್ದ; ಪಿ. ಎಲ್. ಇಟ್ಟುಕೊಂಡು ಕಮರ್ಷಿಯಲ್ ಮೈನಿಂಗ್ ಹೆಚ್ಚಾಗಿ ಮಾಡಿದ್ದರಿಂದ 9,600 ರೂಪಾಯಿಗಳ ಜುಲ್ಮಾನೆ ಹಾಕಿದ್ದೇವೆ. ಅದಕ್ಕಿಂತಲೂ ಹೆಚ್ಚಿನ ಕಠಿಣ ಶಿಕ್ಷೆ ವಿಧಿಸುವುದಕ್ಕೆ ಸಾಧ್ಯವೆ ?

ಶ್ರೀ ಬಿ. ಹುಚ್ಚೇಗೌಡ.—ಅದು ಸಾಲದು, ಇನ್ನೂ ಕಠಿಣವಾದ ಶಿಕ್ಷೆ ವಿಧಿಸಬೇಕಾಗಿತ್ತು.

Sri H. M. CHANNABASAPPA.—That is the maximum punishment that could be imposed under the law. I would like to inform the Hon'ble Members that there is absolutely no intention whatsoever on the part of the Government to give any trouble to anybody except those who violate the law and act in a manner which is

detrimental to the interest of the State. ಇದೇ ಪರಮಾವಧಿ ಶಿಕ್ಷೆ, ಕಾನೂನು ಪ್ರಕಾರ ಉಗ್ರವಾದ ಶಿಕ್ಷೆ. ಆದ್ದರಿಂದ ತಪ್ಪು ಮಾಡಿದವರಿಗೆ ಉಗ್ರವಾದ ಶಿಕ್ಷೆ ಕೊಡಬೇಕೆಂಬುದೇ ಸರ್ಕಾರದ ಆಶಯ. ಜನರ ಹಿತ ಸಾಧನೆ ಮಾಡಬೇಕೆಂಬ ವಿಷಯದಲ್ಲಿ ನಮಗೂ ನಿಮಗೂ ಭಿನ್ನಾಭಿಪ್ರಾಯವಿಲ್ಲ. ಯಾರಿಗೂ ತೊಂದರೆಯಾಗದಂತೆ ದೇಶದ ಹಿತವನ್ನು ಸಾಧಿಸಬೇಕಾಗಿದೆ.

ಇನ್ನೊಂದು ವಿಷಯ ಹೇಳಿದರು. ಪಿ. ಎಲ್. ನಿಂದ ಎಂ. ಎಲ್. ಗೆ ಟ್ರಾನ್ಸ್‌ಫರ್ ಮಾಡಿದೆ, ಮೈನಿಂಗ್ ಲೀಸ್ ಹೀಗಾಗಿದೆ ಎಂದು ಹೇಳಿದರು. ಅದರಲ್ಲಿ ಮ್ಯಾಂಗನೀಸೇ ಇಲ್ಲ, ಗುಡ್ಡದಿಂದ ಮಳೆಯಲ್ಲಿ ಜಾರಿಕೊಂಡು ಬಂದಿದೆ ಎಂದು ಎಕ್ಸ್‌ಪ್ಲನೇಷನ್ ಕೊಟ್ಟಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಅಷ್ಟು ತೆಗೆದರೂ 40 ಟನ್ ತೆಗೆದರೂ ನಿಮ್ಮ ಇಲಾಖೆ ಏನು ಮಾಡಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ಯಾರು ಜವಾಬ್ದಾರರೆಂದು ಕೂಲಂಕಷವಾಗಿ ಪರಿಶೀಲಿಸಿ ಯಾರನ್ನು ಶಿಕ್ಷೆಗೆ ಗುರಿ ಮಾಡಬೇಕೋ ಅವರನ್ನು ಗುರಿಮಾಡಲು ಆಜ್ಞೆ ಮಾಡಿದೆ. ಆದ್ದರಿಂದ ಶ್ರೀ ಹುಚ್ಚೇಗೌಡರು ಈಗ ಸಮಾಧಾನ ಪಡಬೇಕು. ಇನ್ನೊಂದು ಸಂದರ್ಭ ಬಂದಾಗ ಶಿಕ್ಷೆ ಮಾಡಿರುವುದನ್ನು ತಿಳಿಸುತ್ತೇನೆ. It is a decision of the court of law. I cannot question it. It is not my decision. If it were left to my decision, things would have been different.

ಮತ್ತೆ ಈ ವಿಚಾರದಲ್ಲಿ ನಿಧಾನವಾಯಿತು ಎಂದು ಹೇಳಿದರು. ಆದರೆ ಯಾವ ಯಾವ ಕೆಲಸಗಳು ಈ ವಾದ-ವಿವಾದಗಳಿಗೆ ಆಸ್ಪದವಿಲ್ಲದಂತಿದ್ದವೋ ಅಂಥವುಗಳು ಮಾತ್ರ ಡಿಲೇಯಾಗಿಲ್ಲ. ಆದರೆ ಯಾವುದರ ಬಗ್ಗೆ ವಾದ-ವಿವಾದಕ್ಕೆ ಅವಕಾಶವಿತ್ತೋ ಅಂಥ ಕಡೆಗಳಲ್ಲಿ ಸ್ವಲ್ಪ ಡಿಲೇ ಆಗಿದೆ. ಅದು ಸ್ವಾಭಾವಿಕವಾದದ್ದು. ಈ ದಿವಸ ಸರ್ಕಾರದಲ್ಲಿ ಎಂದರೆ ನನ್ನ ಬಳಿ ಆ ರೀತಿ ಎರಡು ವರ್ಷಗಳಿಂದಲೂ ಪೆಂಡಿಂಗ್ ಆಗಿರತಕ್ಕಂಥ ಕಾಗದಗಳೊಂದೂ ಇಲ್ಲ. ಎಲ್ಲೋ ಕೆಲವು ಕಾಗದಗಳು ಮಾತ್ರ ಆರುತಿಂಗಳೊಳಗೇ ಇರತಕ್ಕಂಥವುಗಳು ನನ್ನ ಬಳಿ ಇದ್ದರೆ ಹೆಚ್ಚಾಯಿತು. ಆದರೆ ಈ ಪೇಪರುಗಳನ್ನು ಫೈಸಲ್ ಮಾಡತಕ್ಕ ಸಂದರ್ಭದಲ್ಲಿ ಸಹ ನಾವು ಅನೇಕ ವಿಷಯಗಳನ್ನು ವಿಮರ್ಶೆ ಮಾಡಿ ನೋಡಿ ಆರ್ಡರ್ ಮಾಡಬೇಕಾಗಿರುತ್ತದೆ. ಏಕದಂ ಯಾವುದನ್ನೂ ಹಾಗೇ ಆರ್ಡರ್ ಮಾಡುವುದಕ್ಕಾಗುವುದಿಲ್ಲ. ಈ ಭೂಮಿಯನ್ನು ಅಗೆದು ಹಣವನ್ನು ಸಂಪಾದನೆ ಮಾಡತಕ್ಕಂಥ ಜನಗಳಿಗೂ ನನಗೂ ಯಾವ ಸಂಬಂಧವೂ ಇಲ್ಲ. ಅವರಿಗೂ ನನಗೂ ಯಾವ ವ್ಯವಹಾರವೂ ಇಲ್ಲ. ಈ ಹಿಂದೆ ನಾನು ಒಂದಾವರ್ತಿ ಡೆಲ್ಲಿಗೂ ಮತ್ತು ಬೊಂಬಾಯಿಗೂ ಹೋಗಿದ್ದಾಗ್ಗೆ ಅಲ್ಲಿ ಕೆಲವು ಜನರು ಬಂದು ನನಗೊಂದು ಟೀ ಪಾರ್ಟಿಯನ್ನು ಕೊಡಲು ಉದ್ಯುಕ್ತರಾದರು. ಆಗ ನಾನೇ ಏನಿದು ! ನಿಮಗೂ ನನಗೂ ಏನು ಸಂಬಂಧ ? 'ನೀವೇಕೆ ನನಗಾಗಿ ಇದೊಂದು ಟೀ ಪಾರ್ಟಿ ಕೊಡುತ್ತಿದ್ದೀರಿ !' ಎಂದು ಕೇಳಿದ್ದಕ್ಕೆ ಅವರು ಈ ಸಂಬಂಧವನ್ನು ತಿಳಿಸಿದರು. I am only putting it that there are very deep things in this affair. Therefore, a certain amount of time is required, a certain amount of strenuous effort is required. I hope they will not blame me for being a little hard, and if I am hard, it is in the interests of the nation. ಯಾವುದೋ ಒಂದು ನಿದರ್ಶನವನ್ನು ಪ್ರಸ್ತಾಪ ಮಾಡುತ್ತಾ ಅವರು ಹೇಳಿದರು. ಯಾವ ಕಾರಣಗಳಿಂದ ಹಾಗಾಯಿತು ಎಂಬುದನ್ನೆಲ್ಲಾ ಈ ಮಾನ್ಯ ಸಭೆಗೆ ತಿಳಿಸಿ ಸದಸ್ಯರ ಮನಸ್ಸಿನಲ್ಲಿರತಕ್ಕಂಥ ಸಂಶಯಗಳನ್ನು ನಿವಾರಣೆ ಮಾಡತಕ್ಕದ್ದು ಸರ್ಕಾರದವರ ದೃಷ್ಟಿಯಿಂದ ಅತ್ಯಾವಶ್ಯಕ. ಅದಕ್ಕಾಗಿ ನಾನೀಗ ಈ ವಿಚಾರಗಳನ್ನೆಲ್ಲಾ ತಿಳಿಸಬೇಕಾಗಿ ಬಂತು. ಯಾವ ವಿಷಯದಲ್ಲಾಗಲಿ—ಯಾವ ಒಂದು ಆಲೋಚನೆಯಿದ್ದರೂ ಅದನ್ನು ಈ ಸಭೆಯಲ್ಲಿ ಹೊರಗೆಡುವಲು ನನಗೆ ಯಾವ ಅಭ್ಯಂತರವೂ ಇಲ್ಲ. ಆದರೆ ಇದೇ ಸಂದರ್ಭದಲ್ಲಿ ಕೆಲವರ ವಿಚಾರದಲ್ಲಿ ಬೇಗ ಕೆಲಸಗಳಾಗಿವೆ, ಮತ್ತೆ ಕೆಲವರ ವಿಚಾರಗಳಲ್ಲಿ ನಿಧಾನವಾಗಿ ಆಗಿವೆ ಎಂಬುದಾಗಿ ಹೇಳಿದರು. ಆದರೆ ಅದರಲ್ಲಿ ಅಂಥ ಯಾವ ಒಂದು ಸ್ವಾರ್ಥ ದೃಷ್ಟಿಯನ್ನೂ ಇಟ್ಟುಕೊಂಡು ಮಾಡಿರುವುದಿಲ್ಲ. ಆ ರೀತಿ ಒಂದು ಸ್ವಾರ್ಥ ದೃಷ್ಟಿಯನ್ನಿಟ್ಟುಕೊಂಡು ಕೆಲಸ ಮಾಡಲಾಗಿದೆ ಎಂದು ಯಾರಾದರೂ ಅದನ್ನು ದೃಢಪಡಿಸಿದ ಪಕ್ಷದಲ್ಲಿ ಆ ಹೊತ್ತೇ ಈ ಸರ್ಕಾರ ರಾಜೀನಾಮೆ ಕೊಡುವುದಕ್ಕೆ ಸಿದ್ಧವಾಗಿದೆ.

ಒಬ್ಬ ಸದಸ್ಯರು.—ಈಗ ತಮ್ಮ ಒಬ್ಬರ ವಿಷಯ ಮಾತ್ರ ಹೇಳಿ !

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನೂ ಹಾಗೆ ರಾಜೀನಾಮೆ ಕೊಡುವುದಕ್ಕೆ ಸಿದ್ಧ. ಸಮಸ್ತ ಸರ್ಕಾರವೂ ಸಿದ್ಧ. ನನ್ನ ವಶಕ್ಕೆ ಈ ಮೈನಿಂಗ್ ಕಂಪೆನಿಗಳು ಬಂದಮೇಲೆ ನಾನು ದೇಶದ ಹಿತದೃಷ್ಟಿಯಿಂದ ಸುಮಾರು 150-180 ಜನ ಆ ಮೈನಿಂಗ್ ಪೀಪಲ್‌ಗಳನ್ನು ಆಹ್ವಾನಿಸಿ ಬೆಳಗಿನ ಎಂಟು ಘಂಟೆಯಿಂದ ಮಧ್ಯಾಹ್ನ ಮೂರು ಘಂಟೆಗಳವರೆಗೂ ಮೀಟಿಂಗ್ ನಡೆಸಿ ಅನೇಕ ವಿಷಯಗಳನ್ನು ಚರ್ಚೆ ಮಾಡಿ ಇಂಥಾದ್ದು ಸಾಧ್ಯ—ಇಂಥಾದ್ದು ಅಸಾಧ್ಯ ಎಂಬ ತೀರ್ಮಾನಕ್ಕೆ ಬಂದು ಈ ಕೆಲಸ ಕಾರ್ಯಗಳನ್ನು ಒಂದು ಸುವ್ಯವಸ್ಥಿತ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿರಲಾಗಿದೆ. ಈ ವಿಚಾರದಲ್ಲಿ ಇಲ್ಲಿಯವರೆಗೂ ಯಾವ ತಕರಾರುಗಳೂ ನನ್ನಲ್ಲಿಗೆ ಬಂದಿಲ್ಲ. ಆದರೆ ಯಾರೋ-ಎಂದೋ-ಎಲ್ಲಿಯೋ ಹೇಳಿದ್ದಂಥ ವಿಚಾರಗಳನ್ನು ಕೇಳಿಕೊಂಡಿದ್ದಂಥವರು ಕೆಲವು ಜನ ಈ ರೈಲಿನಲ್ಲಿ-ಬಸ್ಸಿನಲ್ಲಿ-ಲಾರಿಗಳಲ್ಲಿ ಪ್ರಯಾಣ ಮಾಡುತ್ತಿರುವಾಗ ಏನೂ ತಿಳಿಯದಂಥ ಜನರ ಮುಂದೆಲ್ಲಾ ಬಾಯಿಗೆ ಬಂದಹಾಗೆ ಅಪಪ್ರಚಾರ ನಡೆಸುವುದಕ್ಕೆ ಬದಲಾಗಿ ಅಂಥ ಜನರು ಏಕೆ ನೇರವಾಗಿ ಬಂದು ನನ್ನ ಎದುರಿನಲ್ಲಿ ಕೇಳಬಾರದೆಂದು ಹೇಳುತ್ತೇನೆ.

When they come and place facts before me, I am prepared to accommodate to the extent law permits me, to the extent equity permits me, to the extent nation's interests permit me.

ಶ್ರೀ ಬಿ. ಹುಚ್ಚೇಗೌಡ.—ಹಾಗೆ ನನಗೆ ತಿಳಿಸುವುದಕ್ಕೂ ಬೇಕಾದಷ್ಟು ವಿಚಾರಗಳಿವೆ.

Sri H. M. CHANNABASAPPA.—It is enough that I say that I am prepared to stand any test or any criticism on any floor and in any place.

(SRI H. M. CHANNABASAPPA.)

ಶ್ರೀ ದೇವರಾಜ ಅರಸ್‌ಅವರು ಕೆಲವು ಸಲಹೆಗಳನ್ನು ಕೊಟ್ಟರು. ದೇಶದ ಹಿತದೃಷ್ಟಿಯಿಂದ ಒಂದು ಸಿಂಡಿಕೇಟ್ ಮಾಡಿ ವ್ಯವಹಾರ ನಡೆಸಬೇಕೆಂದು ಹೇಳಿದರು. ಈಗಾಗಲೇ ಸರ್ಕಾರದವರು ಯೋಚನೆ ಮಾಡಿ ಯಾವ ರೀತಿ ಸಿಂಡಿಕೇಟ್ ಮಾಡಬೇಕೆಂಬುದರ ಬಗ್ಗೆ ವ್ಯವಸ್ಥೆ ಮಾಡಿ ಯೋಜನೆಯನ್ನು ಸಹ ಮಾಡಿಸಿದ್ದಾರೆ, ಅದನ್ನು ಸಾರ್ವಜನಿಕರಲ್ಲಿ ಗಣಿ ಕೆಲಸದಲ್ಲಿ ಅನುಭವ ಇರತಕ್ಕವರಿಗೆ ಕೊಟ್ಟಿದ್ದೇನೆ. ನಾವೂ, ಅವರೂ ಎಲ್ಲರೂ ಸೇರಿ, ನಮ್ಮ ಅನುಭವ ಅವರ ಅನುಭವವನ್ನು ಉಪಯೋಗಿಸಿಕೊಂಡು ಆದಷ್ಟು ಬೇಗ ಕಾರ್ಯರೂಪಕ್ಕೆ ತರಲು ಪ್ರಯತ್ನ ಮಾಡುತ್ತೇನೆ.

ಶ್ರೀ ಪಟ್ಟಾಭಿರಾಮನ್‌ರವರು ಬಹಳ ಉತ್ತಮವಾದ ಸಲಹೆಗಳನ್ನು ಕೊಟ್ಟರು. ವರಮಾನ ಹೆಚ್ಚಾಗಬೇಕು, ಖರ್ಚು ಕಮ್ಮಿ ಆಗಬೇಕು, ದೇಶದ ಸಂಪತ್ತನ್ನು ಹೆಚ್ಚು ಮಾಡಬೇಕಾಗಿರತಕ್ಕ ಕಾಲದಲ್ಲಿ ಎರಡು, ಮೂರು ಪ್ಲಾನ್‌ಗಳಿಗೆ ಕೋಟಿಗಟ್ಟಲೆ ರೂಪಾಯಿಗಳಷ್ಟು ಹಣಬೇಕು. ಭೂಗರ್ಭದಲ್ಲಿ ಅಡಗಿರತಕ್ಕ ಸಂಪತ್ತಿನಲ್ಲಿ ಬೇಕಾದಷ್ಟು ಹಣಗಳಿಸಬಹುದು, ಅದು ನಮ್ಮ ಪ್ರಧಾನ ಕಾಲದಲ್ಲಿ ಕಣ್ಣಿಗೆ ಬೀಳುತ್ತಾ ಇದೆ. ಒಂದು ಕಡೆ 500 ಟನ್, ಒಂದು ಕಡೆ 5,800 ಟನ್, ಮ್ಯಾಂಗನೀಸ್ ಓರ್‌ನ್ನು ಕಾನ್‌ಫಿಸ್ಕೇಟ್ ಮಾಡಿಕೊಂಡಿದ್ದೇವೆ.

ಶ್ರೀ ಆರ್. ಅನಂತರಾಮನ್.—ತಮ್ಮ ಇಲಾಖಾ ಮುಖ್ಯಾಧಿಕಾರಿಗಳು ಇವುಗಳನ್ನೆಲ್ಲಾ ನೋಡುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಗಣಿಗಳು, ಕಾಡು, ಮೇಡುಗಳಲ್ಲಿ ಡಿಸ್ಟ್ರಿಬ್ಯೂಟ್ ಆಗಿವೆ. ತಕ್ಕಷ್ಟು ಸಿಬ್ಬಂದಿ ಇಲ್ಲ. ಸಿಬ್ಬಂದಿ ಬೇಕು, ಜೀಪುಗಳು ಬೇಕು, ಪತ್ತೆ ಮಾಡಬೇಕಾದರೆ ಅದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು. ವ್ಯವಸ್ಥೆ ಮಾಡದೆ ಒಬ್ಬ ಮನುಷ್ಯ ದೇಶವೆಲ್ಲಾ ಸುತ್ತಬೇಕೆಂದರೆ ಆಗುವುದಿಲ್ಲ. ನನಗೆ ಮೋಟಾರ್ ಇತ್ತು, ಅನುಕೂಲ ಇತ್ತು, ಜಾಗ್ರತೆ ಮೋಟಾರ್‌ನಲ್ಲಿ ಹೋದೆ. ಆ ಅನುಕೂಲತೆಯನ್ನು ಕಲ್ಪಿಸದೆ ಕೆಲಸಮಾಡಿ ಎಂದರೆ ಹೇಗೆ ಸಾಧ್ಯ? ಈಗ ಸರ್ಕಾರದ ಮುಂದೆ ಆ ಪ್ರಶ್ನೆ ಇದೆ. ಅದನ್ನು ಪರಿಶೀಲನೆ ಮಾಡಿ ತಕ್ಕ ವ್ಯವಸ್ಥೆ ಮಾಡುತ್ತೇವೆ.

ಸಲ್‌ಫ್ಯೂರಿಕ್ ಆಸಿಡ್ ತಯಾರು ಮಾಡಬೇಕೆಂಬ ಉದ್ದೇಶದಿಂದ ಸಲ್‌ಫರ್ ಪ್ಲಾಂಟ್ ಹಾಕುವುದಕ್ಕೆ ಹಣ ಒದಗಿಸಿದ್ದೇವೆ. ಸಲ್‌ಫರ್ ಮೈನ್ಸ್ ಇವೆ, ಅದಕ್ಕೆ 2½ ಲಕ್ಷ ಅಲ್ಲ 25 ಲಕ್ಷ ಆದರೂ ಖರ್ಚು ಮಾಡಿ ಸಲ್‌ಫರ್ ತೆಗೆದು ಸಲ್‌ಫ್ಯೂರಿಕ್ ಆಸಿಡ್ ತಯಾರು ಮಾಡಿ ದೇಶದ ಸಂಪತ್ತನ್ನು ಹೆಚ್ಚು ಮಾಡಬೇಕೆಂದಿದ್ದೇವೆ. ಅದು Outside the Plan ಆಗುತ್ತದೆ. ಆದರೂ ಕೂಡ ನಾವು ಒಂದು ತೀರ್ಮಾನ ಕೊಟ್ಟರೆ ನಮ್ಮದೇ ಆಖೈರು ತೀರ್ಮಾನವಲ್ಲ, ಅದರಮೇಲೆ ಕೇಂದ್ರ ಸರ್ಕಾರದವರಿಗೆ ಅಪೀಲು ಹೋಗುವುದಕ್ಕೆ ಅವಕಾಶವಿದೆ. ಅಪ್ಪಿ ತಪ್ಪಿ ನಮ್ಮ ತೀರ್ಮಾನವನ್ನು ಕೇಂದ್ರ ಸರ್ಕಾರದವರು ತಳ್ಳಿಹಾಕಿದರೆ, ಅದು ಸರ್ಕಾರದ ಮೇಲೆ ಒಂದು remark ಆಗುತ್ತದೆ. ಆದ್ದರಿಂದ ಯಾವುದನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಿ ಒಂದು ತೀರ್ಮಾನ ಮಾಡಬೇಕು, ನಾವು firm ground ಮೇಲೆ ಇದ್ದೇವೆ ಎಂಬುದರ ಮೇಲೆ ತೀರ್ಮಾನ ಕೊಡಬೇಕು. ಕೆಲವು ತೀರ್ಮಾನಗಳನ್ನು ಕೊಟ್ಟಿದ್ದೇವೆ; ಅದರ ಮೇಲೆ ಅಪೀಲು ಹೋಗಿದ್ದರು ನಮ್ಮ ತೀರ್ಮಾನವೇ ಸರಿ ಎಂದು ಅವರು ತೀರ್ಮಾನ ಕೊಟ್ಟಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ನಿಮಗೆ ವಿರೋಧವಾಗಿ ಯಾವುದೂ ಇಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವುದೂ ಇಲ್ಲ. ಇದ್ದರೆ ಅದನ್ನು ತಿಳಿಸುತ್ತೇನೆ. ಸರ್ಕಾರದ ಅಭಿಪ್ರಾಯ ಏನೆಂಬುದನ್ನು ಈ ಸಭೆಯ ವೇದಿಕೆಯ ಮೂಲಕ ದೇಶಕ್ಕೆ ತಿಳಿಸುತ್ತೇನೆ. ಯಾರು ಬೇಕಾದರೂ ಕಾನೂನಿಗನುಗುಣವಾಗಿ ಕೆಲಸಮಾಡಿ; ಎಷ್ಟು ಬೇಕಾದರೂ ಸಹಾಯ ಮಾಡುತ್ತೇವೆ. ಅದು ಬಿಟ್ಟು ತಪ್ಪು ದಾರಿಯಲ್ಲಿ ಹೋದರೆ ಕಷ್ಟ, ಸಹಾಯ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಕೈಯಲ್ಲಿ ಸಾಧ್ಯವಿಲ್ಲದೆ ಇದ್ದರೆ, ಸಾಧ್ಯವಿಲ್ಲವೆಂದು ಹೇಳುತ್ತೇನೆ. ಅದರ ಮೇಲೆ ಬೇಕಾದರೆ ತಾವು ಸಭೆಯವರು ಚರ್ಚೆ ಮಾಡಬಹುದು. ಇರತಕ್ಕ ವಿಷಯವನ್ನು ತಿಳಿಸುವುದಿಲ್ಲವೆನ್ನುವುದಕ್ಕೆ ಅದು ನನ್ನ ಸ್ವತ್ತಲ್ಲ; ಅದು ಸಾರ್ವಜನಿಕರ ಸ್ವತ್ತು. ಅದರ ಬಗ್ಗೆ ವ್ಯವಹರಿಸುವುದರಲ್ಲಿ ಅದನ್ನೇನೂ private property ಎಂದು ಭಾವಿಸಬೇಕಾಗಿಲ್ಲ. It cannot be treated as a private property. It is a public property; everybody is entitled to know what is happening unless the public interest requires that it should be kept confidential.

ಆಮೇಲೆ ಸಿಮೆಂಟ್ ಫ್ಯಾಕ್ಟರಿಯ ವಿಷಯ. ಇದಕ್ಕೊಂದು ಕಮಿಟಿಯನ್ನು ಏರ್ಪಾಡು ಮಾಡಿದ್ದೇವೆ ಅವರು ಈ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವವರಾಗಿದ್ದಾರೆ. ಆ ತೀರ್ಮಾನ ಸರ್ಕಾರಕ್ಕೆ ಬಂದ ಕೂಡಲೆ ನೀವು ಎಷ್ಟು ಬೇಗ ಮಾಡಬೇಕೆಂದು ನಿರೀಕ್ಷಣೆ ಮಾಡಿಕೊಂಡಿದ್ದೀರೋ ಅದಕ್ಕಿಂತ ಬೇಗ ಕೆಲಸ ಮಾಡುತ್ತೇವೆಂದು ನಾನು ಹೇಳುತ್ತೇನೆ.

MR. DEPUTY SPEAKER.—The question is :

> "That a sum not exceeding Rs. 9,83,000 be granted to the Government to defray the charges which will come in course of payment during the year ending 31st day of March 1957, in respect of 'Scientific Departments'."

The motion was adopted.

MR. DEPUTY SPEAKER.—The House will now rise and meet at 12 NOON tomorrow.

The House adjourned at Seven of the Clock to meet again at Twelve of the Clock on Monday, the 19th March 1956.

WD 2896—G1 B—550—17 5 56.